ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: ೪ ಸಂಚಿಕೆ: ೧ ದ್ವೈಮಾಸಿಕ ಜನವರಿ - ಫೆಬ್ರವರಿ, ೨೦೨೫ ಪುಟಗಳು: ೭೨

ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



# ಸಂಪದದೊಳಗೆ...


೦೩ ಸಂಪಾದಕೀಯ...
ಡಾ. ಸುರೇಶ ಸಗರದ

೦೪ ರಾಜ್ಯಾಧ್ಯಕ್ಷರ ನುಡಿ...
ಡಾ. ವಿ. ವಿ. ಚಿನಿವಾಲರ್

೦೫ ಅಧ್ಯಕ್ಷರ ನುಡಿ...
ಡಾ. ಗಡ್ಡಿ ದಿವಾಕರ

೦೬ ತಾಯಿ ಮಗುವಿನ ನಡುವೆ ಅಸಾಮರಸ್ಯ ಕೆಂಪು ರಕ್ತಕಣಗಳ ಸಮಸ್ಯೆ ಮತ್ತು ಭ್ರೂಣಕ್ಕೆ ರಕ್ತದಾನ (ಪ್ರಚಲಿತ)
ಡಾ. ಜಾಗೃತಿ

೦೯ ಶ್ವಾಸಕೋಶ ಆರೋಗ್ಯದ ಮೇಲೆ ಪಾರಿವಾಳದ ಪ್ರಭಾವ (ಕಾಯಿಲೆ ಮತ್ತು ಚಿಕಿತ್ಸೆ)
ಡಾ. ಕೆ. ಬಿ. ಸೂರ್ಯ ಕುಮಾರ್

೧೧ ಜಂತು ಹುಳು ಬಾಧೆ (ಆರೋಗ್ಯ ದಿನಾಚರಣೆ)
ಡಾ. ರಾಘವೇಂದ್ರ ಕೆ. ವಿ.

೧೪ ಪ್ರಾಚೀನ ರೋಮಿನ ಮಿಲಿಟರಿ ಆಸ್ಪತ್ರೆಗಳು (ವೈದ್ಯ ಲೋಕದ ವಿಸ್ಮಯಗಳು)
ಡಾ. ನಾ. ಸೋಮೇಶ್ವರ್

೧೮ ಉತ್ತಮ ಆರೋಗ್ಯಕ್ಕಾಗಿ ಸೂಕ್ತ ಜೀವನ ಶೈಲಿಯ ಸೂತ್ರಗಳು (ಜೀವನ ಶೈಲಿ ಸೂತ್ರಗಳು)
ಡಾ. ರಾಜಲಕ್ಷ್ಮಿ

೨೧ ಕಾಯಿಲೆ-ಚಿಕಿತ್ಸೆ ಮತ್ತು ಬದಲಾಗುತ್ತಿರುವ ಕಾಲ (ವೈದ್ಯೇತರ)
ಡಾ. ಎಸ್. ಆರ್. ಕುಲಕರ್ಣಿ

೨೪ ಮಕ್ಕಳು: ಅಂದು-ಇಂದು (ವೈದ್ಯೇತರ)
ಡಾ. ಸುಲೋಚನಾ ಚಿನಿವಾಲರ್

೨೫ ಕಾಣೆಯಾದ ಹೊಸರುಚಿ ಪುಸ್ತಕ (ಭಾಗ - ೨) (ನೀಳ್ಗತೆ)
ಡಾ. ಕೃಷ್ಣ ಪ್ರಸಾದ್ ಆರ್.

೩೩ ಮೂಕಜ್ಜಿಯ ಕನಸುಗಳು (ಕೃತಿ ಪರಿಚಯ)
ಡಾ. ರಶ್ಮಿ ಮರಳಿಹಳ್ಳಿ

೩೫ ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು (ಕೃತಿ ಪರಿಚಯ)
ಡಾ. ಉಷಾ ಎಂ. ಜಿ.

೩೭ ಅನುರಾಗ ಅರಳಿತು!! (ಅನಿವಾಸಿ ಲೋಕ,ಕಥೆ)
ಡಾ. ಮೀನಾ ಸುಬ್ಬರಾವ್

೪೧ ಕವಲು ದಾರಿ (ಅನಿವಾಸಿ ಲೋಕ,ಕಥೆ)
ಡಾ. ಶಿವಶಂಕರ ಎನ್. ಮೇಟಿ

೪೭ ಕಾವ್ಯ ಸಂಪದ
ಡಾ. ನಿತ್ಯಾನಂದ ಸುಂಡವಾಳು,
ಡಾ. ಶಶಿಕಲಾ ಪುಟ್ಟಸ್ವಾಮಿ

೪೮ ಮುಗಿಲ ಕನಸು (ವಿದ್ಯಾರ್ಥಿ ಲೋಕ)
ವರ್ಷಿತಾ ಎಂ. ಎಂ.

೪೯ ಓ ಮಾನವ ಎತ್ತ ಸಾಗುತ್ತಿರುವುದು ನಿನ್ನ ಚಿತ್ತ (ವಿದ್ಯಾರ್ಥಿ ಲೋಕ)
ಸೃಜನ ಆರ್.

೫೦ ಜಳಕ = ಸ್ನಾನ (ಪದ ಸಂಪದ)
ಡಾ. ಕಿರಣ ಪೇಟಕರ್

೫೧ ಪದಬಂಧ - ೧೯ (ಪದಬಂಧ)
ಡಾ. ರಮೇಶ್ ಬಾಬು

೫೩ ಕನ್ನಡ ಚಟುವಟಿಕೆಗಳ ವರದಿ
ಡಾ. ಶುಭ್ರತಾ ಕೆ. ಎಸ್.

೫೯ ಬಹುಮುಖ ವ್ಯಕ್ತಿತ್ವದ ವೈದ್ಯ, ಕನ್ನಡದ ಕಟ್ಟಾಳು ಡಾ. ಹೆಚ್. ಬಿ. ರಾಜಶೇಖರ (ಸಂದರ್ಶನ)
ಡಾ. ಅವಿನಾಶ್ ಕವಿ

೬೭ ಚಿಣ್ಣರ ಲೋಕ
ನೆಸ್ರಾ ಎಸ್ಪಾನ್ಯಾಲ್, ಶುಭದಾ ಶ್ರೀಶೈಲ ಚಿನಿವಾಲರ, ರಾಜವೀರ ಚಿನಿವಾಲರ, ನಮಿಷಾ ಎಲ್. ಕೃಷ್ಣಾ, ನಮ್ರತಾ ಎಲ್. ಕೃಷ್ಣಾ

೭೦ ಚಿತ್ರ ಸಂಪದ
ಡಾ. ಎಂ. ಎಸ್. ಖಾದಿ ಗಂಗಾವತಿ, ಡಾ. ನಾಗಶ್ರೀ ನಲ್ಲಪೇಟ, ಡಾ. ವರ್ಷಾ ತಂದುರೆ


## ಲೇಖಕರಿಗೆ ಮಾಹಿತಿ:

- ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
- ಲೇಖನಗಳನ್ನು ವರ್ಡ್ ಫೈಲ್‌ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
- ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
- ಪ್ರಕಟಿಸಿದ ಲೇಖನಗಳಿಗೆ ಲೇಖಕರೆ ಹೊಣೆ

**ಸಂಪಾದಕರ ಮಂಡಳಿ ವೈದ್ಯ ಸಂಪದ ೨೦೨೫**

**ಡಾ. ವಿ. ವಿ. ಚಿನಿವಾಲರ್** ರಾಜ್ಯಾಧ್ಯಕ್ಷರು
**ಡಾ. ಸೂರಿರಾಜು ವಿ.** ಕಾರ್ಯದರ್ಶಿ
**ಡಾ. ವೀರಭದ್ರಯ್ಯ ಟಿ. ಎ.,** ನಿಯೋಜಿತ ರಾಜ್ಯಾಧ್ಯಕ್ಷರು

ಪ್ರಧಾನ ಸಂಪಾದಕರು
**ಡಾ. ಸುರೇಶ ಸಗರದ**
drssagarad@hotmail.com | +91 944 813 9339

**ಡಾ. ಗಡ್ಡಿ ದಿವಾಕರ**
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ (೨೪–೨೫)

**ಡಾ. ವೀಣಾ ಎನ್. ಸುಳ್ಯ,** ಉಪ ಸಂಪಾದಕರು
drnveena@gmail.com | +91 944 821 5940

**ವಿಭಾಗೀಯ ಸಂಪಾದಕರು**

ಪ್ರಚಲಿತ – **ಡಾ. ಶ್ರೀನಿವಾಸ ಹರಪನಹಳ್ಳಿ**
h_shrinivas@hotmail.com | +91 988 623 6300

ವೈದ್ಯೇತರ – **ಡಾ. ಕಿರಣ ಪೇಟಕರ್**
drkiranpetkar2009@gmail.com | +91 87691 83863

ವಿದ್ಯಾರ್ಥಿ ಲೋಕ – **ಡಾ. ವಿನಯ ಶ್ರೀನಿವಾಸ್**
vinaya_s@rocketmail.com | +91 984 408 3284

ಕಥೆ – **ಡಾ. ದಿವ್ಯಾ ಕೆ. ಎನ್.**
divyaural@yahoo.co.in | +91 988 615 7094

ಕಾಯಿಲೆ ಮತ್ತು ಚಿಕಿತ್ಸೆ – **ಡಾ. ಜ್ಯೋತಿ ಘೋಂಗಡೆಮಠ**
jsgvvd2@gmail.com | +91 924 213 9990

ಸಂದರ್ಶನ / ವ್ಯಕ್ತಿ ವಿಷಯ – **ಡಾ. ಅವಿನಾಶ್ ಕವಿ**
dravinashkavi@gmail.com | +91 95383 09785

ಚಿಣ್ಣರ ಲೋಕ – **ಡಾ. ಅರ್ಚನಾ ಮುರಳಿಧರನ್**
drarchu@gmail.com | +91 81058 22519

ಪದಬಂಧ / ಪದ ಸಂಪದ / ಇತರೆ – **ಡಾ. ಸುಮಾ ಗುಡಿ**
gudi.suma@gmail.com | +91 988 061 6349

ಕಾವ್ಯ ಸಂಪದ – **ಡಾ. ಮೃದುಲಾ ಎ. ಎಮ್.**
mridu_doc@yahoo.com | +91 984 467 5254

ಕೃತಿ ಪರಿಚಯ – **ಡಾ. ಉಷಾ ಎಂ. ಜಿ.**
ushaumeshdvg@rediffmail.com | +91 944 866 7233

ವರದಿ – **ಡಾ. ಶುಭ್ರತ ಕೆ. ಎಸ್.**
shubrataks@gmail.com | +91 944 814 9927

ಅನಿವಾಸಿ ಲೋಕ – **ಡಾ. ಶಿವಶಂಕರ ಎನ್. ಮೇಟಿ**
drmeti_kmc@yahoo.co.in | +44 789 435 4400

ಆರೋಗ್ಯ ದಿನಾಚರಣೆ – **ಡಾ. ಇಂದಿರಾ ದೊಡ್ಡಬಳ್ಳಾಪುರ**
indirashyamprasad@gmail.com | +91 897 082 1216

ಜೀವನ ಶೈಲಿಯ ಸೂತ್ರಗಳು – **ಡಾ. ವೀಣಾ ಎಸ್ ಭಟ್**
veenaseetharambhat@gmail.com | +91 948 035 3978

ಸಂಘಟನೆ – **ಡಾ. ಮಧುಸೂದನ ಕಾರಿಗನೂರು**
madhusudhanva@gmail.com | +91 944 823 7145

ವೈದ್ಯ ಲೋಕದ ವಿಸ್ಮಯ – **ಡಾ. ನಾ. ಸೋಮೇಶ್ವರ**
naasomeswara@gmail.com | +91 988 046 5661

ಚಿತ್ರ ಸಂಪದ – **ಡಾ. ಅರವಿಂದ ಪಟೇಲ್ / ಡಾ. ಶಾಂತಲಾ**
draravindpatel@gmail.com | +91 944 891 8764
shanyashas@gmail.com | +91 944 867 9684

**ವಿಳಾಸ:**

**ವೈದ್ಯ ಸಂಪದ**
**ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,**
**ಆಲೂರು ವೆಂಕಟರಾವ್ ರಸ್ತೆ,**
**ಬೆಂಗಳೂರು** 560018,
**ದೂರವಾಣಿ:** 080 26703255,
**ಮಿಂಚಂಚೆ:** vaidyasampadaeditor@gmail.com

# ಸಂಪಾದಕೀಯ...



**ಡಾ. ಸುರೇಶ ಸಗರದ**
ಪ್ರಧಾನ ಸಂಪಾದಕರು

**ಆ**ತ್ಮೀಯ ಓದುಗರೇ ...

ಹೊಸ ವರುಷದ ಹಾರ್ದಿಕ ಶುಭಾಶಯಗಳು. ವೈದ್ಯ ಸಂಪದ ನಾಲ್ಕನೆಯ ವರುಷಕ್ಕೆ ತಲುಪಿದೆ. ಮೂರು ವರುಷಗಳ ಯಶಸ್ವಿ ಪಯಣಕ್ಕೆ ಓದುಗರ ಪ್ರೋತ್ಸಾಹ ಕಾರಣ. ಸಂಪಾದಕ ಮಂಡಳಿ ಹೊಸ ಪ್ರಯೋಗಗಳೊಂದಿಗೆ ಓದುಗರ ಆಸಕ್ತಿಗೆ ಪೂರಕವಾಗಿ ನಿರ್ಧಾರ ಕೈಗೊಳ್ಳುತ್ತಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು ಎಂದು ತಿಳಿದು ಬಂದಿದೆ. ಹಿರಿಯ ಸಾಹಿತಿ ಗೋರುಚ ಅವರ ಸರ್ವಾಧ್ಯಕ್ಷತೆಯಲ್ಲಿ ಕನ್ನಡದ ತೇರು ಎಳೆಯಲಾಗಿದೆ. ಸಾಹಿತ್ಯ ಸಮ್ಮೇಳನದ ಪೂರ್ವದಲ್ಲಿ ಸಾಮಾನ್ಯವಾಗಿ ಕೆಲವು ಗೊಂದಲಗಳು ಉಂಟಾಗುವುದನ್ನು ಕಾಣುತ್ತೇವೆ. ಆದರೆ ತಾಯಿ ಭುವನೇಶ್ವರಿಯ ಸೇವೆಗೆ ಕನ್ನಡಿಗರು ಎಲ್ಲವನ್ನೂ ಮರೆತು ಒಂದುಗೂಡಿರುವುದು ನಮ್ಮ ಕನ್ನಡ ಪ್ರಜ್ಞೆಗೆ ಸದಾ ಸಾಕ್ಷಿ. ಕನ್ನಡದ ಅಸ್ಮಿತೆಯ ವಿಷಯ ಎದುರಾದಾಗ ನಾವೆಲ್ಲಾ ಒಂದೇ. ಡಿಸೆಂಬರ್ ೨೭, ೨೮ ರಂದು ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರೀಯ ಸಮ್ಮೇಳನವನ್ನು ಹೈದರಾಬಾದ್ ನಲ್ಲಿ ಹೈದರಾಬಾದ್ ನಗರ ಶಾಖೆಯ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಕರ್ನಾಟಕ ರಾಜ್ಯ ಶಾಖೆಯಿಂದ ಹೆಚ್ಚಿನ ಸದಸ್ಯರು ಭಾಗವಹಿಸಿದ್ದರು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ತೆಲಂಗಾಣ ರಾಜ್ಯದ ರಾಜ್ಯಪಾಲರಾದ ಶ್ರೀ ಜಿಷ್ಣು ದೇವ ವರ್ಮಾ ಅವರು ಪ್ರಸ್ತುತ ವೈದ್ಯಕೀಯ ಸೇವೆಗಳನ್ನು ಶ್ಲಾಘಿಸಿ ವೈದ್ಯಕೀಯ ವೃತ್ತಿ ಮತ್ತು ವೈದ್ಯಕೀಯ ಶಿಕ್ಷಣದ ಪ್ರಸ್ತುತ ಸವಾಲುಗಳಿಗೆ

೭೫ನೇ ಪುಟಕ್ಕೆ...

## ರಾಜ್ಯಾಧ್ಯಕ್ಷರ ನುಡಿ...



**ಡಾ. ವಿ. ವಿ. ಚಿನಿವಾಲರ್**
ರಾಜ್ಯಾಧ್ಯಕ್ಷರು ೨೦೨೪-೨೫
ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆ

ಆತ್ಮೀಯ ವೈದ್ಯ ಸಂಪದ ಓದುಗರೇ

ಎಲ್ಲರಿಗೂ ಕ್ರಿಸ್ಮಸ್, ೨೦೨೫ ಹೊಸ ವರುಷದ ಮತ್ತು ಮಕರ ಸಂಕ್ರಮಣದ ಶುಭಾಶಯಗಳು, ಕಳೆದ ವರುಷದ ನೆನಪುಗಳನ್ನು – ಘಟನೆಗಳನ್ನು ನೆನಪಿಸಿಕೊಳ್ಳುತ್ತಾ ಮರೆಯುತ್ತಾ ಹೊಸ ವರುಷವನ್ನು ಸ್ವಾಗತಿಸೋಣ ಹೊಸ ಚೈತನ್ಯವನ್ನು ಪಡೆಯೋಣ. ಹೊಸ ವರ್ಷಾಚರಣೆಯ ಸಂಭ್ರಮ ಸಂಯಮದಿಂದ ಕೂಡಿರಲಿ ಸಂಭ್ರಮಾಚರಣೆ ಮಿತಿ ಮೀರದಿರಲಿ. ಸಾವಿನ ಸೂತಕ ತರದಿರಲಿ. ನಮ್ಮೆಲ್ಲರ ಜೀವನದಲ್ಲಿ ಸುಖ ಸಂತೋಷ ಮತ್ತು ಸಮೃದ್ಧಿ ತರಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ. ವೈದ್ಯರ ಮತ್ತು ಸಾರ್ವಜನಿಕರ ನಡುವಿನ ಅವಿನಾಭಾವ ಸಂಬಂಧ ವೃದ್ಧಿಸಲಿ ಎಂದು ಆಶಿಸೋಣ. ಸೂರ್ಯನ ಚಲನೆ ದಕ್ಷಿಣಾಯದಿಂದ ಉತ್ತರಾಯಣದ ಕಡೆಗೆ ಪ್ರಯಾಣ. ಮಕರ ರಾಶಿ ಪ್ರವೇಶ ಮಕರ ಸಂಕ್ರಮಣದ ಆಚರಣೆ ರೈತರಲ್ಲಿ ಹೊಸ ಹಿಗ್ಗು ಹೊಲಗಳಲ್ಲಿ ಚರಗ ಚೆಲ್ಲುವ ಸಂಭ್ರಮ. ಪರಸ್ಪರ ಎಳ್ಳು-ಬೆಲ್ಲ ಹಂಚುವ ಸಂಭ್ರಮ. ಈ ಸಂಭ್ರಮ ವರುಷವೆಲ್ಲ ತುಂಬಿರಲಿ.

ವೈದ್ಯ ಸಾಹಿತ್ಯ ಉಳಿಸಿ ಬೆಳೆಸಿ ಎನ್ನುವ ತತ್ತ್ವಕ್ಕೆ ಬದ್ಧವಾಗಿ ಕನ್ನಡ ವೈದ್ಯಬರಹಗಾರರ ಸಮಿತಿಯು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅಧ್ಯಕ್ಷರ ಶಾಖಾ ಭೇಟಿಗಳಲ್ಲಿ ವೈದ್ಯ ಬರಹಗಾರರ ಸಮಿತಿಯ ಕಾರ್ಯಕ್ರಮಗಳ ಬಗ್ಗೆ ತಿಳಿಸಿದ್ದಲ್ಲದೆ, ಅವರಲ್ಲಿರುವ ಕನ್ನಡದ ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಲು ತಾವುಗಳೂ ಸಹ ಕಥೆ-ಕವನಗಳನ್ನು ಬರೆದು ಕಳಿಸಬಹುದು. ವೈದ್ಯ ಸಂಪದ ದ್ವೈಮಾಸಿಕ ಪತ್ರಿಕೆಗೆ ಸದಸ್ಯರಾಗಬಹುದು. ಬರೆಹ ಮತ್ತು ಚಿಂತನೆಗಳು ಸೃಜನಶೀಲತೆಯನ್ನು ಹೆಚ್ಚಿಸುತ್ತವೆ. ಯಾವ ವಿಷಯದಲ್ಲಿಯೇ ಆಗಲಿ ಒಳ್ಳೆಯ ವಿಚಾರಗಳನ್ನು ಬರೆದು ಕೊಡುವ ಸಾಕಷ್ಟು ವೈದ್ಯ ಬರಹಗಾರರು ನಮ್ಮಲ್ಲಿದ್ದಾರೆ. ಹನಿ-ಹನಿ ಕೂಡಿದರೆ ಹಳ್ಳ ಎನ್ನುವ ಹಾಗೆ ಪ್ರತಿಯೊಬ್ಬರೂ ತಮ್ಮಲ್ಲಿರುವ ಪ್ರತಿಭೆಯನ್ನು ಹೊರಹೊಮ್ಮಿಸಲು ಇದು ಒಂದು ಒಳ್ಳೆಯ ವೇದಿಕೆ. ಎಲ್ಲರಿಗೂ ಮತ್ತೊಮ್ಮೆ ಕ್ರಿಸ್ಮಸ್, ಹೊಸ ವರುಷದ ಮತ್ತು ಮಕರ ಸಂಕ್ರಮಣದ ಶುಭಾಶಯಗಳು.

ಶುಭಾಶಯಗಳೊಂದಿಗೆ..

**ಡಾ. ವಿ. ವಿ. ಚಿನಿವಾಲರ್**
ರಾಜ್ಯಾಧ್ಯಕ್ಷರು
ಭಾ ವೈ ಸಂಘ ಕರ್ನಾಟಕ ರಾಜ್ಯ ಶಾಖೆ

# ಆರಂಭಮ್ ಉತ್ತಮ ಜನಾಃ ನ ಪರಿತ್ಯಜಂತಿ



**ಡಾ. ಗಡ್ಡಿ ದಿವಾಕರ**
ಅಧ್ಯಕ್ಷರು,
ಕನ್ನಡ ವೈದ್ಯ ಬರಹಗಾರರ ಸಮಿತಿ (೨೦೨೪–೨೦೨೫)

ಆತ್ಮೀಯರೇ,

ಎಲ್ಲಾ ಕನ್ನಡ ಹೃದಯದ ಹಿರಿಯರಿಗೆ ಹಾಗು ಸ್ನೇಹಿತರಿಗೆ ವಂದನೆಗಳು ಹಾಗು ನೂತನ ವರ್ಷದ ಶುಭಾಷಯಗಳು.

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ಎಲ್ಲಾ ಸದಸ್ಯರಿಗೆ ವಂದನೆಗಳು. ೨೦೨೪–೨೦೩೫ ರ ಸಾಲಿಗೆ ಕನ್ನಡ ವೈದ್ಯ ಬರಹಗಾರರ ಉಪಸಮಿತಿಗೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಿದ್ದಕ್ಕಾಗಿ ರಾಜ್ಯಾಧ್ಯಕ್ಷರಾದ ಡಾ. ವಿ. ವಿ. ಚಿನಿವಾಲರ್ ಸಮೇತ ಎಲ್ಲಾ ಪದಾಧಿಕಾರಿಗಳಿಗೆ ನಾನು ಧನ್ಯವಾದಗಳನ್ನು ಹೇಳಬಯಸುತ್ತೇನೆ.

ಕನ್ನಡ ನಮ್ಮ ಅಸ್ಮಿತೆ. ಹುಟ್ಟಿದ್ದು ಕನ್ನಡವಾದರೂ ವೃತ್ತಿ ಶಿಕ್ಷಣಕ್ಕಾಗಿ ನಡೆದ ಆಂಗ್ಲ ಭಾಷೆಯ ಆರ್ಭಟದಲ್ಲಿ ಎಲ್ಲೋ ಹುದುಗಿರುವ ಕನ್ನಡವನ್ನು ಮತ್ತೆ ಮುನ್ನೆಲೆಗೆ ತರುವ ಕೈಂಕರ್ಯದಲ್ಲಿ ಉದ್ಭವಿಸಿದ ಈ ವೈದ್ಯ ಸಂಪದದ ೧೯ನೇ ಆವೃತ್ತಿ ಪ್ರಕಟವಾಗುತ್ತಿರುವುದರ ಹಿಂದೆ ಪ್ರಧಾನ ಸಂಪಾದಕರಾದ ಡಾ. ಸುರೇಶ್ ಸಗರದ ಅವರ ನೇತೃತ್ವದ ಬಳಗದ ಅನೇಕರ ಪರಿಶ್ರಮವಿರುವುದು ಸರ್ವವಿದಿತ ಹಾಗೂ ಶ್ಲಾಘನೀಯ. ಮೊದಲಿಗೆ ಡಿಜಿಟಲ್ ಆವೃತ್ತಿಯಲ್ಲಿ ಪ್ರಕಟಗೊಂಡು ಕಳೆದ ವರ್ಷದಲ್ಲಿ ಮುದ್ರಣ ಆವೃತ್ತಿಗೆ ರೂಪಾಂತರಗೊಂಡುದರ ಹಿಂದೆ ತಮ್ಮೆಲ್ಲರ ಸಹಕಾರವೂ ಉಪಸಮಿತಿಯ ನಿಕಟಪೂರ್ವ ಅಧ್ಯಕ್ಷರಾದ ಡಾ. ವೀಣಾ ಎನ್. ಅವರಿಗೆ ಸಿಕ್ಕಿದೆ. ಮೌಲ್ಯಯುತವಾದ ವೈದ್ಯ ಹಾಗು ವೈದ್ಯೇತರ ಬರಹಗಳಿಂದ ಕೂಡಿದ ಸಂಪದದ ಪ್ರತಿಯೊಂದು ಆವೃತ್ತಿಯೂ ಸಂಗ್ರಹಯೋಗ್ಯವಾಗಿದೆ ಹಾಗು ಯಾವುದೇ ವಾಣಿಜ್ಯ ಪತ್ರಿಕೆಗೆ ಸರಿಸಮನಾಗಿ ನಿಲ್ಲುವ ರೀತಿ ರೂಪುಗೊಂಡಿದೆ. ಇದರ ಹಿಂದೆ ಇರುವ ವಿಭಾಗೀಯ ಸಂಪಾದಕರ ಶ್ರಮ ಅನುಕರಣೀಯ. ವೈದ್ಯ ಸಂಪದವು, ಕೇವಲ ವೈದ್ಯರಿಗಾಗಿ ಮಾತ್ರವಲ್ಲ, ಆರೋಗ್ಯದ ಅರಿವನ್ನು ಸಾಮಾನ್ಯ ಜನತೆಯತ್ತ ಕೊಂಡೊಯ್ಯುವ ಒಂದು ಅನನ್ಯ ವೇದಿಕೆಯಾಗಿರುತ್ತದೆ.

ಕಳೆದ ವರ್ಷ ಡಾ. ವೀಣಾ ಎನ್. ಅವರ ಅಧ್ಯಕ್ಷತೆಯಲ್ಲಿ ದತ್ತಿ ಉಪನ್ಯಾಸಗಳ ಸಹಿತ ಹಲವು ಕಾರ್ಯಕ್ರಮಗಳು ಹಾಗೂ ಸಾಹಿತಿಗಳೊಂದಿಗೆ ಸಂಜೆ ಕಾರ್ಯಕ್ರಮ, ವಾಸವಿ ಸಾಹಿತ್ಯ ಕಲಾವೇದಿಕೆ ಹಾಗು ಕನ್ನಡ ವೈದ್ಯ ಬರಹಗಾರರ ಬಳಗದಿಂದ ಸಮರ್ಪಕವಾಗಿ ಮೂಡಿಬಂದದ್ದು ಶ್ಲಾಘನೀಯ. ಈ ವರ್ಷವೂ ಈ ಕಾರ್ಯಕ್ರಮಗಳ ಮುಂದುವರಿಕೆಗೆ ತಮ್ಮೆಲ್ಲೆರ ಸಹಕಾರ ಅತ್ಯಗತ್ಯ.

ಆಗಸ್ಟ್ ತಿಂಗಳಲ್ಲಿ ಬೆಳಗಾವಿಯಲ್ಲಿ ಡಾ. ಅವಿನಾಶ್ ಕವಿ ಅವರ ಸಾರಥ್ಯದಲ್ಲಿ ೫ನೇ ಕನ್ನಡ ವೈದ್ಯ ಬರಹಗಾರರ ಉಪ ಸಮಿತಿಯ ವಾರ್ಷಿಕ ಸಮ್ಮೇಳನ ಸಂಘಟಿತ ಪ್ರಯತ್ನದ ಫಲಶ್ರುತಿಯಿಂದ ಅತ್ಯುತ್ತಮವಾಗಿ ಮೂಡಿಬಂದಿತ್ತು. ಆಯೋಜಕರೆಲ್ಲರಿಗೂ ಹಾರ್ದಿಕ ಅಭಿನಂದನೆಗಳು. ಈಗ ಬಳಗದ ಮುಂದಿರುವ ಧ್ಯೇಯ

- ಬಳಗದ ಕಾರ್ಯವ್ಯಾಪ್ತಿ ಹಾಗೂ ಚಟುವಟಿಕೆಗಳನ್ನು ವಿಸ್ತರಿಸುವುದು.
- ಬಳಗವನ್ನು ಸದೃಢಗೊಳಿಸುವುದು

ಈ ನಿಟ್ಟಿನತ್ತ ಮೊದಲ ಹೆಜ್ಜೆಯಾಗಿ ಕರ್ನಾಟಕದ ಎಲ್ಲಾ ಭಾರತೀಯ ವೈದ್ಯಕೀಯ ಸಂಘದ ಶಾಖೆಗಳಲ್ಲಿ

೫೨ನೇ ಪುಟಕ್ಕೆ...



ಡಾ. ಜಾಗೃತಿ
ಫೀಟಲ್ ಮೆಡಿಸಿನ್ ಸ್ಪೆಷಲಿಸ್ಟ್
ದೊಡ್ಡಬಳ್ಳಾಪುರ

ಪ್ರಚಲಿತ

# ತಾಯಿ ಮಗುವಿನ ನಡುವೆ ಅಸಾಮರಸ್ಯ ಕೆಂಪು ರಕ್ತಕಣಗಳ ಸಮಸ್ಯೆ ಮತ್ತು ಭ್ರೂಣಕ್ಕೆ ರಕ್ತದಾನ




ಡಾ ಶ್ರೀನಿವಾಸ ಹರಪನಹಳ್ಳಿ
ವಿಭಾಗೀಯ ಸಂಪಾದಕರು

ಮಾನವನ ಕೆಂಪು ರಕ್ತಕಣಗಳ ಮೇಲೆ ಇರುವ ಪ್ರತಿಜನಕಗಳು ಮುಖ್ಯವಾಗಿ ಎ ಬಿ ಒ ಮತ್ತು ಆರ್. ಹೆಚ್.ಡಿ. (Rhd) ಮತ್ತು ಅಪರೂಪವಾಗಿ ಇತರೆ ಆರ್ ಎಚ್ ಪ್ರತಿಜನಕಗಳಾದ C,c,E,e,Kell, Duffy, Kidd ಮುಂತಾದವು. ಕೆಂಪು ರಕ್ತಕಣಗಳ ಮೇಲೆ ನಿರ್ದಿಷ್ಟ ಪ್ರತಿಜನಕಗಳ ಉಪಸ್ಥಿತಿಯು ಒಬ್ಬ ವ್ಯಕ್ತಿಯ ರಕ್ತದ ಗುಂಪನ್ನು ನಿರ್ಧರಿಸುತ್ತದೆ. ಉದಾಹರಣೆಗೆ ವ್ಯಕ್ತಿಯ ಕೆಂಪು ರಕ್ತಕಣಗಳ ಆರ್.ಎಚ್.ಡಿ. ಪ್ರತಿಜನಕವನ್ನು ಹೊಂದಿದ್ದರೆ ಆರ್ ಎಚ್ ಪಾಸಿಟಿವ್ ಎಂದು ಹಾಗೂ ಹೊಂದಿರದಿದ್ದರೆ ಆರ್ ಎಚ್ ನೆಗೆಟಿವ್ ಎಂದು ಗುರುತಿಸಲಾಗುತ್ತದೆ. ಆರ್ ಎಚ್ ಐಸೊ ಇಮ್ಯುನೈಸೇಶನ್ ಎಂದರೆ ಕೆಂಪು ರಕ್ತಕಣಗಳ ಮೇಲ್ಮೈಯಲ್ಲಿರುವ ಆರ್ ಎಚ್ ಪ್ರತಿಜನಕಗಳ ವಿರುದ್ಧ ಪ್ರತಿಕಾಯಗಳ ಉತ್ಪತ್ತಿಯಾಗುವುದು. ಆರ್ ಎಚ್ ಐಸೊ ಇಮ್ಯುನೈಸೇಶನ್ನ ಹೆಚ್ಚಿನ ಪ್ರಕರಣಗಳಿಗೆ ಪ್ರಮುಖವಾಗಿ ಕಾರಣವಾದ ಆರ್ ಎಚ್ ಪ್ರತಿಜನಕವು ರೀಸಸ್ಡಿ ಪ್ರತಿಜನಕವಾಗಿದೆ. ತೀವ್ರವಾದ ಐಸೊ ಇಮ್ಯುನೈಸೇಶನ್‌ಅನ್ನು ಉಂಟುಮಾಡುವ ಸಾಮರ್ಥ್ಯವಿರುವ ಇತರ ವಿಲಕ್ಷಣ ಆರ್ ಎಚಚ್ ಪ್ರತಿಜನಕಗಳು c, E ಮತ್ತು Kell ಪ್ರತಿಜನಕಗಳಾಗಿವೆ. ಉಳಿದ ಆರ್ ಎಚ್ ಪ್ರತಿಜನಕಗಳು (ಡಫಿ, ಕಿಡ್, M ಮತ್ತು S) ಅಪರೂಪವಾಗಿ ಗಮನಾರ್ಹ ಸಮಸ್ಯೆಗಳನ್ನು ಉಂಟುಮಾಡುತ್ತವೆ.

ವಿವಿಧ ಪ್ರತಿಜನಕಗಳೊಂದಿಗೆ (ಇನ್ನೊಬ್ಬ ವ್ಯಕ್ತಿಯಿಂದ) ಲೇಪಿತವಾದ ಕೆಂಪು ರಕ್ತಕಣಗಳು ರಕ್ತಪರಿಚಲನೆಗೆ ಪ್ರವೇಶಿಸಿದರೆ, ಸ್ವೀಕರಿಸುವವರ ರೆಟಿಕ್ಯುಲೋ ಎಂಡೋಥೆಲಿಯಲ್ಸಿಸ್ಟಮ್ ಈ ಪ್ರತಿಜನಕಗಳನ್ನು ಹೊಂದಿರುವ ಕೆಂಪು ರಕ್ತಕಣಗಳನ್ನು ವಿದೇಶಿ ಎಂದು ಗುರುತಿಸುತ್ತದೆ ಮತ್ತು ಈ ಜೀವಕೋಶಗಳನ್ನು ನಾಶಮಾಡಲು ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಹೆಚ್ಚಿಸುತ್ತದೆ. ಆರ್ ಎಚ್ ಐಸೊ ಇಮ್ಯುನೈಸೇಶನ್ ಸಮಯದಲ್ಲಿ ಇದೇ ರೀತಿಯ ವಿದ್ಯಮಾನವು ಸಂಭವಿಸುತ್ತದೆ. ಭ್ರೂಣದ ಆರ್ ಎಚ್ ಪಾಜಿಟಿವ್ ಕೆಂಪು ರಕ್ತಕಣಗಳು ಜರಾಯುವಿನ (Placenta) ಮೂಲಕ ಆರ್ ಎಚ್ ನೆಗೆಟಿವ್ ತಾಯಿಯ ರಕ್ತಪರಿಚಲನೆಗೆ ಪ್ರವೇಶವನ್ನು ಪಡೆಯುತ್ತವೆ, ಇದರ ಪರಿಣಾಮವಾಗಿ ಆಂಟಿ–ಡಿ ಪ್ರತಿಕಾಯಗಳು ರೂಪುಗೊಳ್ಳುತ್ತವೆ, ಇದು ಜರಾಯು (placenta) ರಕ್ತ ಪರಿಚಲನೆಯ ಮೂಲಕ ಭ್ರೂಣಕ್ಕೆ ಹಾದು ಹೋಗುತ್ತದೆ ಮತ್ತು ಭ್ರೂಣದ ಕೆಂಪು ರಕ್ತಕಣಗಳನ್ನು ನಾಶಪಡಿಸಿ ಭ್ರೂಣದ ರಕ್ತಹೀನತೆಯನ್ನು ಉಂಟುಮಾಡುತ್ತದೆ. ಆರ್ ಎಚ್ ನೆಗೆಟಿವ್ ಮಹಿಳೆಯರಿಗೆ ನೀಡಲಾಗುವ ರೋಗನಿರೋಧಕ Anti–D ಇಮ್ಯುನೊಗ್ಲಾಬ್ಯುಲಿನ್‌ಅನ್ನು ಪರಿಚಯಿಸಿದಾಗಿನಿಂದ, ಆರ್ ಎಚ್ ಐಸೊ ಇಮ್ಯುನೈಸೇಶನ್ ಪರಿಣಾಮಗಳು ಗಣನೀಯ ಇಳಿಕೆ ಕಂಡುಬಂದಿದೆ. ಆದರೂ ಒಮ್ಮೊಮ್ಮೆ Anti–D ಕೊಟ್ಟಿಲ್ಲದಿರುವುದು, ಗರ್ಭಪಾತವಾದಾಗ anti-D ತೆಗೆದುಕೊಳ್ಳದಿರುವುದು ಹಾಗೂ ಇತ್ತೀಚೆಗೆ ಹೆಚ್ಚುತ್ತಿರುವ ಅವಳಿ–ತ್ರಿವಳಿ ಜನನದ ಕಾರಣಬೇಕಾಗುವಷ್ಟು ಡೋಸೇಜ್ ಅಲ್ಲಿ anti- D ಸಿಗದಿರುವುದರಿಂದ ಆರ್ ಎಚ್ ಐಸೋ ಇಮ್ಯುನೈಸೇಶನ್ ಪ್ರಕರಣಗಳನ್ನು ಇಂದಿಗೂ ನೋಡುತ್ತಿದ್ದೇವೆ.

ಇದಲ್ಲದೇ ಆರ್ ಎಚ್ ಐಸೊ ಇಮ್ಯುನೈಸೇಶನ್ ಪ್ರತಿಜನಕವಲ್ಲದೇ ಮೇಲೆ ಉಲ್ಲೇಖಿಸಿದ ಇತರೆ

ಪ್ರತಿಜನಕಗಳಿಂದ ಕೂಡ ಆಗಬಹುದಾಗಿದೆ. ಗರ್ಭಿಣಿಯ ಆರ್ ಎಚ್ ಐಸೊ ಇಮ್ಯುನೈಸೇಶನ್ ಭ್ರೂಣ ಮತ್ತು ನವಜಾತ ಶಿಶುವಿನಲ್ಲಿ ರಕ್ತಹೀನತೆಯ ವಿವಿಧ ತೀವ್ರತೆಗೆ ಕಾರಣವಾಗಬಹುದು. ಸಾಮಾನ್ಯವಾಗಿ ಇದು ಎರಡನೇ ಅಥವಾ ನಂತರದ ಗರ್ಭಾವಸ್ಥೆಯಲ್ಲಿ ಭ್ರೂಣದ ಮೇಲೆ ಪರಿಣಾಮ ಬೀರುತ್ತದೆ. ಅಂತಹ ಭ್ರೂಣವು ಆರಂಭದಲ್ಲಿಯೇ ರಕ್ತಹೀನತೆಯನ್ನು ಹೊಂದಿರುತ್ತದೆ. ಸ್ಥಿತಿಯು ಮುಂದುವರಿದರೆ ಮತ್ತು ಹೆಚ್ಚು ಗಂಭೀರವಾಗಿದ್ದರೆ ಪಿತ್ತಜನಕಾಂಗ ಮತ್ತು ಸ್ಲೀನ್ (ಗುಲ್ಮ)ನಲ್ಲಿ ಮೂಳೆಗಳ ಅಸ್ಥಿ ಮಜ್ಜೆಯ ಜೊತೆಗೆ ಹೆಚ್ಚಿನ ರಕ್ತೋತ್ಪಾದನೆ (ಎಕ್ಸ್ಟ್ರಾಮೆಡಲ್ಲರಿ ಎರಿಥ್ರೋಪೊಯಿಸಿಸ್) ಆಗುತ್ತದೆ. ಗಂಭೀರ ಮಟ್ಟದ ರಕ್ತಹೀನತೆಯಾದಾಗ ಹೃದಯದ ಒತ್ತಡ ಹೆಚ್ಚಾಗಿ ಆಮ್ಲಜನಕ ಕೊರತೆಯಿಂದ (ಹೈಪಾಕ್ಸಿಯಾ) ಹೃದಯ ವೈಫಲ್ಯವಾಗಬಹುದಾಗಿದೆ. ಶ್ವಾಸಕೋಶಗಳ ಸುತ್ತ / ಹೃದಯದ ಸುತ್ತ / ಉದರದಲ್ಲಿ / ಚರ್ಮದ ಕೆಳಗೆ / ನೆತ್ತಿಯಲ್ಲಿ ನೀರು ತುಂಬುವಿಕೆ




ಹೈಡ್ರೋಪಿಕ್ ಬದಲಾವಣೆಗಳಾಗಿ ಇದು ಸೊನೊಗ್ರಾಫಿಯಲ್ಲಿ ವ್ಯಕ್ತವಾಗುತ್ತದೆ.

ಕಡಿಮೆಯಾದ ಆಮ್ಲಜನಕದ ಪೂರೈಕೆಯನ್ನು ಸರಿದೂಗಿಸಲು, ಜರಾಯು ಕೂಡ ಹಿಗ್ಗುತ್ತದೆ, ಇದನ್ನು ಅಲ್ಟ್ರಾಸೋನೋಗ್ರಫಿಯಲ್ಲಿ ಪ್ಲೆಸೆಂಟೊಮೆಗಾಲಿ ಎಂದು ಕಾಣಬಹುದು. ಭ್ರೂಣದ ರಕ್ತಹೀನತೆಯು ಸ್ಕ್ಯಾನ್‌ನಲ್ಲಿ ಹೆಚ್ಚಿದ ಮಧ್ಯಮ ಸೆರೆಬ್ರಲ್ ಆರ್ಟರಿಯ Peak Systolic velocity (PSV) ಯಲ್ಲಿ ಪ್ರತಿಫಲಿಸುತ್ತದೆ. ಅಲ್ಟ್ರಾಸೌಂಡ್‌ನಲ್ಲಿ ಈ ಹೈಡ್ರೋಪಿಕ್ ಬದಲಾವಣೆಗಳು ಸ್ಪಷ್ಟವಾಗಿ ಗೋಚರಿಸುವ ಹೊತ್ತಿಗೆ, ಇದು ಸಾಕಷ್ಟು ತಡವಾಗಿರುತ್ತದೆ ಮತ್ತು ಭ್ರೂಣಕ್ಕೆ ಹೆಚ್ಚು ತೊಂದರೆಗಳಾಗಿರುವ ಸಾಧ್ಯತೆಯಿರುತ್ತದೆ. ಆದ್ದರಿಂದ ಭ್ರೂಣದ ರಕ್ತಹೀನತೆಯನ್ನು ಈ ಹಂತಕ್ಕಿಂತ ಮುಂಚೆಯೇ ಗುರುತಿಸುವುದು ನಮ್ಮ ಗುರಿಯಾಗಿದೆ. ಅಲ್ಟ್ರಾಸೌಂಡ್ ಅನ್ನು MCA ಪೀಕ್‌ಸಿಸ್ಟೊಲಿಕ್ ವೇಗಕ್ಕೆ ಮತ್ತು ಭ್ರೂಣವನ್ನು (ನೆತ್ತಿಯ ಎಡಿಮಾ, ಪ್ಲೂರಲ್ ಎಫ್ಯೂಷನ್, ಪೆರಿಕಾರ್ಡಿಯಲ್ ಎಫ್ಯೂಷನ್, ಅಸ್ಸೈಟ್ಸ್ ಮತ್ತು ಸ್ಕಿನ್ ಎಡಿಮಾ) ಸೂಕ್ಷ್ಮವಾಗಿ ಪರೀಕ್ಷೆ ಮಾಡಲಾಗುತ್ತದೆ. ೧:೧೬ ರ ಪ್ರತಿಕಾಯ ಮಟ್ಟವು (ICT titres) ಗಮನಾರ್ಹವಾದ ಭ್ರೂಣದ ರಕ್ತಹೀನತೆಯನ್ನು ಉಂಟುಮಾಡುತ್ತವೆ ಎಂದು ಪರಿಗಣಿಸಲಾಗುತ್ತದೆ. ಒಮ್ಮೆ ಈ ಟೈಟರ್‌ಗಳು ಪಾಸಿಟಿವ್ ಬಂದರೆ, MCA-PSV ಮಾನಿಟರಿಂಗ್ ಮಾಡುತ್ತಾ ಗರ್ಭಾವಸ್ಥೆಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ. ೧.೫ MOM ಗಿಂತ ಹೆಚ್ಚಿನ MCA-PSV ಮಟ್ಟವು ಭ್ರೂಣದ ರಕ್ತಹೀನತೆಗೆ ಸಂಬಂಧಿಸಿದೆ ಎಂದು ಪರಿಗಣಿಸಲಾಗುತ್ತದೆ. MCA-PSV ೧.೫ MOM ಮಟ್ಟವನ್ನು ತಲುಪಿದ ಸಂದರ್ಭದಲ್ಲಿ, MCA-PSV ಅನ್ನು ವಾರದ ನಂತರ ಪುನರಾವರ್ತಿಸಲಾಗುತ್ತದೆ ಮತ್ತು ಅದು ಈ ಮಟ್ಟದಲ್ಲಿ ಉಳಿದಿದ್ದರೆ ಅಥವಾ ಏರಿದರೆ, ಇದು ಗರ್ಭಾಶಯದ ಒಳಗೇ ಇರುವ ಭ್ರೂಣಕ್ಕೆ ರಕ್ತವರ್ಗಾವಣೆಯ (IUT) ಅಗತ್ಯವಿರುವ ಸೂಚನೆಯಾಗಿದೆ.

O ನೆಗೆಟಿವ್ ಗುಂಪಿನ ವಯಸ್ಕರ ರಕ್ತದಿಂದ ಬಿಳಿ ರಕ್ತಕಣಗಳ ಅಂಶವನ್ನು ತೆಗೆದು ವಿಕಿರಣಕ್ಕೆ ಒಳಪಡಿಸಿ (ಇರ್ರೇಡಿಯೇಟ್ ಮಾಡಿ,) ಸಾಂದ್ರತೆ ೮೦–೮೫% ನಷ್ಟು (ಹೆಮಾಟೋಕ್ರಿಟ್) ಇರುವಂತೆ. ಗಮನಿಸಲಾಗುತ್ತದೆ.

ವರ್ಗಾವಣೆ ಮಾಡಬೇಕಾದ ರಕ್ತದ ಪ್ರಮಾಣವು ಭ್ರೂಣದ ಗರ್ಭಾವಸ್ಥೆ, ದಾನಿ ರಕ್ತದ ಹೆಮಟೋಕ್ರಿಟ್ಮತ್ತು ಭ್ರೂಣದ ರಕ್ತದ ಹೆಮಟೋಕ್ರಿಟ್‌ಅನ್ನು ಅವಲಂಬಿಸಿರುತ್ತದೆ. ಭ್ರೂಣದ ಹೆಮಟೋಕ್ರಿಟ್‌ಅನ್ನು ೪೦% ಗೆ ಹೆಚ್ಚಿಸಲು ಅಗತ್ಯವಿರುವ ರಕ್ತದ ಪ್ರಮಾಣವನ್ನು ಲೆಕ್ಕಾಚಾರಮಾಡಲು ಕೋಷ್ಟಕಗಳು (ನಾರ್ಮೊಗ್ರಾಮ್) ಲಭ್ಯವಿದೆ.

ದಾನಿಯ ರಕ್ತ ತಪಾಸಣೆ ಅತಿಸೂಕ್ಷ್ಮಮಟ್ಟದಲ್ಲಿ ಪರಿಶೀಲಿಸಲಾಗುತ್ತದೆ. ಸುಮಾರು ಹತ್ತು ಗಂಟೆಗಳು ಹಿಡಿಸುವ ಈ ಪರೀಕ್ಷೆಯಲ್ಲಿ ಯಾವುದೇ ವೈರಾಣುವಿನ ಸೋಂಕು ಇಲ್ಲವೆಂದು ಧೃಢಪಡಿಸಿಕೊಳ್ಳಲಾಗುತ್ತದೆ. ಅವರು ಮಧುಮೇಹದಂತಹ ದೀರ್ಘಾವಧಿ ಸಮಸ್ಯೆಯ ಉಳ್ಳವರಾಗಿರಬಾರದು. ಮದ್ಯವ್ಯಸನಿ ಆಗಿರಬಾರದು. ನಿರಂತರ ಅಲ್ಟ್ರಾಸೌಂಡ್ ಮಾರ್ಗದರ್ಶನದಲ್ಲಿ, ಫ್ರೀ ಹ್ಯಾಂಡ್ ತಂತ್ರವನ್ನು ಬಳಸಿಕೊಂಡು ಕಾರ್ಯ ವಿಧಾನವನ್ನು ನಡೆಸಲಾಗುತ್ತದೆ. ಸೂಜಿಯನ್ನು ಹೊಕ್ಕುಳ ಬಳ್ಳಿಯ ಅಭಿಧಮನಿಯು ಪ್ಲಾಸೆಂಟ ಸೇರುವ ಜಾಗದಲ್ಲಿ ಅಥವಾ ಹೆಪಾಟಿಕ್ ಅಭಿಧಮನಿಯಲ್ಲಿ ಹೊಗಿಸಿ ಭ್ರೂಣಕ್ಕೆ ರಕ್ತವರ್ಗಾವಣೆ ಮಾಡಲಾಗುತ್ತದೆ. ಒಟ್ಟು ಬಯಸಿದ ಪ್ರಮಾಣವನ್ನು ವರ್ಗಾವಣೆ ಮಾಡಿದ ನಂತರ, ಹೆಮಟೋಕ್ರಿಟ್‌ಅನ್ನು ಪರೀಕ್ಷಿಸಲಾಗುತ್ತದೆ. ಮಗುವು ಹೆರಿಗೆಗೆ ಸೂಕ್ತವಾಗುವ ಸಮಯದವರೆಗೂ ರಕ್ತ ಮರು ಪೂರಣೆಯನ್ನು ಕೆಲವು ವಾರಗಳ ನಂತರ ಪುನಃ ಪುನಃ ನಡೆಸುವ ಅಗತ್ಯವಿರುತ್ತದೆ.





ಈ ಚಿಕಿತ್ಸೆಯಿಂದ ಆಗುವ ಅಪಾಯ ಅಥವಾ ಅಡ್ಡಪರಿಣಾಮ ಕಡಿಮೆ. ಆದರೂ ಗರ್ಭಪಾತ ಆಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸೋಂಕಿನ ಪ್ರಮಾಣವೂ ಕಡಿಮೆ ಆಧುನಿಕ ಚಿಕಿತ್ಸಾ ಪದ್ಧತಿಯಂತೆ ಸೂಕ್ತಜೀವಿ ರೋಧಕಗಳ ಹಾಗೂ ಗರ್ಭಪಾತ ತಡೆಯಬಲ್ಲ ಔಷಧ ಸರಿಯಾದ ಪ್ರಮಾಣದಲ್ಲಿ ನೀಡುವುದು ಅಪಾಯ / ಅಡ್ಡಪರಿಣಾಮಗಳನ್ನು ನಿವಾರಿಸುತ್ತದೆ.

ಹೀಗೆ ಗರ್ಭವನ್ನು ಎಚ್ಚರಿಕೆಯಿಂದ ಮೇಲ್ವಿಚಾರಣೆ ಮಾಡಲಾಗುತ್ತದೆ. MCA-PSV ಹಾಗೂ ಇತರೆ ಅನೀಮಿಯಾದ ಗುರುತುಗಳನ್ನು ಸ್ಕ್ಯಾನ್ ಮೂಲಕ ಮಾನಿಟರ್ ಮಾಡಲಾಗುತ್ತದೆ. ಅಗತ್ಯವಿದ್ದಲ್ಲಿ ಮತ್ತೆ ರಕ್ತವರ್ಗಾವಣೆ ಮಾಡಲಾಗುತ್ತದೆ. ಹೀಗೆ ಗರ್ಭದಲ್ಲಿಯೇ ರಕ್ತವರ್ಗಾವಣೆ ಮಾಡಿ Rh ಐಸೊ ಇಮ್ಯುನೈಸೇಶನ್ ಮತ್ತು ಹೈಡ್ರಾಪ್ಸ್ ನಂತಹ ಮಾರಕಸ್ಥಿತಿಯಿಂದ ಭ್ರೂಣವನ್ನು ರಕ್ಷಿಸಬಹುದಾಗಿದೆ. ಅಷ್ಟೇ ಅಲ್ಲದೆ ಗರ್ಭದಲ್ಲಿರುವ ಮಗುವಿನ ಬೆಳವಣಿಗೆಗೆ ಕಾಲಾವಕಾಶ ಸಿಗುತ್ತದೆ ಮತ್ತು ಜನಿಸಿದ ನಂತರ ರಕ್ತವರ್ಗಾವಣೆ ಅಥವಾ ಎಕ್ಸ್‌ಚೇಂಜ್ ಟ್ರಾನ್ಸ್‌ಫ್ಯೂಶನ್ ಅನ್ನು ತಡೆಗಟ್ಟಬಹುದಾಗಿದೆ.

ಕಾಯಿಲೆ ಮತ್ತು ಚಿಕಿತ್ಸೆ

# ಶ್ವಾಸಕೋಶ ಆರೋಗ್ಯದ ಮೇಲೆ ಪಾರಿವಾಳದ ಪ್ರಭಾವ



ಡಾ. ಕೆ. ಬಿ. ಸೂರ್ಯ ಕುಮಾರ್
ಮಡಿಕೇರಿ



ಡಾ ಜ್ಯೋತಿ ಘೊಂಗಡೆಮಠ
ವಿಭಾಗೀಯ ಸಂಪಾದಕರು

ನಾವು ಮುಂಬೈಯ ಗೇಟ್ ವೇ ಆಫ್ ಇಂಡಿಯಾ ಬಳಿ ಹೋದರೆ ಅಲ್ಲಿ ಬಹಳಷ್ಟು ಪಾರಿವಾಳಗಳು ಹಾರಾಡುತ್ತಾ ನೆಲದ ಮೇಲೆ ಕುಳಿತುಕೊಳ್ಳುವುದನ್ನು ಕಾಣುತ್ತೇವೆ. ಅಲ್ಲಿ ಅದಕ್ಕೆ ಕಾಳುಗಳನ್ನು ಹಾಕಿ ಕೊಂಡು ಫೋಟೋ ತೆಗೆಸಿಕೊಳ್ಳುವ ಬಹಳಷ್ಟು ಜನರು ನಮಗೆ ಕಾಣಸಿಗುತ್ತಾರೆ. ಇದೇ ರೀತಿ ಪ್ರಪಂಚದಾದ್ಯಂತದ ನಗರ ಪರಿಸರದಲ್ಲಿ, ಪಾರಿವಾಳಗಳು ಸಾಮಾನ್ಯವಾಗಿ ಕಟ್ಟಡಗಳ ಮೇಲೆ ಕುಳಿತುಕೊಳ್ಳುವುದು ಅಥವಾ ಉದ್ಯಾನವನಗಳಲ್ಲಿ ಕಾಳುಗಳನ್ನು ಹೆಕ್ಕಿ ತಿನ್ನುವುದು ಸಾಮಾನ್ಯ ದೃಶ್ಯವಾಗುತ್ತಿದೆ. ಈ ಪಕ್ಷಿಗಳು ನಗರದ ಪರಿಚಿತ ಭಾಗವಾಗಿದ್ದರೂ, ಹೆಚ್ಚುತ್ತಿರುವ ಪಾರಿವಾಳದ ಸಂಖ್ಯೆಯು ಸಾರ್ವಜನಿಕ ಆರೋಗ್ಯದ ಮೇಲೆ, ಅದರಲ್ಲೂ ವಿಶೇಷವಾಗಿ ಉಸಿರಾಟದ ತೊಂದರೆಗಳನ್ನು ಉಂಟು ಮಾಡುತ್ತಿರುವುದು ಜನರಿಗೆ ಇನ್ನೂ ಅರಿವಾಗದಿರುವ ಒಂದು ಕಳವಳದ ಸಂಗತಿ.

ಕೆಲವೊಂದು ಪಾರಿವಾಳಗಳು ನಗರ ಜೀವನಕ್ಕೆ ಗಮನಾರ್ಹವಾಗಿ ಹೊಂದಿಕೊಂಡಿವೆ. ಮಾನವ ಪರಿಸರದಲ್ಲಿ ಅವುಗಳಿಗೆ ಯಾವುದೇ ತೊಂದರೆ ಇಲ್ಲದೆ, ಎಸೆದಿರುವ ಆಹಾರದ ತುಣುಕುಗಳ ಲಭ್ಯತೆ, ಕಟ್ಟಡಗಳಲ್ಲಿ ಗೂಡು ಕಟ್ಟಲು ಸೂಕ್ತ ಸ್ಥಳಗಳು ಮತ್ತು ನಗರಗಳಲ್ಲಿ ಅವುಗಳ ನೈಸರ್ಗಿಕ ಪರಭಕ್ಷಕ (ಪ್ರಿಡೇಟರ್ಸ್)ಗಳ ಕೊರತೆ ಸೇರಿ ಅವುಗಳ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗಿದೆ. ಪಾರಿವಾಳ ಪಕ್ಷಿಯ ಸಂಖ್ಯೆಯು ಜಾಸ್ತಿಯಾದಂತೆ ಅವುಗಳ ಹಿಕ್ಕೆಗಳು, ಗರಿಗಳು ಮತ್ತು ಅವಶೇಷಗಳ ಶೇಖರಣೆಯೂ ಹೆಚ್ಚಾಗುತ್ತದೆ. ಇಂತಹ ಸಂದರ್ಭದಲ್ಲಿ ಮನುಷ್ಯರ ಆರೋಗ್ಯದಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸಬಹುದು.



ಮಾನವರ ಆರೋಗ್ಯ ಕಾಳಜಿಗಳಲ್ಲಿ ಪಾರಿವಾಳಗಳಿಗೆ ಸಂಬಂಧಿಸಿದ ರೋಗವೆಂದರೆ ಅದು ಉಸಿರಾಟದ ಕಾಯಿಲೆಗಳ ಅಪಾಯ. ಪಾರಿವಾಳದ ಹಿಕ್ಕೆಗಳು ಮತ್ತು ಗರಿಗಳು ಆರೋಗ್ಯ ಸಮಸ್ಯೆಗಳನ್ನು ಪ್ರಚೋದಿಸುವ ವಿವಿಧ ರೋಗಕಾರಕಗಳು ಮತ್ತು ಅಲರ್ಜಿನ್‌ಗಳನ್ನು ಹೊಂದಿರುತ್ತವೆ.

ಒಣಗಿದ ಹಿಕ್ಕೆಗಳು ಹುಡಿಯಾದಾಗ ಅವುಗಳ ಕಣಗಳು ಗಾಳಿಯಲ್ಲಿ ಸೇರಿ ಕೊಂಡು, ಅದನ್ನು ಮನುಷ್ಯರು ಉಸಿರಾಡಬಹುದು. ಈ ರೀತಿಯ ಒಡ್ಡುವಿಕೆಯು "ಬರ್ಡ್ ಫ್ಯಾನ್ಸಿಯರ್ಸ್ ಶ್ವಾಸಕೋಶ" ಎಂದು ಕರೆಯಲ್ಪಡುವ ಅತಿಸೂಕ್ಷ್ಮ 'ನ್ಯುಮೋನಿಟಿಸ್' ಎಂಬ ಸ್ಥಿತಿಗೆ ಕಾರಣವಾಗುತ್ತದೆ. ನಮ್ಮ ಶರೀರದ ಪ್ರತಿರಕ್ಷಣಾ ವ್ಯವಸ್ಥೆ (ಇಮ್ಯೂನ್ ಸಿಸ್ಟಮ್)ಯು ಸಾವಯವ ಧೂಳಿಗೆ ಪ್ರತಿಕ್ರಿಯಿಸಿದಾಗ ಈ ಉರಿಯೂತದ ಪ್ರತಿಕ್ರಿಯೆಯು ಸಂಭವಿಸಿ, ಸಾಧಾರಣ ಉಸಿರಾಟದ ಅಸ್ವಸ್ಥತೆಯಿಂದ ತೀವ್ರ ಶ್ವಾಸಕೋಶದ ಕಾಯಿಲೆಯವರೆಗೆ ರೋಗ ಲಕ್ಷಣಗಳು ಕಂಡು ಬರಬಹುದು.

ಗಾಳಿಯಲ್ಲಿರುವ ಪಾರಿವಾಳದ ಅಂಶಗಳಿಗೆ ನಮ್ಮ ಶರೀರ ಒಡ್ಡಿಕೊಳ್ಳುವುದರಿಂದ ಬ್ಯಾಕ್ಟೀರಿಯಾ, ವೈರಸ್‌ಗಳು ಮತ್ತು ಶಿಲೀಂಧ್ರಗಳು ಸೇರಿದಂತೆ ಹಾನಿಕಾರಕ ಸೂಕ್ಷ್ಮಾಣುಜೀವಿಗಳು ಗಾಳಿಯ ಮುಖಾಂತರ ನಮ್ಮ ಶರೀರವನ್ನು ಸೇರಿಕೊಳ್ಳುತ್ತವೆ. ಅದರಲ್ಲೂ ಕಾಳಜಿಯುಳ್ಳ ಶಿಲೀಂಧ್ರವೆಂದರೆ 'ಕ್ರಿಪ್ಟೋಕಾಕಸ್ ನಿಯೋಫಾರ್ಮನ್ಸ್'. ಇದು ದುರ್ಬಲಗೊಂಡ ಪ್ರತಿರಕ್ಷಣಾ ವ್ಯವಸ್ಥೆ (ಲೋ ಇಮ್ಯುನಿಟಿ) ಹೊಂದಿರುವ ವ್ಯಕ್ತಿಗಳಲ್ಲಿ ಗಂಭೀರವಾದ ಸೋಂಕನ್ನು ಉಂಟು ಮಾಡ ಬಹುದು. ಇದಲ್ಲದೆ ಹಿಕ್ಕೆಗಳು ಆಸ್ತಮಾ ಮತ್ತು ಇತರ ಉಸಿರಾಟದ ಪರಿಸ್ಥಿತಿಗಳನ್ನು ಉಲ್ಬಣಗೊಳಿಸುವ ಅಲರ್ಜಿನ್ ಎಂಬ ವಸ್ತುಗಳನ್ನು ಹೊಂದಿರಬಹುದು.

ಆರೋಗ್ಯ ಸಮಸ್ಯೆಗಳಲ್ಲದೆ ಪಾರಿವಾಳದ ತ್ಯಾಜ್ಯದ ಸಂಗ್ರಹದಲ್ಲಿರುವ ಆಮ್ಲಿಯ ಸ್ವಭಾವವು ಕಟ್ಟಡಗಳು ಮತ್ತು ಸಾರ್ವಜನಿಕ ಸ್ಥಳಗಳ ಅವನತಿಗೆ ಕಾರಣವಾಗಬಹುದು. ಇದು ದುಬಾರಿ ದುರಸ್ತಿ ಮತ್ತು ಹೆಚ್ಚಿದ ನಿರ್ವಹಣೆಯ ಖರ್ಚಿಗೆ ಕಾರಣವಾಗುತ್ತದೆ. ಹಾಗಾಗಿ ಪಾರಿವಾಳ ನಮ್ಮ ಆರೋಗ್ಯದ ಅಪಾಯವನ್ನು ಮಾತ್ರವಲ್ಲದೆ ಕಟ್ಟಡಗಳ ಮೇಲಿನ ಆರ್ಥಿಕ ಹೊರೆಯನ್ನೂ ಉಂಟು ಮಾಡುತ್ತದೆ.

ಪಾರಿವಾಳಗಳಿಗೆ ಆಹಾರ ನೀಡುವುದರೊಂದಿಗೆ ಸಂಬಂಧಿಸಿದ ಆರೋಗ್ಯದ ಅಪಾಯಗಳ ಬಗ್ಗೆ ಜನರಿಗೆ ತಿಳಿಸುವುದು ನಗರ ಪ್ರದೇಶಗಳಲ್ಲಿ ಹಿಕ್ಕೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ನಗರಗಳು ಮಾನವೀಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿ ಕೊಳ್ಳಬಹುದು. ಉದಾಹರಣೆಗೆ ಪಕ್ಷಿಗಳಿಗೆ ಪ್ರತ್ಯೇಕ ಗೂಡುಗಳನ್ನು ಸ್ಥಾಪಿಸುವುದು ಅಥವಾ ಕೆಲವು ಪ್ರದೇಶಗಳಲ್ಲಿ ಪಾರಿವಾಳಗಳು ಕಟ್ಟಡದ ಒಳಗಡೆ ಬರದಂತೆ ತಡೆಯಲು ಬಲೆ ಹಾಕುವುದು.

ಪಾರಿವಾಳದ ಹಿಕ್ಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾರ್ವಜನಿಕ ಸ್ಥಳಗಳ ನಿಯಮಿತ ಶುಚಿಗೊಳಿಸುವಿಕೆ ಮತ್ತು ನಿರ್ವಹಣೆ ಅತ್ಯಗತ್ಯ. ಶುಚಿತ್ವವನ್ನು ಉತ್ತೇಜಿಸುವ ನೀತಿಗಳನ್ನು ಅನುಷ್ಠಾನಗೊಳಿಸುವುದರಿಂದ ಗಾಳಿಯಲ್ಲಿ ಹಾರಿ ಬರುವ ಕಣಗಳನ್ನು ಗಣನೀಯವಾಗಿ ಕಡಿಮೆ ಮಾಡಿ ಉಸಿರಾಟದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಬಹುದು.

ನಗರ ಪ್ರದೇಶಗಳು ವಿಸ್ತರಣೆಯಾಗುತ್ತಲೇ ಇರುವುದರಿಂದ, ಹೆಚ್ಚುತ್ತಿರುವ ಪಾರಿವಾಳಗಳ ಸಂತತಿಯಿಂದ ಎದುರಾಗುವ ಸವಾಲುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಪಾರಿವಾಳಗಳು ಮತ್ತು ಉಸಿರಾಟದ ಕಾಯಿಲೆಗಳ ನಡುವಿನ ಸಂಪರ್ಕವು ಈ ಪಕ್ಷಿಗಳನ್ನು ನಿರ್ವಹಿಸಲು ಮತ್ತು ಸಾರ್ವಜನಿಕ ಆರೋಗ್ಯವನ್ನು ರಕ್ಷಿಸಲು ಪೂರ್ವಭಾವಿ ಕ್ರಮಗಳ ಅಗತ್ಯವನ್ನು ಒತ್ತಿ ಹೇಳುತ್ತದೆ. ಜಾಗೃತಿಯನ್ನು ಬೆಳೆಸುವ ಮೂಲಕ ಮತ್ತು ಪರಿಣಾಮಕಾರಿ ನಿಯಂತ್ರಣ ತಂತ್ರಗಳನ್ನು ಅನುಷ್ಠಾನಗೊಳಿಸುವ ಮೂಲಕ, ಈ ಸಾಮಾನ್ಯ ನಗರ ಹಕ್ಕಿಗೆ ಸಂಬಂಧಿಸಿದ ಆರೋಗ್ಯದ ಅಪಾಯಗಳನ್ನು ತಗ್ಗಿಸಬಹುದು. ಆರೋಗ್ಯಕರ ನಗರ ಪರಿಸರವನ್ನು ರಚಿಸುವಲ್ಲಿ ವನ್ಯಜೀವಿ ಮತ್ತು ಮಾನವ ಆರೋಗ್ಯ ಎರಡನ್ನೂ ಪರಿಗಣಿಸುವ ಸಮತೋಲಿತ ವಿಧಾನವು ಅತ್ಯಗತ್ಯವಾಗಿರುತ್ತದೆ.

ಆರೋಗ್ಯ ದಿನಾಚರಣೆ

# ಜಂತು ಹುಳು ಬಾಧೆ



ಡಾ. ರಾಘವೇಂದ್ರ ಕೆ ವಿ
ವಸಂತ ಡಯಾಗ್ನೋಸ್ಟಿಕ್ಸ್
ದೊಡ್ಡಬಳ್ಳಾಪುರ



ಡಾ. ಇಂದಿರಾ
ದೊಡ್ಡಬಳ್ಳಾಪುರ
ವಿಭಾಗೀಯ
ಸಂಪಾದಕರು

ಜಂತು ಹುಳು (ಆಂಗ್ಲ ಭಾಷೆಯಲ್ಲಿ Round worms/ Intestinal worms).

ಇವು ಮಾನವರಲ್ಲಿ ಮತ್ತು ಕೆಲವು ಪ್ರಾಣಿಗಳಲ್ಲಿ ಕಂಡು ಬರುವ ಪರಾವಲಂಬಿ ಜೀವಿಗಳು (ಅಂದರೆ ತಮ್ಮ ಆಸ್ತಿತ್ವಕ್ಕಾಗಿ ಬೇರೆ ಜೀವಿಯ ದೇಹವನ್ನು ಆಶ್ರಯಿಸುವ ಜೀವಿಗಳು).


ಈ ಜೀವಿಗಳು ಎರಡು ವಿಧದಲ್ಲಿ ಕಂಡುಬರುತ್ತವೆ.

೧. ದುಂಡು ಹುಳ (Round Worm) – ಕೊಕ್ಕೆಹುಳು (Hook worm), ಪಿನ್ ವರ್ಮ್, ಚಾವಟಿಹುಳು (whip worm)

೨. ಫ್ಲಾಟ್ವರ್ಮ್ಸ್ – ಫ್ಲೋಕ್ಸ್, ಲಾಡಿಹುಳು (Tapeworm).



ಕೊಕ್ಕೆಹುಳು (Hook worm)



ಲಾಡಿಹುಳು (Tape worm)

**ಇತಿಹಾಸ :** ಮಾನವನಿಗೆ ಜಂತು ಹುಳುಗಳ ಹಿಂಸೆ ಹೊಸತೇನಲ್ಲ. ಕ್ರಿ. ಪೂ. ೧೬೦೦ರಲ್ಲಿಯೇ ಇವುಗಳ ಉಪಟಳವಿತ್ತೆಂದು ಉಲ್ಲೇಖಿಸಲಾಗಿದೆ. ಮುಂದುವರಿದ ದೇಶಗಳಲ್ಲಿ ಈ ಹುಳುಗಳ ಭಾದ್ಯತೆಯನ್ನು ಹಿಡಿತದಲ್ಲಿರಿಸಲಾಗಿದೆ. ಆದರೂ ಇಂದಿಗೂ ಜಗತ್ತಿನಲ್ಲಿ ೯೦೦ ಮಿಲಿಯನ್ ಜನರು ಹುಳುಗಳ ಹಾವಳಿಗೆ ತುತ್ತಾಗಿದ್ದಾರೆ. ನಮ್ಮ ಭಾರತದ ಅಂಕಿ ಅಂಶಗಳ ಪ್ರಕಾರ ಅಂದಾಜು ೨೬೦ ಮಿಲಿಯನ್ ಜನರು ಈ ಸಮಸ್ಯೆಗೆ ಈಡಾಗಿದ್ದಾರೆ.ಅಂದಾಜು ಅರ್ಧ ಲಕ್ಷದಷ್ಟು ಜನರು ಹುಳುವಿನಿಂದ ಉಂಟಾದ ರಕ್ತಹೀನತೆಯಿಂದ ಅಸುನೀಗುತಿದ್ದಾರೆ. ಅಸ್ಸಾಂ, ಪಶ್ಚಿಮಬಂಗಾಳ, ಉತ್ತರಪ್ರದೇಶ, ಬಿಹಾರ, ಒರಿಸ್ಸಾ, ಪಂಜಾಬ್, ತಮಿಳುನಾಡು, ಆಂಧ್ರ, ತೆಲಂಗಾಣ, ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡುಬರುವ ಈ ಸಮಸ್ಯೆ ವಯಸ್ಕರಲ್ಲಿಯೂ ಕಂಡು ಬರುತ್ತಿದೆ.


**ಕಾರಣಗಳು:**

೧. ಕೊಳಕು ಆಹಾರ ಅಥವಾ ನೀರಿನ ಸೇವನೆ

೨. ಸರಿಯಾಗಿ ಬೇಯಿಸದ ಮಾಂಸಾಹಾರ ಸೇವನೆ

೩. ಕಲುಷಿತ ಮಣ್ಣು ಅಥವಾ ಮಲದ ಸಂಪರ್ಕ ಮಾಡುವುದು
೪. ಸ್ವಚ್ಛತೆ ಕಾಪಾಡಿಕೊಳ್ಳದಿರುವುದು
೫. ಶೌಚ ಪ್ರಕ್ರಿಯೆ ಸರಿಯಾಗಿ ಆಗದಿರುವುದು (ಬಯಲು ಬಹಿರ್ದೆಸೆ)

**ಜೀವನಚಕ್ರ :** ಪರವಾಲಂಬಿ ಜೀವಿಗಳು ಸಾಮಾನ್ಯವಾಗಿ ಮಲಿನ ಆಹಾರ / ನೀರು ಸೇವಿಸಿದಾಗ ಅಥವಾ ಮಲಿನ ಮಣ್ಣಿನೊಂದಿಗೆ ನೇರ ಸಂಪರ್ಕವಾದಾಗ ದೇಹವನ್ನು ಪ್ರವೇಶಿಸುತ್ತವೆ. ಕೆಲವೊಂದು ಜೀವಿಗಳು ನೇರವಾಗಿ ಕಾಲಿನಚರ್ಮವನ್ನು ಭೇದಿಸಿ ದೇಹವನ್ನು ಹೊಕ್ಕರೆ, ಇನ್ನು ಕೆಲವೊಂದು ಜೀವಿಗಳು ತನ್ನ ಮೊಟ್ಟೆಗಳ ಮೂಲಕ ದೇಹವನ್ನು ಸೇರುತ್ತವೆ. ಇಂತಹ ಮೊಟ್ಟೆಗಳು ಜಠರದಲ್ಲಿ ಒಡೆಯುತ್ತವೆ. ಕರುಳಿನ ಪದರಗಳ ಮೂಲಕ ಕೊರೆದುಕೊಂಡು ಸಾಗುತ್ತಾ ರಕ್ತದ ಮೂಲಕ ಶ್ವಾಸಕೋಶವನ್ನು ಸೇರುತ್ತವೆ. ಅಲ್ಲಿ ಗಾಳಿಗೂಡುಗಳನ್ನು (alveoli) ಸೇರಿ, ಶ್ವಾಸನಾಳದ ಮೂಲಕ ಮೇಲೆ ಸಾಗಿ ಕೆಮ್ಮಲ್ಪಟ್ಟು ಮತ್ತೆ ನುಂಗಲ್ಪಡುತ್ತವೆ. ಇಂತಹ ಮರಿಗಳು ಎರಡನೇ ಬಾರಿ ಜಠರದ ಮೂಲಕ ಕರುಳನ್ನು ಸೇರುತ್ತವೆ ಮತ್ತು ಅಲ್ಲಿಯೇ ಬೆಳೆದು ಮೊಟ್ಟೆಗಳನ್ನು ಇಡಲು ಆರಂಭಿಸುತ್ತವೆ.



ಕೊಕ್ಕೆ ಹುಳುವಿನ ಜೀವನ ಚಕ್ರ

ಕೊಕ್ಕೆಹುಳುಗಳಂತೂ ಇತರೆ ಹುಳುಗಳ ರೀತಿ ಆಹಾರದ ಮೂಲಕ ದೇಹ ಸೇರದೆ, ಲಾರ್ವಗಳ ಮೂಲಕ ದೇಹವನ್ನು ಪ್ರವೇಶಿಸುತ್ತವೆ. ಮಾನವ ದೇಹದ ಉಷ್ಣದಿಂದ ಆಕರ್ಷಿತವಾದ ಲಾರ್ವಗಳು ಚರ್ಮ ತೂರಿಕೊಂಡು ಒಳಪ್ರವೇಶಿಸಿ ರಕ್ತದ ಮೂಲಕ ಯಕೃತ್, ಹೃದಯ, ಶ್ವಾಸಕೋಶ, ಶ್ವಾಸನಾಳಗಳಲ್ಲಿ ಸಂಚರಿಸಿ ಅನ್ನನಾಳದ ಮೂಲಕ ಕರುಳನ್ನು ಸೇರಿ ತನ್ನ ಚೂಪಾದ ಹಲ್ಲುಗಳ ಸಹಾಯದಿಂದ ಕರುಳಿನ ಗೋಡೆಗೆ ಬಾಯಿ ಹಚ್ಚಿ ರಕ್ತವನ್ನು ಹೀರುತ್ತಾ ಬೆಳೆದು ಮೊಟ್ಟೆಗಳನ್ನು ಇಡಲಾರಂಭಿಸುತ್ತವೆ. ಆಹಾರದಲ್ಲಿನ ಪೋಷಕಾಂಶಗಳ ಹೀರುವಿಕೆಯಿಂದ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ.

**ಸೋಂಕಿನ ಲಕ್ಷಣಗಳು:**

ರೋಗ ಲಕ್ಷಣಗಳು ನಮ್ಮ ದೇಹದಲ್ಲಿರುವ ಹುಳುಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹುಳುಗಳ ಸಂಖ್ಯೆ ಕಡಿಮೆ ಇದ್ದಲ್ಲಿ ಸೋಂಕಿನ ಯಾವುದೇ ರೋಗ ಲಕ್ಷಣಗಳು ಕಂಡುಬರುವುದಿಲ್ಲ. ಹೊಟ್ಟೆ ನೋವು, ಅಜೀರ್ಣ, ತೂಕ ಇಳಿಕೆ, ದೈಹಿಕ ದುರ್ಬಲತೆ, ವಾಕರಿಕೆ ಮತ್ತು ವಾಂತಿ ಅಥವಾ ಅತಿಸಾರ, ಆಯಾಸ, ನಿರ್ಜಲೀಕರಣ, ಚರ್ಮ ಕೆಂಪಾಗಿ ಕಿರಿಕಿರಿ, ತುರಿಕೆ, ಮತ್ತೆ ಮತ್ತೆ ಮೂತ್ರವಿಸರ್ಜನೆ, ಮಲದೊಂದಿಗೆ ರಕ್ತ ಹೋಗುವ ಲಕ್ಷಣಗಳು ಸಾಮಾನ್ಯವಾಗಿ ಕಾಣುತ್ತವೆ. ರಾತ್ರಿ ಪದೇ ಪದೇ ಎಚ್ಚರವಾಗುವುದು, ನಿದ್ರೆ ಬಾರದಿರುವುದು ಮತ್ತೊಂದು ಲಕ್ಷಣ. ಹುಳುಗಳುಮೊಟ್ಟೆ ಇಡುವ ಸಂದರ್ಭದಲ್ಲಿ ವಿಷಕಾರಿ ರಾಸಾಯನಿಕಗಳು ರಕ್ತ ಸೇರಿ ಮೆದುಳಿನವರೆಗೂಸಂಚರಿಸಿ ಮಾನಸಿಕ, ನರ ದೌರ್ಬಲ್ಯಗಳಿಗೂ ಕಾರಣವಾಗುತ್ತದೆ. ತೀವ್ರತರವಾದ ಪೋಷಕಾಂಶಗಳಕೊರತೆ ಇದ್ದಾಗ ಅದು ಮಕ್ಕಳ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯದ ಬೆಳವಣಿಗೆಗೂ

ಮಾರಕವಾಗುತ್ತದೆ. ಕೆಲವೊಮ್ಮೆ ಈ ಹುಳುಗಳು ಶ್ವಾಸಕೋಶದಲ್ಲಿ, ಮೆದುಳಿನಲ್ಲಿ ನೆಲೆ ನಿಂತುಅವುಗಳ ದೀರ್ಘಕಾಲದ ಸೋಂಕಿಗೆ ಕಾರಣವಾಗುತ್ತವೆ.

**ಪರೀಕ್ಷೆಗಳು :** ಸಾಮಾನ್ಯವಾಗಿ ಈ ಹುಳುಗಳ ಸೋಂಕನ್ನು ದೇಹದಲ್ಲಿನ ರೋಗ ಲಕ್ಷಣಗಳಿಂದಲೇ ಕಂಡುಹಿಡಿಯಲಾಗುತ್ತದೆ ಇನ್ನು ಕೆಲವೊಮ್ಮೆ ಮಲದಲ್ಲಿ ಈ ಹುಳುಗಳು ಕಾಣಿಸುತ್ತವೆ ಮಲಪರೀಕ್ಷೆಯಿಂದ ಈ ಹುಳುಗಳ ಮತ್ತು ಅದರ ಮೊಟ್ಟೆಗಳನ್ನು ನೋಡಬಹುದು ಕೆಲವೊಮ್ಮೆ ದೇಹದಲ್ಲಿನ ಪ್ರತಿರೋಧ ಕಾಯಗಳನ್ನು ಪರೀಕ್ಷಿಸುವುದರಿಂದ ಹುಳುಗಳ ಇರುವಿಕೆಯನ್ನು ಕಂಡುಕೊಳ್ಳಬಹುದು.

**ಚಿಕಿತ್ಸೆಗಳು :** ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು ಮಾಡಿರುವ ಔಷಧಗಳು ಆಲ್ಬೆಂಡ ಜೋಲ್, ಮೇಬೆನ್ಡೇಝೋಲ್, ಲವಮಿಸೋಲ್, ಪರ್ಯಂತೆಲ್ ಪಾಮೋಟ್, ಟ್ರಿಬೆಂಡಿನಮೈಡ್. ಈ ಎಲ್ಲಾ ಔಷಧಗಳು ಹುಳಗಳನ್ನು ಸಂಹರಿಸಲು ಪರಿಣಾಮಕಾರಿಯಾಗಿದೆ. ನಮ್ಮ ದೇಶದಲ್ಲಿ ಹುಳುಗಳ ಹಾವಳಿ ವ್ಯಾಪಕವಾಗಿರುವುದರಿಂದ ಪ್ರತಿಯೊಬ್ಬರು ಪ್ರತಿ ೬ ತಿಂಗಳಿಗೊಮ್ಮೆ ಔಷಧಿ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಹಾಗಾಗಿ ಕೇಂದ್ರ ಸರಕಾರವು ಫೆಬ್ರವರಿ ೧೦, ೨೦೧೫ ರಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್‌ನ ಭಾಗವಾಗಿ "ರಾಷ್ಟ್ರೀಯ ಜಂತುಹುಳು ನಿವಾರಣ ದಿನ"ವನ್ನು ಆರಂಭಿಸಿ, ಪ್ರತಿ ಆರು ತಿಂಗಳಿಗೊಮ್ಮೆ ಒಂದರಿಂದ ಹತ್ತೊಂಬತ್ತು ವರ್ಷದ ಒಳಗಿನ ಮಕ್ಕಳಿಗೆ ಕಡ್ಡಾಯವಾಗಿ ಜಂತುಹುಳು ನಿವಾರಣ ಮಾತ್ರೆಗಳನ್ನು ಎಲ್ಲಾ ಅಂಗನವಾಡಿ, ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲಾಕಾಲೇಜು ಮಕ್ಕಳಿಗೆ ಉಚಿತವಾಗಿ ವಿತರಿಸಲಾಗುತ್ತದೆ. ಆ ದಿನದಂದು ಜಂತು ಹುಳುಗಳ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇದರಿಂದ ಸುಮಾರು ೨೨೦ ಮಿಲಿಯನ್ ಮಕ್ಕಳಿಗೆ ಲಾಭವಾಗುತ್ತಿದೆ.




**ತಡಗಟ್ಟುವಿಕೆ :**

೧. ಬಯಲು ಶೌಚ ಮಾಡದಿರುವುದು.

೨. ತರಕಾರಿ ಮತ್ತು ಹಣ್ಣುಗಳನ್ನು ಚೆನ್ನಾಗಿ ತೊಳೆದು ಬಳಸುವುದು.

೩. ಮಾಂಸಹಾರವನ್ನು ಚೆನ್ನಾಗಿ ಬೇಯಿಸಿ ತಿನ್ನುವುದು.

೪. ಶುದ್ಧ ನೀರನ್ನು ಬಳಸುವುದು ಮತ್ತು ಆಹಾರವನ್ನು ಮುಚ್ಚಿಡುವುದು.

೫. ಉಗುರುಗಳನ್ನು ಸ್ವಚ್ಛ ಮತ್ತು ಚಿಕ್ಕದಾಗಿ ಇಟ್ಟುಕೊಳ್ಳುವುದು.

೬. ಚಪ್ಪಲಿ ಅಥವಾ ಬೂಟ್ ಧರಿಸುವುದು.

೭. ಊಟಕ್ಕೂ ಮೊದಲು ಹಾಗೂ ಶೌಚಾಲಯ ಉಪಯೋಗಿಸಿದ ನಂತರ ಸಾಬೂನಿನಿಂದ ಕೈ ತೊಳೆಯುವುದು.

೮. ಮನೆಯ ಒಳಗಿನ ಮತ್ತು ಹೊರಗಿನ ವಾತಾವರಣವನ್ನು ಯಾವಾಗಲೂ ಅಚ್ಚುಕಟ್ಟಾಗಿ ಮತ್ತು ಸ್ವಚ್ಛವಾಗಿ ಇರಿಸುವುದು.

೯. ರೈತರು ಮಣ್ಣು ಮತ್ತು ಗೊಬ್ಬರವನ್ನು ಮುಟ್ಟುವಾಗ ಕೈಗೆ ಮತ್ತು ಕಾಲಿಗೆ ರಕ್ಷಾ ಕವಚ ಹಾಕಿಕೊಳ್ಳುವುದು.

ವೈದ್ಯ ಲೋಕದ ವಿಸ್ಮಯಗಳು

# ಪ್ರಾಚೀನ ರೋಮಿನ ಮಿಲಿಟರಿ ಆಸ್ಪತ್ರೆಗಳು




**ಡಾ. ನಾ. ಸೋಮೇಶ್ವರ್**
ವಿಭಾಗೀಯ ಸಂಪಾದಕರು
ಮತ್ತು ಲೇಖಕರು, ಬೆಂಗಳೂರು

ಜಗತ್ತಿನ ಮಹಾ ಸಾಮ್ರಾಜ್ಯಗಳಲ್ಲಿ ರೋಮನ್ ಸಾಮ್ರಾಜ್ಯವೂ ಒಂದು. ಇದು ಕ್ರಿ.ಪೂ.೨೭ರಲ್ಲಿ ಆರಂಭವಾಗಿ ಕ್ರಿ.ಶ.೪೭೬ರವರೆಗೆ ಮುಂದುವರೆಯಿತು. ರೋಮನ್ ಸಾಮ್ರಾಜ್ಯವು ತನ್ನ ವಾಸ್ತು ರಚನೆಗಳಿಂದ, ತನ್ನ ಅದ್ಭುತ ಇಂಜಿನಿಯರಿಂಗ್ ತಂತ್ರಜ್ಞಾನದಿಂದ ಹಾಗೂ ತನ್ನ ಆಡಳಿತದಿಂದ ವಿಶ್ವವಿಖ್ಯಾತವಾಗಿದೆ. ರೋಮನ್ನರ ವ್ಯವಸ್ಥಿತ ಆಡಳಿತಕ್ಕೆ ಅತ್ಯುತ್ತಮ ಉದಾಹರಣೆ 'ವ್ಯಾಲೆಟುಡಿನೇರಿಯ'ಗಳ ರಚನೆ. ವ್ಯಾಲೆಟುಡೇರಿಯ, ಪ್ರಾಚೀನ ಜಗತ್ತಿನ ಅಧಿಕೃತವಾಗಿ ದಾಖಲಾಗಿರುವ ಪ್ರಪ್ರಥಮ ಮಿಲಿಟರಿ ಆಸ್ಪತ್ರೆಯಾಗಿದೆ. ರೋಮನ್ನರ ಮಿಲಿಟರಿ ಆಸ್ಪತ್ರೆಗಳ ಪರಿಕಲ್ಪನೆಯು ಅದ್ಭುತವಾಗಿದೆ.

ಒಂದು ಸಾಮ್ರಾಜ್ಯವು ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬೇಕಾದರೆ ಆ ಸಾಮ್ರಾಜ್ಯದ ಸೈನ್ಯವು ಸರ್ವಸನ್ನದ್ಧವಾಗಿರಬೇಕು. ಸೈನಿಕರಲ್ಲಿ ತೃಪ್ತಿಯಿರಬೇಕು. ಅರಸನಲ್ಲಿ ನಂಬಿಕೆಯಿರಬೇಕು. ದೇಶಕ್ಕಾಗಿ ಆತ್ಮಾರ್ಪಣೆಯನ್ನು ಮಾಡಿಕೊಳ್ಳಲು ಹಿಂದೆಗೆಯದ ಕೆಚ್ಚೆದೆಯಿರಬೇಕು. ಅರಸನಾದವನು ತಾನು ಸೈನಿಕರ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದೇನೆ ಎನ್ನುವುದಕ್ಕೆ ಪ್ರತ್ಯಕ್ಷ ಪುರಾವೆಗಳನ್ನು ಒದಗಿಸುತ್ತಿರಬೇಕು.ರೋಮನ್ ಅರಸರು ಇಂತಹ ಸೈನ್ಯವನ್ನು ಕಟ್ಟಿದರು. ಹಾಗಾಗಿ 'ಸೈನಿಕರ ಯೋಗಕ್ಷೇಮಕ್ಕಿಂತ ಹೆಚ್ಚಿನದು ಮತ್ತೊಂದಿಲ್ಲ' ಎನ್ನುವುದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ 'ವ್ಯಾಲೆಟುಡಿನೇರಿಯ'ಎಂಬ ಮಿಲಿಟರಿ ಆಸ್ಪತ್ರೆಗಳನ್ನು ಕಟ್ಟಿಸಿದರು. ಇದು ರೋಮನ್ ಅರಸರ ಬುದ್ಧಿವಂತಿಕೆಗೆ, ಮುತ್ಸದ್ದಿತನಕ್ಕೆ ಹಾಗೂ ಸೈನಿಕರ ಸ್ವಾಸ್ಥ್ಯದೆಡೆಗೆ ಅವರಿಗಿದ್ದ ಪ್ರಾಮಾಣಿಕತೆಗೆ ಸಾಕ್ಷಿಯಾಯಿತು. ವ್ಯಾಲೆಟುಡಿನೇರಿಯಗಳು ರೋಮನ್ ಸೈನಿಕರಿಗೆ ಅಗತ್ಯವಿದ್ದ ಎಲ್ಲ ರೀತಿಯ ವೈದ್ಯಕೀಯ ಅನುಕೂಲತೆಗಳನ್ನು ಮಾಡಿಕೊಡುವುದರ ಜೊತೆಯಲ್ಲಿ ಆಧುನಿಕ ಆಸ್ಪತ್ರೆಗಳು ಅಸ್ತಿತ್ವಕ್ಕೆ ಬರಲು ಭದ್ರವಾದ ಬುನಾದಿಯನ್ನು ಹಾಕಿತು.

**ಆರಂಭ:** ಪ್ರಾಚೀನ ಜಗತ್ತಿನಲ್ಲಿ ನಡೆಯುತ್ತಿದ್ದ ಯುದ್ಧಗಳಲ್ಲಿ ಗಾಯಗೊಳ್ಳುವ ಸೈನಿಕರಿಗಾಗಿ ಸುಸಜ್ಜಿತ ಆಸ್ಪತ್ರೆಗಳು ಇರುತ್ತಿರಲಿಲ್ಲ. ರಣರಂಗದಿಂದ ಸಾಕಷ್ಟು ದೂರದಲ್ಲಿ ಬಿಡಾರಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗಳು ನಿರ್ಮಾಣವಾಗುತ್ತಿದ್ದವು. ಇಲ್ಲಿ ಪ್ರಾಥಮಿಕ ಚಿಕಿತ್ಸೆಯ ಅನುಕೂಲತೆಗಳಿರುತ್ತಿದ್ದವು ಅಷ್ಟೇ. ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆಗಳಾಗಲಿ ಅಥವ ಪುನರ್ವಸತಿಯ ಅನುಕೂಲತೆಗಳಾಗಲಿ ಇರುತ್ತಿರಲಿಲ್ಲ. ಗಾಯಗೊಂಡ ರೋಗಿಗಳಿಗೆ ಸಾವು ಬೇಗ ಬರುತ್ತಿರಲಿಲ್ಲ. ಅವರು ನರಳಿ ನರಳಿ ಸಾಯುವುದು ಅನಿವಾರ್ಯವಾಗುತ್ತಿತ್ತು.




ಕ್ರಿ.ಪೂ.೧ನೆಯ ಶತಮಾನದ ವೇಳೆಗೆ ರೋಮನ್ನರ ಮಹತ್ವಾಕಾಂಕ್ಷೆಯು ತೀವ್ರವಾಗಿ ಬೆಳೆಯಿತು. ಚಕ್ರವರ್ತಿ ಗೈಸ್ ಜೂಲಿಯಸ್ ಸೀಸರ್ ಅಗಸ್ಟಸ್ ಸೈನ್ಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ. ಅತ್ಯಂತ ಸಮರ್ಥವಾದ, ಶಿಸ್ತುಬದ್ಧವಾದ

ಹಾಗೂ ಯಾವ ಕ್ಷಣದಲ್ಲಾದರೂ ಯುದ್ಧ ಸನ್ನದ್ಧವಾದ ಸೈನ್ಯವನ್ನು ಕಟ್ಟಲು ತೀರ್ಮಾನವನ್ನು ತೆಗೆದುಕೊಂಡ. ಆ ದಿಶೆಯಲ್ಲಿ ಸೈನಿಕರ ನಂಬಿಕೆ ಹಾಗೂ ವಿಶ್ವಾಸವನ್ನು ಪಡೆಯಲು, ತಾತ್ಕಾಲಿಕ ಹಾಗೂ ಸಂಚಾರಿ ಆಸ್ಪತ್ರೆಗಳ ಬದಲು 'ವ್ಯಾಲೆಟುಡಿನೇರಿಯ' ಎಂಬ ಸ್ಥಿರ ಆಸ್ಪತ್ರೆಗಳನ್ನು ಕಟ್ಟಿಸಿದ. ಗಾಯಾಳುಗಳು ಹಾಗೂ ಅಸ್ವಸ್ಥರು ಇಲ್ಲಿ ಅತ್ಯುತ್ತಮ ಆರೈಕೆಯನ್ನು ಪಡೆದು, ಸಾಕಷ್ಟು ವಿಶ್ರಾಂತಿಯನ್ನು ತೆಗೆದುಕೊಂಡು, ಯುದ್ಧ ಸನ್ನದ್ಧರಾಗಿ ಸೈನ್ಯದ ಕರೆಗಾಗಿ ಕಾಯುವ ಪುನಶ್ಚೇತನಾ ಕೇಂದ್ರಗಳಾಗಿ ಇವು ಅತ್ಯಲ್ಪ ಕಾಲದಲ್ಲಿ ಪ್ರಸಿದ್ಧವಾದವು.

ವ್ಯಾಲೆಟುಡಿನೇರಿಯ ಎಂಬುದು ಲ್ಯಾಟಿನ್ ಮೂಲದ ಶಬ್ದ. 'ವೀಲೆಟುಡು' ಎಂಬುದು ಕಾಂಡ ಶಬ್ದ. 'ಆರೋಗ್ಯ' ಅಥವ 'ಸ್ವಾಸ್ಥ್ಯ' ಎನ್ನುವುದು ಇದರ ಮೂಲ ಅರ್ಥ. ಆರಂಭದ ದಿನಗಳಲ್ಲಿ ಈ ಆಸ್ಪತ್ರೆಗಳು ರೋಮ್ ಸಾಮ್ರಾಜ್ಯದ ಕೋಟೆಗಳ ಒಳಗೆ ಇರುತ್ತಿದ್ದವು. ಹಾಗಾಗಿ ಯಾವುದೇ ಯುದ್ಧದ ಸಂದರ್ಭದಲ್ಲಿ ಗಾಯಾಳುಗಳನ್ನು ಎಲ್ಲಿ ಸಾಗಿಸಬೇಕು ಹಾಗೂ ಹೇಗೆ ಸಾಗಿಸಬೇಕು ಎಂಬುದರ ಬಗ್ಗೆ ಸ್ಪಷ್ಟ ಮಾರ್ಗದರ್ಶನವು ಇರುತ್ತಿತ್ತು. ರೋಮನ್ ಯೋಜನೆ, ಪ್ರಮಾಣ ಬದ್ಧ ಸೇವೆ ಹಾಗೂ ಶಿಸ್ತಿಗೆ ವ್ಯಾಲೆಟುಡಿನೇರಿಯ ಮಾದರಿಯಾಗಿತ್ತು. ಹಾಗಾಗಿ ರೋಮ್ ಸಾಮ್ರಾಜ್ಯದಲ್ಲಿರುವ ಎಲ್ಲ ವ್ಯಾಲೆಟುಡಿನೇರಿಯಗಳ ನಿರ್ಮಾಣವು ಪೂರ್ವ ನಿರ್ಣೀತ ಕಟ್ಟುಪಾಡುಗಳಿಗೆ ಅನುಗುಣವಾಗಿ ನಿರ್ಮಾಣವಾಗಿದ್ದವು.

**ವಾಸ್ತು ಮತ್ತು ವಿನ್ಯಾಸ:** ವ್ಯಾಲೆಟುಡಿನೇರಿಯ ಸಾಮಾನ್ಯವಾಗಿ ದೀರ್ಘ ಚತುರಸ್ರ / ಆಯತಾಕಾರ / ರೆಕ್ಟ್ಯಾಂಗಲ್ ಆಕಾರದಲ್ಲಿ ಇರುತ್ತಿದ್ದವು. ಕಟ್ಟಡದ ಮಧ್ಯದಲ್ಲಿ ಒಂದು ದೊಡ್ಡ ಅಂಗಳವಿರುತ್ತಿತ್ತು. ಉಳಿದ ಸಾಮಾನ್ಯ ರಚನೆಯನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.



- **ವಾರ್ಡುಗಳು:** ಅತ್ಯಂತ ಹೊರಗೆ, ಆಸ್ಪತ್ರೆಯ ಗೋಡೆಗಳಿಗೆ ಅಂಟಿಕೊಂಡಂತೆ ರೋಗಿಗಳ ವಾರ್ಡುಗಳು ಇರುತ್ತಿದ್ದವು. ಒಂದು ವಾರ್ಡಿನಲ್ಲಿ ೪–೬ ರೋಗಿಗಳು ಮಾತ್ರ ಇರಲು ಅವಕಾಶವಿತ್ತು. ಏಕೆಂದರೆ ರೋಗಿಗಳು ಸಂಖ್ಯೆ ಕಡಿಮೆ ಇದ್ದಷ್ಟು, ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಧ್ಯತೆಯು ಕಡಿಮೆ ಇರುತ್ತಿತ್ತು.
- **ಶಸ್ತ್ರಚಿಕಿತ್ಸಾಲಯ:** ಆಪರೇಷನ್ ಥಿಯೇಟರ್ ಪ್ರತ್ಯೇಕವಾಗಿ ಇರುತ್ತಿತ್ತು. ಶಸ್ತ್ರಚಿಕಿತ್ಸೆಗೆ ಬೇಕಾದ ಎಲ್ಲ ರೀತಿಯ ಉಪಕರಣಗಳು ಅಲ್ಲಿ ಇರುತ್ತಿದ್ದವು.
- **ಉಗ್ರಾಣಗಳು:** ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡಲು ಬೇಕಾದ ಎಲ್ಲ ವಸ್ತುಗಳ – ಮೂಲಿಕೆಗಳು, ಬ್ಯಾಂಡೇಜುಗಳು, ಶಸ್ತ್ರಚಿಕಿತ್ಸಾ ಉಪಕರಣಗಳು ಇತ್ಯಾದಿ – ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಇರುತ್ತಿದ್ದವು.
- ಅಡುಗೆ ಮನೆ ಮತ್ತು ಶೌಚಾಲಯ: ಆಸ್ಪತ್ರೆಗೆ ಇವೆರಡೂ ಮುಖ್ಯ. ರೋಗಿಗಳಿಗೆ ಅಗತ್ಯವಾದ ಪೌಷ್ಠಿಕ ಆಹಾರವನ್ನು ನೀಡಲು ಪ್ರತ್ಯೇಕ ಅಡುಗೆ ಮನೆ ಇರುತ್ತಿತ್ತು. ರೋಗಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿಗೆ ಪ್ರತ್ಯೇಕವಾದ ಶೌಚಾಲಯಗಳು ಇರುತ್ತಿದ್ದವು. ಒಬ್ಬ ರೋಗಿಯು ಶೀಘ್ರವಾಗಿ ಗುಣಮುಖನಾಗಬೇಕಾದರೆ ಅವನಿಗೆ ಪೌಷ್ಠಿಕ ಆಹಾರವು ಬೇಕು ಹಾಗೂ ಸ್ವಚ್ಛ ಪರಿಸರವಿರಬೇಕು ಎನ್ನುವ ತತ್ತ್ವವನ್ನು ತಿಳಿದಿದ್ದರು ಎನ್ನಬಹುದು.
- **ನೀರಿನ ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ:** ನೀರಿನ ಪೂರೈಕೆ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಂಬಂಧಪಟ್ಟ ಹಾಗೆ ಅತ್ಯುತ್ತಮ ಇಂಜಿನಿಯರಿಂಗ್ ವ್ಯವಸ್ಥೆಯನ್ನು ರೂಪಿಸಿದ್ದರು. ಅಡುಗೆ ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ಪದಾರ್ಥಗಳಿಂದ ಹಿಡಿದು, ಇಡೀ ಆಸ್ಪತ್ರೆಯಲ್ಲಿ ಉತ್ಪಾದನೆಯಾಗುತ್ತಿದ್ದ ಎಲ್ಲ

ತ್ಯಾಜ್ಯ ಪದಾರ್ಥಗಳ ಸುರಕ್ಷಿತ ವಿಲೇವಾರಿಗಾಗಿ ಒಳಚರಂಡಿ ವ್ಯವಸ್ಥೆಯು ಇರುತ್ತಿತ್ತು. ಇದರಿಂದ ಸೋಂಕು ಹರಡುವ ಸಾಧ್ಯತೆಯು ಕನಿಷ್ಠ ಪ್ರಮಾಣಕ್ಕೆ ಇಳಿದಿತ್ತು.

ರೋಮನ್ ಅರಸರು ಸೈನಿಕರ ಆರೋಗ್ಯಕ್ಕೆ ಕಟ್ಟಿಸಿದ ವ್ಯಾಲೆಟುಡಿನೇರಿಯ ಎಷ್ಟು ಕ್ರಮಬದ್ಧವಾದ ವಿನ್ಯಾಸವನ್ನು ಒಳಗೊಂಡಿತ್ತು ಹಾಗೂ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆಯು ಎಷ್ಟು ಕನಿಷ್ಠ ಪ್ರಮಾಣಕ್ಕೆ ಇಳಿದಿತ್ತು ಎನ್ನುವ ವಿಚಾರ, ಸೈನ್ಯದ ಬಗ್ಗೆ ರೋಮನ್ ಆಳರಸರ ಕಾಳಜಿ ಎಷ್ಟು ಉನ್ನತವಾಗಿತ್ತು ಎನ್ನುವುದನ್ನು ಮನಗಾಣಬಹುದು.




Fig. 15. General Plan of Roman Military Hospital at Novaesium near Düsseldorf. The assigning of the uses to the different parts of the building is conjectural.

**ವೈದ್ಯ ಮತ್ತು ವೈದ್ಯಕೀಯ:** ವ್ಯಾಲೆಟುಡಿನೇರಿಯದಲ್ಲಿದ್ದ ವೈದ್ಯರು ನಡೆಸುತ್ತಿದ್ದ ಚಿಕಿತ್ಸಾ ಪರಿಕಲ್ಪನೆಯನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದಾಗಿತ್ತು. ಮೊದಲನೆಯದಾಗಿ ಸಾಂಪ್ರದಾಯಿಕ ಗ್ರೀಕ್ ಚಿಕಿತ್ಸಾ ವ್ಯವಸ್ಥೆಯ ಅನುಕರಣೆ. ಹಿಪ್ಪೋಕ್ರೇಟ್ಸ್ ಮತ್ತು ಗ್ಯಾಲನ್ ಅವರ ಬೋಧನೆ ಮತ್ತು ಚಿಕಿತ್ಸಾ ಸ್ವರೂಪವನ್ನು ಯಥಾವತ್ ಬಳಸುತ್ತಿದ್ದರು. (ಬಹುಶಃ ಇದು ಯೂರೋಪಿನ ಮಧ್ಯಯುಗದವರೆಗೆ ಆಬಾಧಿತವಾಗಿ ಮುಂದುವರೆಯಿತು) ಎರಡನೆಯದಾಗಿ, ಅನುಭವ ಜನ್ಯ (ಎಂಪೆರಿಕಲ್) ಕಾದು ನೋಡುವ ತಂತ್ರವನ್ನು ಅನುಸರಿಸುತ್ತಿದ್ದರು. ಕೆಲವು ಪ್ರಕರಣಗಳಲ್ಲಿ ರೋಗ ಪ್ರಗತಿಯು ಯಾವ ಪ್ರಮಾಣದಲ್ಲಿ ಮುಂದುವರೆಯುತ್ತಿದೆ ಎನ್ನುವುದನ್ನು ಗಮನಿಸಿ ಚಿಕಿತ್ಸಾ ಸ್ವರೂಪವನ್ನು ನಿರ್ಣಯಿಸುತ್ತಿದ್ದರು. ಮೂರನೆಯದು ಪ್ರಾಯೋಗಿಕ ಅಥವ ಕಾರ್ಯೋಪಯೋಗಿ ವಿಧಾನ (ಪ್ರಾಕ್ಟಿಕಲ್). ಇಲ್ಲಿ ಆರೋಗ್ಯದ ಬಗ್ಗೆ ಇರುವ ಸಿದ್ಧಾಂತಗಳ ಬಗ್ಗೆ ಹೆಚ್ಚು ತಲೆಯನ್ನು ಕೆಡಿಸಿಕೊಳ್ಳದೇ, ಕಾರ್ಯೋಪಯೋಗಿ ವಿಧಾನಗಳ ಮೂಲಕ ತಾರ್ಕಿಕ ಚಿಕಿತ್ಸೆಯನ್ನು ನೀಡುವುದು.

**ಅಂದಿನ ಚಿಕಿತ್ಸಾ ಪದ್ಧತಿಯಲ್ಲಿ ಲಭ್ಯವಿದ್ದ ಮುಖ್ಯ ಅಂಗಗಳು.**

**ವೈದ್ಯರು ಮತ್ತು ಸಿಬ್ಬಂದಿ:** ವ್ಯಾಲೆಟುಡಿನೇರಿಯದಲ್ಲಿ 'ಮೆಡಿಸಿ' ಎಂಬ ಹೆಸರಿನ ವೈದ್ಯರು ಇರುತ್ತಿದ್ದರು. ಇವರಿಗೆ ನೆರವನ್ನು ನೀಡಲು 'ಕಪ್ಸಾರಿ'ಗಳಿದ್ದರು. ಗಾಯವನ್ನು ಸ್ವಚ್ಛಗೊಳಿಸಿ ಪಟ್ಟಿಯನ್ನು ಕಟ್ಟುವುದು ಇವರ ಮುಖ್ಯ ಕೆಲಸವಾಗಿತ್ತು. 'ಇಮ್ಯೂನ್ಸ್' ಎಂಬ ಯೋಧರು ಇರುತ್ತಿದ್ದರು. ಇವರು ಯುದ್ಧರಂಗಕ್ಕೆ ಹೋಗುತ್ತಿರಲಿಲ್ಲ. ಬದಲಿಗೆ ವೈದ್ಯಕೀಯದ ಮೂಲಭೂತ ತತ್ತ್ವಗಳನ್ನು ಕಲಿತುಕೊಂಡು ಚಿಕಿತ್ಸೆಯಲ್ಲಿ ನೆರವಾಗುತ್ತಿದ್ದರು.

**ವೈದ್ಯಕೀಯ ಸೇವೆಗಳು:**

- **ಗಾಯಗಳ ಆರೈಕೆ:** ಯುದ್ಧವೆಂದರೆ ಗಾಯಗಳಾಗುವುದು ಸಾಮಾನ್ಯ. ಗಾಯಗಳು ಹಲವು ವಿಧಗಳಿವೆ. ತರಚುಗಾಯ, ಸೀಳುಗಾಯ, ಚುಚ್ಚುಗಾಯ, ಮೂಳೆ ಮುರಿಯುವುದು, ಕೀಲು ತಪ್ಪುವುದು ಇತ್ಯಾದಿ. ವೈದ್ಯರು ಇವುಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡುತ್ತಿದ್ದರು. ವಿನಿಗರ್ ಮತ್ತು ಶುದ್ಧ ಜೇನುತುಪ್ಪವನ್ನು ಕ್ರಿಮಿನಾಶಕ ದ್ರಾವಣವನ್ನಾಗಿ ಉಪಯೋಗಿಸುತ್ತಿದ್ದರು.

- **ಶಸ್ತ್ರವೈದ್ಯ:** ಪ್ರಧಾನವಾಗಿ ಮೂರು ರೀತಿಯ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದವು. ಮೊದಲನೆಯದು ಅಂಗಛೇದನ. ಗುಣಪಡಿಸಲು ಸಾಧ್ಯವಿಲ್ಲ ಅಂಗವನ್ನು ಛೇದಿಸುವುದರಿಂದ ಸೈನಿಕ ಜೀವವನ್ನು ಉಳಿಸಬಹುದು ಎನ್ನುವುದು ಅವರಿಗೆ ತಿಳಿದಿತ್ತು. ದೇಹದ ವಿವಿಧ ಅಂಗಗಳಲ್ಲಿ ಚುಚ್ಚಿಕೊಂಡಿರಬಹುದಾದ ಬಾಣದ ತುದಿಯಂತಹ ಲೋಹಚೂರುಗಳನ್ನು ಸುರಕ್ಷಿತವಾಗಿ ಹೊರತೆಗೆದು ರಕ್ತಸ್ರಾವವನ್ನು ನಿಲ್ಲಿಸುತ್ತಿದ್ದರು. ಮೂರನೆಯದು ಕಪಾಲ ರಂಧ್ರನ (ಟ್ರಿಪನೇಶನ್). ತಲೆಗೆ ಪೆಟ್ಟು ಬಿದ್ದು, ಒಳಗಡೆ ರಕ್ತವು ಹೆಪ್ಪುಗಟ್ಟಿಕೊಂಡಿದ್ದಾಗ, ಕಪಾಲ

ರಂಧ್ರವನ್ನು ಕೊರೆದು, ಒಳಗೆ ಒತ್ತಡದಲ್ಲಿರುವ ರಕ್ತವನ್ನು ಹೊರಹರಿಯ ಬಿಡುತ್ತಿದ್ದರು.

- **ನಾರು ಬೇರಿನ ಚಿಕಿತ್ಸೆ:** ರೋಮನ್ನರು ನಾನಾ ಮೂಲಿಕೆಗಳನ್ನು ಹಾಗೂ ಬೇರುಗಳನ್ನು ತಮ್ಮ ಚಿಕಿತ್ಸೆಯಲ್ಲಿ ಬಳಸುತ್ತಿದ್ದರು. ಅವುಗಳಲ್ಲಿ ಬೆಳ್ಳುಳ್ಳಿ, ವಿಲ್ಲೋ ಬಾರ್ಕ್ ಮತ್ತು ಅಫೀಮು ಮುಖ್ಯವಾಗಿದ್ದವು. ನಮಗೆಲ್ಲ ತಿಳಿದಿರುವ ಹಾಗೆ ವಿಲ್ಲೋಬಾರ್ಕ್ ಜ್ವರವನ್ನು ಇಳಿಸುವ ಆಸ್ಪಿರಿನ್‌ನನ್ನು ಒಳಗೊಂಡ ತೊಗಟೆ. ಮುಂದೆ ಈ ತೊಗಟೆಯಿಂದಲೆ ಆಸ್ಪಿರಿನ್ ಔಷಧವನ್ನು ರೂಪಿಸಿದೆವು. ಆ ಆಸ್ಪಿರಿನ್‌ನನ್ನು ಇಂದಿಗೂ ಚಿಕಿತ್ಸೆಯಲ್ಲಿ ಬಳಸುತ್ತಿದ್ದೇವೆ. ಅಫೀಮನ್ನು ಪ್ರಧಾನವಾಗಿ ನೋವು ನಿವಾರಕ ಔಷಧವನ್ನಾಗಿ ಬಳಸುತ್ತಿದ್ದರು.

- **ಪುನರ್ವಸತಿ (ರಿಹ್ಯಾಬಿಲಿಟೇಶನ್):** ಒಂದು ರೋಗದಿಂದ ಗುಣಮುಖನಾದ ಸೈನಿಕನು ತಕ್ಷಣ ಯುದ್ಧರಂಗಕ್ಕೆ ಮರಳಬೇಕಾಗಿರಲಿಲ್ಲ. ಅವನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಪೂರ್ಣ ಚೇತರಿಸಿಕೊಂಡ ಮೇಲೆಯೇ ಆತನು ಮರಳಿ ಯುದ್ಧಕ್ಕೆ ತೆರಳಬೇಕಾಗಿತ್ತು.



- **ಸ್ವಚ್ಛತೆ:** ರೋಮನ್ ವ್ಯಾಲೆಟುಡಿನೇರಿಯದಲ್ಲಿ ಸ್ವಚ್ಛತೆಗೆ ಆದ್ಯತೆಯಿತ್ತು. ಶುದ್ಧ ಕುಡಿಯುವ ನೀರು, ಉತ್ತಮ ಒಳಚರಂಡಿಯ ವ್ಯವಸ್ಥೆಯ ಜೊತೆಯಲ್ಲಿ ರೋಗಿಗಳಿಗೆ ನಿತ್ಯ ಸ್ನಾನ ಮಾಡಲು ಅನುಕೂಲತೆಗಳಿದ್ದವು. ವೈಯುಕ್ತಿಕ ಸ್ವಚ್ಛತೆಯನ್ನು ನಿತ್ಯ ಪಾರಿಪಾಲಿಸುತ್ತಿದ್ದ ರೋಗಿಗಳು ಬೇಗ ಗುಣಮುಖರಾಗುತ್ತಿದ್ದರು ಹಾಗೂ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆಯು ತುಂಬಾ ಕಡಿಮೆಯಾಗುತ್ತಿತ್ತು.

- **ಪರಿಸರ:** ರೋಮಿನಲ್ಲಿ ಮಾರ್ಕಸ್ ಟೆರೆನ್ಷಿಯಸ್ ವಾರೊ (ಕ್ರಿ.ಪೂ.೧೧೬–ಕ್ರಿ.ಪೂ.೨೭) ಎಂಬ ವಿದ್ವಾಂಸನು ಚಕ್ರವರ್ತಿ ಅಗಸ್ಟಸ್‌ನ ಆಸ್ಥಾನದಲ್ಲಿದ್ದ. ಈತನು ನಮ್ಮ ಬರಿಗಣ್ಣಿಗೆ ಕಾಣದ ರೋಗಜನಕಗಳು ಇರುತ್ತವೆ ಎಂದು ನಂಬಿದ್ದ. ಸೂಕ್ಷ್ಮಜೀವಿಗಳ ಅಸ್ತಿತ್ವದ ಬಗ್ಗೆ ಬಲವಾಗಿ ವಾದಿಸುತ್ತಿದ್ದ ಇವನು, ಜೌಗುಪ್ರದೇಶದ ಗಾಳಿಯಲ್ಲಿ ಇವು ವ್ಯಾಪಕವಾಗಿರುತ್ತವೆ ಎಂದ. ಇಂತಹ ಪ್ರದೇಶಗಳಲ್ಲಿ ಜನವಸತಿ ಇರಬಾರದು ಎಂದ. ಏಕೆಂದರೆ ಇವು ಜೌಗುಪ್ರದೇಶದ ಗಾಳಿಯಲ್ಲಿ ಬೆರೆತು, ಆ ಪ್ರದೇಶದಲ್ಲಿ ವಾಸ ಮಾಡುವ ಜನರಲ್ಲಿ ನಾನಾ ಕಾಯಿಲೆಗಳನ್ನು ಉಂಟು ಮಾಡುತ್ತವೆ ಎಂದ. ಜೊತೆಯಲ್ಲಿ ನೀರಿನಲ್ಲಿ ಸೊಳ್ಳೆಗಳು ವರ್ಧಿಸುತ್ತವೆ ಎನ್ನುವುದು ಅವರಿಗೆ ತಿಳಿದಿತ್ತು. ಅವುಗಳ ಕಡಿತದಿಂದ ಪಾರಾಗಲು ವ್ಯಾಲೆಟುಡಿನೇರಿಯಗಳನ್ನು ನೀರಿನ ತಾಣಗಳಿಂದ ದೂರ ನಿರ್ಮಿಸುತ್ತಿದ್ದರು. ಸಾಮಾನ್ಯವಾಗಿ ಅರಣ್ಯದಿಂದ ಆವೃತವಾಗಿದ್ದ ಬೆಟ್ಟ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.

**ಪರಿಣಾಮ:** ರೋಮನ್ನರ ವ್ಯಾಲೆಟುಡಿನೇರಿಯಗಳು ರೋಮನ್ ಸೈನ್ಯದ ಮೇಲೆ ಅಪಾರ ಪರಿಣಾಮವನ್ನು ಬೀರಿದವು. ಸೈನಿಕರು ಉತ್ಸಾಹದಿಂದ ಯುದ್ಧಗಳಲ್ಲಿ ಪಾಲುಗೊಳ್ಳುತ್ತಿದ್ದರು. ಯುವಕರು ಸೈನ್ಯವನ್ನು ಸೇರಲು ಮುಂದೆ ಬರುತ್ತಿದ್ದರು. ರೋಮ್ ಅರಸರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಸೈನ್ಯದಲ್ಲಿ ಅಸ್ತಿತ್ವದಲ್ಲಿದ್ದ ಆಸ್ಪತ್ರೆಗಳು ಸಾರ್ವಜನಿಕ ಕ್ಷೇತ್ರವನ್ನೂ ಪ್ರವೇಶಿಸಿದವು. 'ಸಾರ್ವಜನಿಕ ನೈರ್ಮಲ್ಯ' ಎನ್ನುವ ಪರಿಕಲ್ಪನೆಯನ್ನು ಜನರು ಸ್ವಾಗತಿಸಿದರು. ರೋಮ್ ಸಾಮ್ರಾಜ್ಯದ ಅವನತಿಯ ಜೊತೆಯಲ್ಲಿ ವ್ಯಾಲೆಟುಡಿನೇರಿಯಗಳ ನಿರ್ಮಾಣವೂ ಕಡಿಮೆಯಾದವು. ಆದರೆ ವ್ಯಾಲೆಟುಡಿನೇರಿಯಗಳ ಪರಿಕಲ್ಪನೆಯು ಕ್ರೈಸ್ತ ಮತ್ತು ಇಸ್ಲಾಮ್ ದೇಶಗಳಲ್ಲಿ ಆಧುನಿಕ ಆಸ್ಪತ್ರೆಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡಿದವು.



## ಜೀವನ ಶೈಲಿ ಸೂತ್ರಗಳು

# ಉತ್ತಮ ಆರೋಗ್ಯಕ್ಕಾಗಿ ಸೂಕ್ತ ಜೀವನ ಶೈಲಿಯ ಸೂತ್ರಗಳು

**ಡಾ. ರಾಜಲಕ್ಷ್ಮಿ**
ಸ್ತ್ರೀರೋಗ ತಜ್ಞರು
ಉಡುಪಿ



**ಡಾ. ವೀಣಾ ಎಸ್. ಭಟ್**
ವಿಭಾಗೀಯ ಸಂಪಾದಕರು

"ಶರೀರಮಾಧ್ಯಂ ಖಲುಧರ್ಮ ಸಾಧನಂ" ಎಂಬ ಸುಭಾಷಿತದಂತೆ ಮನುಷ್ಯನ ಮೂಲಭೂತ ಹಕ್ಕುಗಳಲ್ಲಿ ಆರೋಗ್ಯ ಬಹಳ ಮುಖ್ಯವಾದದ್ದು. ಪ್ರತಿ ವ್ಯಕ್ತಿಗೂ ತನ್ನ ಆತ್ಮೋನ್ನತಿಗಾಗಿ, ಕುಟುಂಬದ ಕರ್ತವ್ಯ ನಿರ್ವಹಣೆ ಹಾಗೂ ತಾನು ಬದುಕುತ್ತಿರುವ ಸಮಾಜ ಋಣವನ್ನು ತೀರಿಸಲು ಉತ್ತಮ ಆರೋಗ್ಯವೇ ಬಹಳ ಪ್ರಮುಖವಾದ ಸಂಗತಿ.

ಆರೋಗ್ಯವೆಂದರೆ, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಕೇವಲ ರೋಗವಿಲ್ಲದಿರುವುದು ಎಂದಷ್ಟೇ ಅಲ್ಲ, ಇದೊಂದು ಪರಿಪೂರ್ಣ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸುಖಾನುಭವದ ಸ್ಥಿತಿ. ಇದನ್ನು ಯಾರಿಂದಲೂ ದಾನವಾಗಿ ಅಥವಾ ಎರವಲಾಗಿ ಪಡೆಯಲು ಸಾಧ್ಯವಾಗದೇ, ಸ್ವ-ಪ್ರಯತ್ನದಿಂದ, ಸಾಧನೆಯಿಂದಲೇ ಪಡೆಯಬೇಕಾದದ್ದು. ಆರೋಗ್ಯವು ನಿಂತ ನೀರಾಗಿರದೇ ಪ್ರತಿ ವ್ಯಕ್ತಿಯೂ ಕೂಡಾ ಇರುವ ಆರೋಗ್ಯ ಸ್ಥಿತಿಯನ್ನು ಇನ್ನಷ್ಟು ಸುಧಾರಿಸಿಕೊಳ್ಳುತ್ತಾ, ಹೆಚ್ಚು ಹೆಚ್ಚು ಆರೋಗ್ಯವಂತರಾಗಬಹುದು. ತನ್ನಲ್ಲಿ ಅಡಗಿರುವ ಚೈತನ್ಯ ಶಕ್ತಿಯನ್ನು ಉಪಯೋಗಿಸಿಕೊಂಡು ಶರೀರದ ಸಕಲ ಅವಯವಗಳೂ ಅತ್ಯುತ್ತಮ ಮಟ್ಟದಲ್ಲಿ ಜೀವಕ್ರಿಯೆಗಳನ್ನ ನಡೆಸಿ, ನಿಸರ್ಗದೊಡನೆ ಸಮತೋಲನ ಕಾಪಾಡಿಕೊಂಡಾಗ, ವ್ಯಕ್ತಿ ಸಂಪೂರ್ಣ ಆರೋಗ್ಯಪೂರ್ಣ ಜೀವನ ನಡೆಸುತ್ತಿದ್ದಾನೆ ಎಂದು ಪರಿಗಣಿಸಬಹುದು. ಶರೀರವು ಬಾಹ್ಯ ಮತ್ತು ಅಂತರಿಕ ಪರಿಸರದೊಡನೆ ಸಂಪೂರ್ಣ ಸಾಮರಸ್ಯ ಸಾಧಿಸಿದರೆ ಅದೇ ಆರೋಗ್ಯ. ಇಂತಹ ಸಾಮರಸ್ಯ ಸ್ಥಿತಿಯು ಯಾವುದರ ಮೇಲೆ ಅವಲಂಭಿಸಿದೆ ಎಂಬುದನ್ನು ಪ್ರತಿ ವ್ಯಕ್ತಿಯೂ ಅರಿತುಕೊಂಡು, ಅದನ್ನು ತಮ್ಮ ದಿನ ನಿತ್ಯದ ಜೀವನದಲ್ಲಿ ಬಹಳ ಎಚ್ಚರಿಕೆಯಿಂದ ಅಳವಡಿಸಿಕೊಂಡರೆ ಮಾತ್ರ ಆರೋಗ್ಯ ಸಿದ್ದಿ ಸಾಧ್ಯ. ಆರೋಗ್ಯ ಸ್ಥಿತಿ ಎಲ್ಲಿ ಮುಗಿದು ಅನಾರೋಗ್ಯ ಸ್ಥಿತಿ ಆರಂಭವಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಅನಾರೋಗ್ಯ ಸ್ಥಿತಿ ಅಥವಾ ರೋಗಗಳು ಆರೋಗ್ಯಕ್ಕೆ ಅವಶ್ಯಕವಾಗಿ ಬೇಕಾದ ಅಂತರಿಕ ಹೊಂದಾಣಿಕೆಗಳ ಪೂರ್ಣ ಅಥವಾ ಭಾಗಶಃ ವೈಫಲ್ಯ ಎನ್ನಬಹುದು. ಶಾರೀರಿಕ ಕ್ರಿಯೆಗಳಲ್ಲಿ ಅಸ್ತವ್ಯಸ್ತತೆಯನ್ನುಂಟುಮಾಡಿ ರೋಗಗಳಿಗೆ ಕಾರಣವಾಗುತ್ತವೆ. ಸೋಂಕು ರೋಗಗಳು (ವೈರಸ್, ಬ್ಯಾಕ್ಟೀರಿಯಾ, ಫಂಗಸ್ ಇನ್ನಿತರ ಸೂಕ್ಷ್ಮಾಣು ಜೀವಿಗಳಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳು,) ಭೌತ ಮತ್ತು ರಾಸಾಯನಿಕ ವಸ್ತುಗಳಿಂದಾಗಿ ಉಂಟಾಗುವ ಕಾಯಿಲೆಗಳು, ಅಪಘಾತ ಅಥವಾ ಪೆಟ್ಟಿನಿಂದ ಉಂಟಾಗುವ ಕಾಯಿಲೆಗಳು, ಅಪೌಷ್ಟಿಕತೆಯಿಂದ ಬರುವ ರೋಗಗಳು (ವಿಟಮಿನ್ ಬಿ, ಸಿ, ಎ ಇತ್ಯಾದಿಗಳ ಕೊರತೆ, ರಕ್ತಹೀನತೆ ಇತ್ಯಾದಿ) ಅಂಗಾಂಶಗಳ ಸವೆತದಿಂದಾಗುವ ರೋಗಗಳು (ಕಣ್ಣಿನ ಪೊರೆ, ಮೂಳೆ ಸವೆತ ಇತ್ಯಾದಿ) ಟ್ಯೂಮರ್ ಅಥವಾ ಹೊಸ ಹೊಸ ಗಡ್ಡೆಗಳ ಬೆಳವಣಿಗೆಯಿಂದ (ಸೌಮ್ಯ ಗಡ್ಡೆಗಳು ಹಾಗೂ ಕ್ಯಾನ್ಸರ್ ಗಡ್ಡೆಗಳು,) ಆಗುವ ಅನಾರೋಗ್ಯ ಸ್ಥಿತಿ, ಇವೆಲ್ಲದರ ಜೊತೆಗೆ ಸ್ವತಃ ಶರೀರದಲ್ಲೇ ಉಂಟಾಗುವ ಪ್ರತಿಕಾಯಗಳಿಂದ ಉಂಟಾಗುವ ಅನಾರೋಗ್ಯ (ಆಟೋ ಇಮ್ಯೂನ್ ಕಾಯಿಲೆ) ಇತ್ಯಾದಿ ಇತ್ಯಾದಿ ರೋಗಗಳಿಗೆ ಕಾರಣವಾಗಬಹುದು. ಇವೆಲ್ಲದರ ಹೊರತಾಗಿ ಅನುವಂಶೀಯವಾಗಿ ಬಳುವಳಿಯಾಗಿ ಬರುವ ಹಿಮೋಫಿಲಿಯಾ, ಥಲೆಸಿಮೀಯಾ

ಇನ್ನಿತರ ಸ್ಥಿತಿಗಳು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಇನ್ನೂ ಯಾವುದೇ ಸ್ಪಷ್ಟ ಕಾರಣಗಳಿಲ್ಲದ, ವೈದ್ಯ ವಿಜ್ಞಾನದ ವ್ಯಾಪ್ತಿಯಲ್ಲಿ ಲಭ್ಯವಿರುವ ವಿಧಾನಗಳಿಂದ, ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲದ ಹಲವಾರು ಕಾರಣಗಳಿಂದಲೂ ಅನಾರೋಗ್ಯ ಉಂಟಾಗಬಹುದು. ವೈದ್ಯವಿಜ್ಞಾನದ ಮುಖ್ಯ ಗುರಿ ಇರುವ ಆರೋಗ್ಯವನ್ನು ಉತ್ತಮ ಪಡಿಸುವುದು ಹಾಗೂ ರೋಗಬರದಂತೆ ತಡೆಯುವುದು, ಇದೆಲ್ಲಾ ಸಾಧ್ಯವಾಗದೇ ರೋಗಬಂದರೆ ಗುಣಪಡಿಸುವುದು.

ಇಂದು ವೈದ್ಯವಿಜ್ಞಾನವು ಅತ್ಯಂತ ಪ್ರಗತಿಯ ಹಾದಿಯಲ್ಲಿದ್ದು, ಸಿಡುಬು, ಪೋಲಿಯೊ ಇನ್ನಿತರ ಸಾಂಕ್ರಾಮಿಕಗಳನ್ನ ಜಯಿಸುತ್ತಾ ಮುನ್ನಡೆ ಸಾಧಿಸುತ್ತಿದೆ ಅಂದುಕೊಂಡರೂ ಇತ್ತೀಚಿನ ದಿನಗಳಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಅಸಾಂಕ್ರಾಮಿಕ ಕಾಯಿಲೆಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಬೊಜ್ಜು, ಹೃದಯ ರಕ್ತನಾಳಗಳ ಸಮಸ್ಯೆ, ಮೂಳೆಕೀಲುಗಳ ಸಮಸ್ಯೆ, ಕ್ಯಾನ್ಸರ್, ಪಾರ್ಶ್ವವಾಯು, ಆಟೋಇಮ್ಯೂನ್ ಕಾಯಿಲೆ ಇತ್ಯಾದಿಗಳೆಲ್ಲಾ ನಮ್ಮ ತಪ್ಪು ಜೀವನ ಶೈಲಿಯಿಂದ ಬರುವಂತಹ ಕಾಯಿಲೆಗಳು. ಇವುಗಳನ್ನು ತಡೆಗಟ್ಟಲು ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ, ದಿನದ ೨೪ ಗಂಟೆಯಲ್ಲಿ ನಾವು ಪಾಲಿಸಬೇಕಾದ ನಿಯಮಗಳು ಮತ್ತು ಇನ್ನಿತರ ಹಲವು ಆಯಾಮಗಳನ್ನ ಒಳಗೊಂಡ ಸುವ್ಯವಸ್ಥಿತ ಚಟುವಟಿಕೆಗಳೆಲ್ಲಾ ಸೇರಿ ಜೀವನಶೈಲಿ ಎನಿಸಿಕೊಳ್ಳುತ್ತದೆ. ಇವುಗಳನ್ನ ವ್ಯವಸ್ಥಿತ ಕ್ರಮದಲ್ಲಿ ಪಾಲಿಸಿದಾಗ ಇಂತಹ ಅಸಾಂಕ್ರಾಮಿಕ ಸ್ಥಿತಿಗಳು ಕಾಡುವ ಕಾಯಿಲೆಗಳಾಗದೇ ತಡೆಗಟ್ಟಬಹುದಾದ ಜೀವನ ವಿನ್ಯಾಸ ಎನಿಸಿಕೊಳ್ಳುತ್ತವೆ.

ಜೀವನಶೈಲಿ ನಮ್ಮ ಆಹಾರಕ್ರಮ, ದೈಹಿಕ ಶ್ರಮ, ನಿದ್ರೆ, ನಮ್ಮ ವೃತ್ತಿ, ನಮ್ಮ ಹವ್ಯಾಸಗಳು ಹಾಗೂ ನಮ್ಮ ಸುತ್ತಲಿನ ಪರಿಸರ, ನಮ್ಮ ಸಾಮಾಜಿಕ ಸ್ಪಂದನೆ, ಯಾಂತ್ರೀಕರಣ, ನಮ್ಮ ಮನಸ್ಸು, ಅಂತಹ ಮನಸ್ಸನ್ನು ಸ್ಥಿರಗೊಳಿಸುವಿಕೆಯತ್ತ ನಮ್ಮನ್ನು ಕೊಂಡೊಯ್ಯುವ ಧ್ಯಾನ, ಯೋಗ ಹೀಗೆ ಹಲವು ಆಯಾಮಗಳನ್ನ ಹೊಂದಿದೆ. ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಜೀವನಶೈಲಿ ಅಥವಾ ಧನಾತ್ಮಕ ಜೀವನಶೈಲಿಯ ಬಗ್ಗೆ ತಿಳಿದುಕೊಂಡು ಅವುಗಳನ್ನು ಅನುಸರಿಸುತ್ತಾ ತಮ್ಮ ಆರೋಗ್ಯ ಸೂಚ್ಯಾಂಕವನ್ನ ಹೆಚ್ಚಿಸಿಕೊಳ್ಳುತ್ತಾ ಸಾಗಬೇಕು.

ಹೀಗೆ ಅನಾರೋಗ್ಯದಿಂದ ಆರೋಗ್ಯದೆಡೆಗೆ ಪಯಣಿಸುವ ಹಾದಿ ಸುಗಮವಾಗಲು, ಉತ್ತಮ ಜೀವನಶೈಲಿ ಸೂತ್ರಗಳ ಬಗ್ಗೆ ಅರಿವು ಮೂಡಿಸಲು, ಜೀವನಶೈಲಿ ಸೂತ್ರಗಳು ಎಂಬ ಹೊಸ ಅಂಕಣವನ್ನು ವೈದ್ಯಸಂಪದದಲ್ಲಿ ಹೊಸದಾಗಿ ಅಳವಡಿಸಲಾಗಿದೆ.

ಈ ವಿಭಾಗಕ್ಕೆ ಮೊದಲ ಲೇಖನವನ್ನ ಕಳಿಸಿರುವ ಉಡುಪಿಯಲ್ಲಿ ಸ್ತ್ರೀರೋಗ ತಜ್ಞರಾಗಿರುವ ಡಾ. ರಾಜಲಕ್ಷ್ಮಿಯವರು ಸೂಕ್ತ ಜೀವನಶೈಲಿಯನ್ನು ಅನುಸರಿಸಿ ಉತ್ತಮ ಆರೋಗ್ಯವನ್ನು ಹೊಂದಲು ಕೆಲವು ಸೂತ್ರಗಳನ್ನ ಕೊಟ್ಟಿರುತ್ತಾರೆ. ಅವುಗಳನ್ನ ಓದಿ ಅರಿವು ಮೂಡಿಸಿಕೊಂಡು ಅನುಸರಿಸಿ ಸರ್ವರೂ ಆರೋಗ್ಯ ಪೂರ್ಣಜೀವನ ನಡೆಸಲಿ ಎಂದು ಆಶಿಸುತ್ತೇನೆ – ಡಾ. ವೀಣಾ ಎಸ್. ಭಟ್

**೧. ಹಿತಮಿತವಾದ ಆಹಾರ :** ಋತುಮಾನಕ್ಕೆ ಅನುಗುಣವಾಗಿ, ಸ್ಥಳೀಯವಾಗಿ ಬೆಳೆದ ಹವಾಮಾನಕ್ಕೊಪ್ಪುವ ಸಾಂಪ್ರದಾಯಿಕ ಆಹಾರ ಸೇವನೆ ದೇಹಕ್ಕೆ ಹಿತಕರ. ಸಮಯಕ್ಕೆ ಸರಿಯಾಗಿ ಸಮತೋಲಿತ, ಪೌಷ್ಠಿಕ ಆಹಾರ ಸೇವನೆ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ರಾತ್ರಿಯ ಭೋಜನ ಲಘುವಾಗಿದ್ದು, ಮಲಗುವ ಮೂರುತಾಸುಗಳ ಮುಂಚಿತವಾಗಿರಲಿ. ಒಮ್ಮೆಗೇ ಭಾರಿ ಭೋಜನ ಆರೋಗ್ಯಕ್ಕೆ ಹಿತಕರವಲ್ಲ. ಸೊಪ್ಪು, ತರಕಾರಿ, ಹಾಲು, ಹಣ್ಣು ಹಂಪಲು ನಿಮ್ಮ ಆಹಾರ ಕ್ರಮದಲ್ಲಿ ಹೇರಳವಾಗಿರಲಿ. ಅತೀ ಕೊಬ್ಬಿನಾಂಶ, ಸಿಹಿ, ತೈಲಯುಕ್ತ ಹಾಗೂ ಸಂಸ್ಕರಿತ ಆಹಾರವನ್ನು ತ್ಯಜಿಸಿ.




ಒಂದು ಹಿಡಿ ಉಣ್ಣುವವನು ಯೋಗಿ, ಬೊಗಸೆಯುಣ್ಣುವವನು ಭೋಗಿ, ಬೊಗಸೆಯಷ್ಟು ಪದೇ ಪದೇ ಉಣ್ಣುವವನು ರೋಗಿ. ನಿಮ್ಮ ಆಹಾರ ಸೇವನೆಯ ಪದ್ಧತಿ ನಿಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

**೨. ದ್ರವ ಪದಾರ್ಥಗಳು :** ದೇಹದ ಪ್ರತಿಯೊಂದು ಕಾರ್ಯಕ್ಕೂ ನೀರು ಅತ್ಯವಶ್ಯಕ. ದಿನಕ್ಕೆ ೬–೮ ಲೋಟ

ನೀರನ್ನು ಕುಡಿಯಿರಿ. ಪಚನಕ್ರಿಯೆ ಕ್ರಮಬದ್ಧವಾಗಿರಲು, ಮೂತ್ರದ ಸೋಂಕು, ಮಲಬದ್ಧತೆ, ಅತಿಯಾದ ಆಮ್ಲೀಯತೆ ನಿವಾರಣೆಗೆ ನೀರು ಬಲು ಉಪಯುಕ್ತ. ಜೊತೆಗೆ ಚರ್ಮವೂ ಕಾಂತಿಯುತವಾಗುತ್ತದೆ. ಎಳನೀರು, ಮಜ್ಜಿಗೆ, ರಾಗಿ ಅಂಬಲಿ ಮುಂತಾದ ಪಾನೀಯಗಳನ್ನು ಆಹಾರ ಕ್ರಮದಲ್ಲಿ ರೂಢಿಸಿಕೊಳ್ಳಿ. ಅಧಿಕ ಸಿಹಿ ಪಾನೀಯ, ಗಾಳಿ ತುಂಬಿದ ಲಘುಪಾನೀಯ ಹಾಗೂ ಮದ್ಯಪಾನದಿಂದ ದೂರವಿರಿ. ಕಾಫಿ, ಚಹಾದಂತಹ ಪಾನೀಯಗಳನ್ನು ಅತಿಯಾಗಿ ಬಳಸಬೇಡಿ, ಹೃದಯ, ಮೂತ್ರಪಿಂಡದ ಕಾಯಿಲೆಯಿರುವವರು, ಹಿರಿಯ ನಾಗರೀಕರು ದಿನದಲ್ಲಿ ಕುಡಿಯಬಹುದಾದ ನೀರಿನ ಪ್ರಮಾಣವನ್ನು ವೈದ್ಯರ ಸಲಹೆ ಮೇರೆಗೆ ನಿರ್ಧರಿಸಿ.

೩. **ವ್ಯಾಯಾಮ** : ನಸುಕಿನ ಜಾವದ ಲಘು ವ್ಯಾಯಾಮ ಆರೋಗ್ಯ ಕಾಪಾಡಲು ಬಲು ಸಹಕಾರಿ. ನಡಿಗೆ, ಯೋಗ, ಟೆನಿಸ್, ಬ್ಯಾಡ್ಮಿಂಟನ್ ಮುಂತಾದ ಆಟಗಳು ದೇಹದ ತೂಕವನ್ನು ನಿಯಂತ್ರಿಸಲು ಸಹಕರಿಸುವುದರೊಂದಿಗೆ ಮನಸ್ಸನ್ನೂ ಲವಲವಿಕೆಯಿಂದಿರಿಸುತ್ತದೆ. ಜಿಮ್, ವ್ಯಾಯಾಮಗಳಿಗೆ ನುರಿತ ಮಾರ್ಗದರ್ಶಕರ ನಿರ್ದೇಶನ ಹಾಗೂ ವೈದ್ಯರ ಸಲಹೆ ಪಡೆಯಿರಿ. ಶಾರೀರಿಕ ವ್ಯಾಯಾಮ ದೇಹದ ಸ್ನಾಯುಗಳನ್ನು ಸಡಿಲಿಸಿ ರಕ್ತಸಂಚಾರವನ್ನು ವ್ಯವಸ್ಥಿತವಾಗಿರಿಸಿ, ಮನಸ್ಸಿಗೆ ಉಲ್ಲಾಸ ಉತ್ಸಾಹವನ್ನು ನೀಡುತ್ತದೆ. ಅತಿ ರಕ್ತದೊತ್ತಡ, ಮಧುಮೇಹ, ಸ್ಥೂಲಕಾಯ ಮುಂತಾದ ಅಸಾಂಕ್ರಾಮಿಕ ಕಾಯಿಲೆಗಳನ್ನು ಹದ್ದು ಬಸ್ತಿನಲ್ಲಿರಿಸುತ್ತದೆ. ಅಲ್ಪ ಅವಧಿಗೆ ಸೂರ್ಯಕಿರಣಗಳಿಗೆ ಮೈಯೊಡ್ಡಿ ವಿಟಮಿನ್‌ಡಿಯನ್ನು ದೇಹಕ್ಕೆ ಒದಗಿಸಿಕೊಳ್ಳಿ.



೪. **ವಿಶ್ರಾಂತಿ** : ದಿನವಿಡೀ ದುಡಿದು ದಣಿದು ದೇಹಕ್ಕೆ ವಿಶ್ರಾಂತಿ ಅತ್ಯಗತ್ಯ. ೬–೮ ಗಂಟೆ ಕಾಲ ರಾತ್ರಿಯ ನಿದ್ದೆ ದೇಹದ ದೈನಂದಿನ ಆಗುಹೋಗುಗಳಿಗೆ ವಿರಾಮ ನೀಡಿ ದೇಹವನ್ನು ಮುಂದಿನ ದಿನದ ದಿನಚರಿಗೆ ಸಜ್ಜುಗೊಳಿಸುತ್ತದೆ. ಮಲಗುವ ಮುನ್ನ ಪ್ರಚೋದನಕಾರಿ ಕಾಫಿ, ಚಹಾವನ್ನು ಸೇವಿಸದಿರಿ. ಮಲಗುವ ಮುಂಚೆ ೬೦–೯೦ ನಿಮಿಷಗಳ ಕಾಲ ಯಾವುದೇ ಟಿ.ವಿ, ಮೊಬೈಲ್, ಕಂಪ್ಯೂಟರ್ ಪರದೆಗಳಿಂದ ದೂರವಿರಿ.

೫. ಬಿಡುವಿನ ಸಮಯವನ್ನು ಹಾಳು ಹರಟೆ, ಟಿ.ವಿ ವೀಕ್ಷಣೆಯಲ್ಲಿ ವ್ಯಯಿಸಬೇಡಿ. ಧ್ಯಾನ, ಸಂಗೀತ, ನೃತ್ಯ, ಭಜನೆ, ತೋಟಗಾರಿಕೆ, ಚಿತ್ರಬಿಡಿಸುವಿಕೆ, ಕಸೂತಿಯಂತಹ ಸೃಜನಶೀಲ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.

೬. ಹಾನಿಕಾರಕ ದುರಭ್ಯಾಸಗಳಾದ ಧೂಮಪಾನ, ಮದ್ಯಪಾನ, ತಂಬಾಕು, ಮಾದಕ ವಸ್ತುಗಳಿಂದ ಮಾರು ದೂರವಿರಿ.

೭. ತನುಮನದ ನೈರ್ಮಲ್ಯದ ಜೊತೆಗೆ ಪರಿಸರವನ್ನೂ ಸ್ವಚ್ಛವಾಗಿರಿಸಿ.

೮. ಸದಾ ಚಟುವಟಿಕೆಯಿಂದಿರಿ. ಧನಾತ್ಮಕ ಧೋರಣೆ ನಿಮ್ಮದಾಗಲಿ. ನಿಮ್ಮ ಪಂಚೇಂದ್ರಿಯಗಳಿಗೆ ನೀಡುವ ಪ್ರತಿಯೊಂದು ಆಹಾರವೂ ಸಾತ್ವಿಕವಾಗಿರಲಿ.

೯. ಆಧ್ಯಾತ್ಮಿಕ ಬೆಳವಣಿಗೆಗೂ ಅವಕಾಶ ಕಲ್ಪಿಸಿರಿ. ನಿಮ್ಮನ್ನು ನೀವು ಅರಿಯಿರಿ. ದಿನದ ೨೪ ಗಂಟೆಗಳಲ್ಲಿ ಕನಿಷ್ಠ ಒಂದು ಗಂಟೆಯನ್ನು ಆತ್ಮಾವಲೋಕನಕ್ಕೆ ಮೀಸಲಿಡಿ.

೧೦. ದೀರ್ಘವಾಗಿ ಉಸಿರಾಟ ನಡೆಸಿರಿ. ನಿರ್ವಹಿಸುವ ಪ್ರತಿಯೊಂದು ಕಾರ್ಯವನ್ನೂ ಮನವಿಟ್ಟು ನಿರ್ವಹಿಸಿರಿ.

೧೧. ಹದವರಿತು ಬಾಳಿರಿ. ನೀವು ಬದುಕಿ ಇತರರೂ ಬದುಕಲು ಅನುವು ಮಾಡಿ ಕೊಡಿರಿ.

೧೨. ವರ್ಷಕ್ಕೊಮ್ಮೆ ಕಾಯಿಲೆ ಇಲ್ಲದಿದ್ದರೂ ವೈದ್ಯರನ್ನು ಭೇಟಿಮಾಡಿ. ನಿಮ್ಮ ದೇಹದ ಹೃದಯ, ಶ್ವಾಸಕೋಶ, ಜಠರ, ಯಕೃತ್, ಮೂತ್ರಪಿಂಡಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಖಾತ್ರಿ ಮಾಡಿಕೊಳ್ಳಿ. ನಿಮ್ಮ ರಕ್ತಸಂಬಂಧಿಗಳಲ್ಲಿ ಕ್ಯಾನ್ಸರ್ ಕಾಯಿಲೆಯಿದ್ದಲ್ಲಿ ಅಗತ್ಯ ತಪಾಸಣೆ ಮತ್ತು ಸ್ಕ್ರೀನಿಂಗ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳಿರಿ. ಕಾಯಿಲೆ ಕದತಟ್ಟುವ ಮುನ್ನವೇ ರೋಗ ಪತ್ತೆಹಚ್ಚಲು ಲಭ್ಯವಿರುವ ಹಲವು ವಿಧಾನಗಳ ಸದ್ವಿನಿಯೋಗ ಮಾಡಿಕೊಳ್ಳಿರಿ.



## ವೈದ್ಯೇತರ

# ಕಾಯಿಲೆ–ಚಿಕಿತ್ಸೆ ಮತ್ತು ಬದಲಾಗುತ್ತಿರುವ ಕಾಲ

**ಡಾ. ಎಸ್. ಆರ್. ಕುಲಕರ್ಣಿ**
ವಿಕ್ರಮ ಕ್ಲಿನಿಕ್ ಮತ್ತು
ಅಲ್ಟ್ರಾಸೌಂಡ ಸ್ಕ್ಯಾನ್ ಸೆಂಟರ್, ಶಿಕಾರಿಪುರ



**ಡಾ. ಕಿರಣ ಪೇಟಕರ್**
ವಿಭಾಗೀಯ ಸಂಪಾದಕರು

**ಕಾ**ಯಿಲೆ ಹಿಂದೆ ಮತ್ತು ಇಂದು ಒಂದೇ ಇವೆಯಾ? ಆಗಿನ ಕಾಯಿಲೆಗೂ ಈಗಿನ ಕಾಯಿಲೆಗೂ ಬಹಳ ಅಂತರವಿದೆಯಾ? ಮೈಲಿಬೇನೆ, ಗುದ್ದವ್ವನ ಕಾಯಿಲೆ (ಪ್ಲೇಗ್) ಈ ಹೊಸ ಪೀಳಿಗೆಗೆ ಗೊತ್ತೆ ಇಲ್ಲ. ಪೋಲಿಯೊ, ಕಾಲೆರಾ ಪೂರ್ತಿ ನಿಯಂತ್ರಣದಲ್ಲಿವೆ. ಕಂಡು ಕೇಳರಿಯದ ಹೊಸಕಾಯಿಲೆ ಚಿಕನ್ ಗುನ್ಯಾ, ಡೆಂಗ್ಯೂ. ಇನ್ನು ಕೊರೋನಾ ಮಾಡಿದ ದಾಂಧಲೆ ಅನಾಹುತಕಾರಿ. ಇನ್ನು ಚಿಕಿತ್ಸಾ ವಿಧಾನಗಳು 'Man is the product of environment' ಅನ್ನುವ ಹಾಗೆ ಚಿಕಿತ್ಸಾ ಪದ್ಧತಿ ನಮ್ಮಲ್ಲಿ ಲಭ್ಯವಿರುವ ಸೌಲಭ್ಯಗಳ ಹಾಗೆ. ಲ್ಯಾಬೋರೇಟರಿ ಅಂದರೆ ಏನು ? ಗೊತ್ತಿಲ್ಲದ ಕಾಲ. ಇತಿಮಿತಿಯಲ್ಲಿ ಲಭ್ಯವಿರುವ ಔಷಧಿಗಳು. ಇನ್ನು ಅಂಬುಲೆನ್ಸ್ ಅಂದರೆ ಯಾವ ಪ್ರಾಣಿಯ ಹೆಸರು ಎಂಬ ತಿಳುವಳಿಕೆಯ ಮಟ್ಟ. ಅಂಥ ಕಾಲದಲ್ಲಿ ನಮಗೆ ದೊರಕಿದ್ದ ದೊಡ್ಡ ಸೌಲಭ್ಯ. ಇದು ೮೩–೮೪ ರ ಕಾಲ. ಅವನೊಬ್ಬ ಗೆಳೆಯ ಇದ್ದ. ದೊಡ್ಡ ಶ್ರೀಮಂತ, ಅಷ್ಟೆ ದೊಡ್ಡ ಜಿಪುಣ. ಅನಾಹುತಕಾರಿ ಹುಂಬ. ಅದೊಂದು ರಾತ್ರಿ ಊಟ ಮಾಡುತ್ತಿದ್ದಾಗ ಫೋನ್ ಬಂತು. 'ಸಾವುಕಾರಿಗೆ ಎದೆ ನೋವು. ಒಂದು ಹೆಜ್ಜೆ ಮನೆಗೆ ಬರಬೇಕು.' ಆ ಕಡೆಯಿಂದ ಗೆಳೆಯನ ಮಡದಿಯ ವಿನಂತಿ. ಗೆಳೆಯನಿಗೆ ತೀರ ವಿರುದ್ಧದ ಸ್ವಭಾವದ ಸಾತ್ವಿಕ ಮಹಿಳೆ. ನನ್ನ ಔಷಧಿಯ ಚೀಲ ಹಿಡಿದು ಹೊರಟೆ. ಪರೀಕ್ಷೆ ಮಾಡಿದೆ. ಪರೀಕ್ಷೆ ಎಂದರೆ ಏನು? ಅದೇ ನಾಡಿ ಬಡಿತ, ಹೃದಯದ ಲಬ್‌ಡಬ್. ಎಲ್ಲಾ ಸಾಮಾನ್ಯ ಇವೆ. ಆದರೆ ಒಳಮನಸ್ಸು ಹೇಳಿತು – ಇದು ಹೃದಯಾಘಾತ. ಅದಕ್ಕೆ ಪುರಾವೆ ಏನು? ಎಂಥದೂ ಇಲ್ಲ. ಅದೊಂದು Intution. ಸಹಜ ಜ್ಞಾನ. 'ಶಿವಮೊಗ್ಗ ಹೋದರೆ ಒಳ್ಳೆಯದು.' ಗೆಳೆಯನಿಗೆ ನಿಧಾನವಾಗಿ ಹೇಳಿದೆ. 'ಏಕೆ ?' ಎಂದು ಅವನೇನು ಕೇಳಲಿಲ್ಲ. ಬದಲಿಗೆ ಆರ್ಡರ್ ಹೊರಡಿಸಿದ.
'ಏ, ಈಗ ಯಾರ ಹೋಗತಾರ, ಬೆಳಿಗ್ಗೆ ನೋಡೋಣ'.

ಸರಿ ಮತ್ತೆ ಮುಂದೆ ಮಾತನಾಡೋ ಹಾಗೆ ಇಲ್ಲ.
ಒಂದು ಚುಚ್ಚುಮದ್ದು, ಎರಡು ಗುಳಿಗೆ ಕೊಟ್ಟು
'ಸ್ವಲ್ಪ ನಿದ್ದೆ ಬರತದೆ, ಸ್ವಲ್ಪ ನೋವು ಕಡಿಮೆ ಆಗತದೆ, ಇಲ್ಲೆ ಮಲಕ್ಕೊಂಡಿರಬೇಕು, ಮತ್ತೆ ಎದ್ದು ಓಡಾಡೊ ಹಂಗಿಲ್ಲ.' ಅಂತ ವಾರ್ನಿಂಗ್ ಮಾಡಿ ಮನೆಗೆ ಬಂದೆ.
ರಾತ್ರಿ ೧೧ ಮತ್ತೆ ಫೋನ್ ಕರೆ. ಅದೇ ಮತ್ತೆ, ಗೆಳೆಯನಿಗೆ 'ಎದೆ ನೋವು'.
ಚೀಲ ಹಿಡಿದು ಮತ್ತೆ ಓಡಿದೆ. ನೋಡಿದರೆ ಬೇರೆ ರೂಮಿಗೆ ಬಂದಿದ್ದಾನೆ.


'ಇಲ್ಯಾಕೆ' ಅಂದರೆ
'ಏ, ವಾಂತಿ ಆತು. ಆ ವಾಸನ್ಯಾಗ ಅಲ್ಲ್ಯಾರ ಮಕ್ಕೊತಾರು'. ಅಂದ.
ಮತ್ತೆ ಅದೇ ಪರೀಕ್ಷೆ, ಅದೇ ಚುಚ್ಚುಮದ್ದು.
'ಬೆಳತನಕ ಇಲ್ಲೆ ಇರ್ಬೆಕು'. ಮತ್ತೆ ಅದೇ ವಾರ್ನಿಂಗ್.
ಬೆಳಗಿನ ಜಾವ ೪ ಘಂಟೆಗೆ ಮತ್ತೆ ಫೋನ್ ಕರೆ.
ಚೀಲ ಹಿಡಿದು ಓಡಿದೆ. ಈಗ ಮತ್ತೊಂದು ಕೋಣೆಗೆ ಬಂದಿದ್ದಾನೆ.
'ಏನಿದು?' ಅಂದರೆ
'ಏ, ಎದುರಗಡೆ ಟಾಕೀಜುದ್ದು ಭಾರಿ ಆವಾಜ, ಹೇಳಿ ಕಳಿಸಿದ್ರೆ ಶಬ್ದ ಕಡಿಮೆ ಮಾಡಾಕ ರೆಡಿ ಇಲ್ಲ ಅವ್ರು. ಅದಕ್ಕ ಹಿಂದಿನ ರೂಮೀಗೆ ಬಂದೆ.'
ಸರಿ, ಮತ್ತೆ ಪರೀಕ್ಷೆ, ಅದೇ ಚುಚ್ಚುಮದ್ದು.
'ಬೆಳಿಗ್ಗೆ ಬೇಗ ಹೋಗಬೇಕು'.
'ಮತ್ತ ನೀನೂ ಬರಬೇಕು.' ಅಂದ.
'ಆಯಿತು' ಅಂತ ತಲೆ ಅಳ್ಳಾಡಿಸಿ ಬಂದೆ.
ಬೆಳಿಗ್ಗೆ ಹೋದರೆ ಒಂದು ಹಿಂಡು ಜನ ಆಪ್ತೇಷ್ಟರು ಸೇರಿದ್ದಾರೆ. ನೋಡಿದರೆ ರೂಮೂ ಬದಲಿಸಿ ಮೊದಲ ರೂಮಿಗೆ ಬಂದಿದ್ದಾನೆ.
'ಯಾಕೆ ?' ಅಂದರೆ
'ಮತ್, ಬೆಳಿಗ್ಗೆ ಎದ್ದು ಒಂದಾ ಮಾಡಬೇಕಲ್ಲ ? ನನಗೇ ಮರುಪ್ರಶ್ನೆ.

ಆದದ್ದು ಇಷ್ಟು.
ಬೆಳಿಗ್ಗೆ ಎದ್ದು ಒಂದಾ ಮಾಡಲಿಕ್ಕೆ ಹೋಗಿ ಅಲ್ಲೆ ತಲೆಸುತ್ತಿ ಬಿದ್ದಾನ, ಸತ್ತೆ ಹೋದ ಅಂತ ಎಲ್ಲರೂ ಸೇರಿದಾರ. ಈಗ ಮೊದಲ ಮಹಡಿಯಲ್ಲಿ ಮಲಗಿದವಗ ಕೆಳಗ ತಗೊಂಡ ಹೋಗಬೇಕು.
'ಒಂದು ಜಮಖಾನ ಹಾಸ್ರಿ, ಮೇಲೆ ಮಲಗಿಸಿ ನಾಲ್ಕೂ ಚುಂಗ ಹಿಡಿದು ಕರಕೊಂಡ ಹೋದ್ರಾತು'.
ಸಲಹೆ ಕೊಟ್ಟೆ.
'ಏ, ನನಗೇನ ಆಗೇತಿ ? ನಾನ ಬರತೀನಿ'. ಅದೇ ಹುಂಬತನ.
ಎದ್ದ, ಒಂದ ಹೆಜ್ಜೆ ಇಟ್ಟ. ಕುಸದ ಬಿದ್ದಾ ನೋಡ್ರಿ. ಮುಗಿತ, ಜಮಖಾನೆ ಮೇಲೆ ಮಲಗಿಸಿ ಕೆಳಗ ಹಿಡಕೊಂಡ ಹೋದ್ವಿ.

ಕಾರ್ ತಂದು ಬಾಗಲದ ಎದರು ನಿಲಿಸಿದ್ರು.
ಪಾಪ ಆ ಕಾರಿಂದು ಒಂದು ಕತಿ. ಅದು ಓಡಿ ಹಳೇದ ಆಗಿತ್ತಕ್ಕಿಂತ ನಿಂತ ಹಳೇದ ಆಗಿದ್ದ ಖರೆ. ಓಡಿಸಿದ್ರ ಪೆಟ್ರೋಲ್ ಹಾಕಬೇಕಲ್ಲ. ಅಂತಾ ಲೆಖ್ಖಾಚಾರ.
ಕಾರು ಸೀದಾ ಹೋಗಿ ಶಿವಮೊಗ್ಗಾ ಡಾಕ್ಟರ ಮನೆ ಬಾಗಿಲಿಗೆ ನಿಂತು.
ಡಾಕ್ಟರು ಹೊರಗೆ ಬಂದು ಹಿಂದಿನ ಸೀಟಿನ ಮೇಲೆ ಪವಡಿಸಿದ್ದ ಗೆಳೆಯ್ಯಾನ್ನ ನೋಡಿ ಹೇಳಿದ್ರು
'ಇದು ಹಾರ್ಟ್ ಅಟ್ಯಾಕ್ ಅಲ್ಲ ಬಿಡಿ. Anyway ಆಸ್ಪತ್ರೆಗೆ ನಡಿರಿ, Let us confirm.'

ಮುಂದಿನ ಸ್ಟಾಪ್ ನರ್ಸಿಂಗ್ ಹೋಮ್.
ಮೊದಲೇ ತಿಳಿಸಿದ್ದೆ. ಪಾಪ ಆಸ್ಪತ್ರೆಯವರು ವೀಲ್‌ಚೇರ ಇಟಗೊಂಡು ಬಾಗಿಲದಾಗ ಕಾಯ್ತಾ ನಿಂತಿದ್ರು.
ಒಳಗ ಕರಕೊಂಡು ಹೋದ್ವಿ. ಡಾಕ್ಟರು ಬಂದ್ರು. ಇಸಿಜಿ ಮಾಡಿ ಟೇಪ್ ತೆಗದು ನೋಡಿ ಹೇಳಿದ್ರು

'ಹೇ, ಇದು ಹಾರ್ಟ್ ಅಟ್ಯಾಕ್, All complications have set in ! ಡಾಕ್ಟರ ನೀವು ಸಂಜೆವರೆಗೆ ಇದ್ದ ಬಿಡಿ, ಪರಿಸ್ಥಿತಿ ಏನು ಅಂತ ತಿಳದು ಹೋಗಿ. ವಿಷಯ ಸ್ವಲ್ಪ ಸೂಕ್ಷ್ಮ ಇದೆ.' ಅಂದ್ರು.
ಅವ್ರು ಕೂಡಾ ಗೆಳೆಯಾನೆ, 'ಸರಿ' ಅಂದೆ.
ಹುಂಬ ಗೆಳೆಯ ಎಲ್ಲಾ ಸರಿ ಆಗಿ ೩ ವಾರ ಆದ ಮ್ಯಾಲೆ ನನ್ನ ಹತ್ರ ಬಂದ.



ಬಂದವನ ಕೇಳಿದ್ದು
'ಎಷ್ಟು ಫೀಸು ಕೊಡಲಿ' ?
'೨೫೦' ಅಂದೆ.
'ಆ ! ಏನ್ ಬಾಳ ಜಾಸ್ತಿ ಮಾಡಿ ಬಿಟ್ಟಿ ಫೀಸು' ಅಂದಾ.
'ಆಯತಪಾ ನಿನಗೆ ಎಷ್ಟು ಸರಿ ಅನಸ್ತದ ಅಷ್ಟು ಕೊಡು.' ಅಂದೆ.
೨೦೦ರೂ. ಕೊಟ್ಟಾ.
'ಯಾಕೋ ಸಿಟ್ಟು ಬಂದಗ ಕಾಣಾಸ್ತದ' ಅಂದ.
'ಇಲ್ಲ ಭಾಳಾ ಖುಸಿ ಆಗ್ತಾ ಇದೆ' ಅಂದೆ.
ಮೊನ್ನೆ ಕೊರೋನಾದಾಗ ಹೋಗೆ ಬಿಟ್ಟ.
ಅವತ್ತಿನ ಪರಿಸ್ಥಿತಿ ನೋಡಿ
'ಏನಿದು ಜೀವನ' ? ಅಂತಾ ಅನಿಸ್ತು.

ಅವನ ಮಾತುಗಳು ನೆನಪಾದವು.
'ರೊಕ್ಕ ಅಂದ್ರ ನನಗ ಪ್ರೀತಿ. ಸುಮ್ಮನೆ ಬಂದ ಬೀಳ್ತಾ ಇರಬೇಕು.'
ಒಬ್ಬಳೇ ಮಗಳು. ಅವಳ ಮದುವೇಲಿ ಬೀಗರ ಜೊತೆನ ಜಗಳ.
'ನೀವು ಹೇಳಿದ್ದಕ್ಕಿಂತ ನನ್ನ ಕಡೆ ಜಾಸ್ತಿ ಖರ್ಚ ಮಾಡಿಸಿ ಬಿಟ್ರಿ'.
ಮುಂದೆ ಒಂದು ವರುಷದಾಗ ಅಜ್ಜ ಕೂಡ ಆದ.
ಅವತ್ತ ಮನೆಗೆ ಬಂದೋನು ಸುದ್ದಿ ಕೊಟ್ಟದ್ದು ಹೀಗೆ

'ಒಟ್ಟ ಎರಡು ಲಕ್ಷ ಕೈ ಬಿಟ್ಟವು ನೋಡು, ಬಾಣಂತನ ಮಾಡೋದ್ರಾಗ'.
'ಯಾಕ ಹಿಂಗ ಮಾಡತೀಯೊ, ನಾಳೆ ಎಲ್ಲ ಇಲ್ಲೆ ಬಿಟ್ಟ ಹೋಗೊದು'.
'ಅದ ನನಗೂ ಗೊತ್ತದಬಿಡ, ಹಂಗಂತ ಹೆಂಗ ಬೇಕ ಹಂಗ ತೂರಾಕ ಆಗ್ತದೇನು ?'
ಅಂವಂದೆ ಅವಗ. ಮೊದಲ ಅಟ್ಯಾಕ್ ಆದ ಮೇಲೆ ಎರಡು ಬಾರಿ ಆತು, ಒಂದ ಬಾರಿ ಸಣ್ಣಗ ಪ್ಯಾರಾಲಿಸೀಸ್ ಆತು. ಅವನ ಹುಂಬತನ ಅವಗ ವರದಾನ. ಪ್ರತಿ ಸಲ ಗೆದ್ದ ಬಂದ.

ವೈದ್ಯೇತರ

# ಮಕ್ಕಳು: ಅಂದು–ಇಂದು



**ಡಾ. ಸುಲೋಚನಾ ಚಿನಿವಾಲರ್**
ಕುಟುಂಬ ವೈದ್ಯರು
ಗಂಗಾವತಿ



**ಡಾ. ಕಿರಣ ಪೇಟಕರ್**
ವಿಭಾಗೀಯ ಸಂಪಾದಕರು

ಆಗ ತಂದೆ – ತಾಯಂದಿರಿಗೆ ಮಕ್ಕಳೇ ಆಸ್ತಿಯಾಗಿದ್ದರು. ಕೇಳುವವರು ಕೂಡ ನಿಮಗೆಷ್ಟು ಮಕ್ಕಳು ಎಂದು ಕೇಳುತ್ತಿದ್ದರು. ಈಗ ನಾವಿಬ್ಬರು ನಮಗೊಂದು ಮಗು ಸಾಕೆನ್ನುವರು. ಆಗ ಅವಿಭಾಜ್ಯ ಕುಟುಂಬ. ಮನೆಯಲ್ಲಿ ತಂದೆ–ತಾಯಿ ಕಕ್ಕ–ಕಕ್ಕಿ ಅಜ್ಜ–ಅಜ್ಜಿಯರ ಪ್ರೀತಿ, ಸಂಸ್ಕಾರ, ಬಾಂಧವ್ಯಗಳ ಬಂಧನ. ಈಗ ದುಡಿಯುವ ತಂದೆ–ತಾಯಿ. ಇದ್ದ ಒಂದೆರಡು ಮಕ್ಕಳಿಗೆ ಬೇಬಿ ಸಿಟಿಂಗ್ ಇಲ್ಲ, ಅವರು ಕೆಲಸದಾಳಿನ ಅಧೀನ. ಅವಳು ತಿಳಿದು ನೋಡಿಕೊಂಡರೆ ಸರಿ; ಇಲ್ಲವಾದರೆ ಇದುವೇ ಬಂಧನ.

ಆಗ ಮನೆಯ ಮಕ್ಕಳೂ, ಓಣಿಯ ಮಕ್ಕಳೂ ಒಂದಾಗಿ ಆಡುತಿದ್ದದು ಕುಂಟಾಪಿಲ್ಲಿ, ಚೌಕಾಬಾರ, ಬುಗುರಿ, ಖೋಕೋ, ಕಬಡ್ಡಿ ಆಟಗಳು. ಈಗ ಮೊಬೈಲ–ಟಿವಿ ಗೆಳೆತನ, ವಿಡಿಯೋ ಗೇಮ್. ಅಬ್ಬಬ್ಬಾ ಎಂದರೆ ಕ್ರಿಕೆಟ್. ಬಿಟ್ಟರೆ ಬೇರೆ ಆಟ ಗೊತ್ತಿಲ್ಲ. ಆಗ ಸಹಪಾಠಿಗಳೊಂದಿಗೆ ಸ್ವಚ್ಛಂದವಾಗಿ ತಿರುಗಾಡಿ ಗಿಡದಲ್ಲಿಯ ಹುಣಸೆ ಗಿಡದ ಮುಗುಳು ಎಲೆ ಮಾವು ಗಿಡಕ್ಕೆ ಕಲ್ಲು ಹೊಡೆದು ಬೀಳಿಸಿ, ನನಗೂ–ನಿನಗೂ ಎಂದು ಹಂಚಿಕೊಂಡು ತಿನ್ನುವದು. ಈಗ ಏನಿದ್ದರೂ ಬರ್ಗರ ಪಿಜ್ಜಾ. ಆಗ ಹೊಲದಲ್ಲಿ ಕಬ್ಬಿನ ಘಾಣಾ ಎಲ್ಲರೊಂದಿಗೆ ಕಬ್ಬಿನಹಾಲು, ಕೆನೆಬೆಲ್ಲ ಘಾಣದ ಉಂಡೆ ಸವಿಯುವದು. ಈಗ ಪೆಪ್ಸಿ ಕೋಕೋಕೋಲಾ ಸವಿಯುವದು.

ಇನ್ನು ರಜಾದಿನದಲ್ಲಿ ಅಜ್ಜಿಯ ಊರಿಗೆ ದಸರಾ ರಜೆಯಲ್ಲಿ ಹೊಲಗಳಿಗೆ ಹೋಗಿ ಬೆಳಸಿ ತಿನ್ನುವದು; ಮೇಲೆ ಮಸಾಲಾ ಮಜ್ಜಿಗೆ. ಬೇಸಿಗೆ ರಜೆಯಲ್ಲಿ ಮಾವಿನ ಹಣ್ಣಿನ ಸುಗ್ಗಿ. ಹಣ್ಣು ತಿನ್ನುವದಲ್ಲದೆ ಹೋಳಿಗೆ ಸೀಕರ್ಣಿ, ಮಾಲ್ದಿಸೀಕರ್ಣಿ, ದೋಸಾ ಸೀಕರ್ಣಿಯ ಊಟ. ರಾತ್ರಿಯಾಯಿತೆಂದರೆ ಅಜ್ಜಿಯ ಕಥೆ ಕೇಳುವದೇ ಖುಷಿ ಈಗ ಮಕ್ಕಳಿಗೆ ರಜಾ ಬಂದರೆ ವೆಕೆಷನ್ಸ್ ಕೋರ್ಸ್‌ಗಳ ದಾಳಿ. ಎಲ್ಲಿದೆ ಮಕ್ಕಳಿಗೆ ಎಲ್ಲರೊಂದಿಗೆ ಬೆರೆಯುವ ಅವಕಾಶ?

ಮುಂದೆ ಪಿಯುಸಿಯಲ್ಲಿ ಎಂಟ್ರೆನ್ಸ್ ಎಕ್ಸಾಮ್‌ಗಳ ಕಾಂಪಿಟೇಷನ್, ಕೋಚಿಂಗ್‌ಕ್ಲಾಸ್. ಎಡೆಬಿಡದೆ ಓದುವದು. ನೀಟ್ ಪರೀಕ್ಷೆ. ವೈದ್ಯನಾಗು; ಕೈ ತಪ್ಪಿದರೆ ಇಂಜಿನಿಯರ್ ಆಗು. ಇಲ್ಲವಾದರೆ ಡೊನೇಷನ್ ಸೀಟ್. ತಂದೆ–ತಾಯಿಯರ ದುಡ್ಡು ಖರ್ಚಿನ ಒತ್ತಡದಲ್ಲಿಯೇ ವಿದ್ಯಾಭ್ಯಾಸ. ಮುಂದೆ, MBBS ಮುಗಿಯಿತೆಂದರೆ PG ಎಂಟರೆನ್ಸ್ ತಯಾರಿ. ಸೀಟು ಸಿಕ್ಕಲ್ಲಿ ಹೋಗಿ ಮುಂದಿನ ಓದು. ಮುಗಿಯುವಾಗ ಇಲ್ಲವೇ ಓದುವಾಗಲೇ ಮದುವೆಯ ಬಂಧನ.

ಮುಂದೆ ಸ್ಪರ್ಧಾ ಜಗತ್ತಿನಲ್ಲಿ ಹಗಲಿರುಳೆನ್ನದೆ ದುಡಿಯುವ ಬವಣೆ. ಪುಣ್ಯಕ್ಕೆ ಮಕ್ಕಳು ನಮ್ಮೊಂದಿಗೆ ಇದ್ದರೆ ತುಸು ನಿರಾಳ. ಒಂದು ವೇಳೆ ವಿದೇಶಿ ವ್ಯಾಮೋಹಿಗಳಾಗಿ ಇದ್ದ ಒಂದೋ ಎರಡೂ ಮಕ್ಕಳು ವಿದೇಶಕ್ಕೆ ತೆರಳಿದರೆ, ತಂದೆ–ತಾಯಂದಿರಿಗೆ ನಮ್ಮ ಮಕ್ಕಳು ಫಾರಿನ್ನಲ್ಲಿದ್ದಾರೆಂದು ಬೀಗುವದನ್ನು ಬಿಟ್ಟರೆ ನಮಗೆ ಬೇಕೆನಿಸಿದಾಗ ಸಾಮೀಪ್ಯ ದುರ್ಲಭ. ಈ ಒಂದು ಮಕ್ಕಳ ಪಾಲನೆ ಪೋಷಣೆಗೆ ನಾವೆಷ್ಟು ಸಮಯ ನೀಡಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಂಡಾಗ ಅರ್ಥವಾಗುತ್ತದೆ, ನಮ್ಮ ಮಕ್ಕಳು ವೃದ್ಧಾಶ್ರಮದ ದಾರಿ ತೋರಿಸುತ್ತಿರುವರೆಂದು. ಏಕೆಂದರೆ ತಂದೆ–ತಾಯಂದಿರು ಬದುಕಿನ ಬಹುಭಾಗ ಹಣ ಗಳಿಕೆಗೆ ಕೊಟ್ಟಿರುವದರಿಂದ ಮಕ್ಕಳು ಕೂಡಾ ಹಾಗೇ ಹಣ ನೀಡಿ ವೃದ್ಧಾಶ್ರಮದ ದಾರಿ ತೋರಿಸುತಿದ್ದಾರೆ. ಇದು ಇಂದಿನ ಬದುಕಿನ ಕಟು ಸತ್ಯ. ಕಾಲಾಯತಸ್ಮೈ ನಮಃ

ನೀಳ್ಗತೆ

# ಕಾಣೆಯಾದ ಹೊಸರುಚಿ ಪುಸ್ತಕ (ಭಾಗ - ೨)



**ಡಾ. ಕೃಷ್ಣ ಪ್ರಸಾದ್ ಆರ್.**
ನೇತ್ರ ತಜ್ಞರು, ಎಂ ಎಂ ಜೋಷಿ ಐ ಆಸ್ಪತ್ರೆ ಮತ್ತು
ಸಂಶೋಧನಾ ಕೇಂದ್ರ, ಹುಬ್ಬಳ್ಳಿ



ಡಾ. ದಿವ್ಯ ಕೆ. ಎನ್.
ವಿಭಾಗೀಯ ಸಂಪಾದಕರು

ಹಿಂದಿನ ಸಂಚಿಕೆಯ ಮುಂದುವರಿದ ಭಾಗ...

'ಬನ್ನಿ ಬನ್ನಿ, ಒಳಗೆಬಂದು ಕೂತ್ಕೊಳ್ಳಿ' ಅಂತಾ ರಾಧಾಬಾಯಿ ಕೇಳಕರ್ ಆತ್ಮೀಯವಾಗಿ ಮೂವರನ್ನು ಒಳಗೆ ಆಹ್ವಾನಿಸಿದರು. ಪೋಲೀಸ್ ಸಮವಸ್ತ್ರದಲ್ಲಿದ್ದ ವೆಂಕಟಾದ್ರಿಯನ್ನು ನೋಡಿ ಅಕೆಯಲ್ಲಿ ಯಾವ ಪರಿಣಾಮವೂ ಆಗಿರಲಿಲ್ಲ. ಬಹುಶಃ ನಾನು ಜೊತೇಲಿ ಇದ್ದದ್ದಕ್ಕೂ ಅಥವಾ ವಕೀಲ ವೃತ್ತಿಯ ಪತಿ ಇರುವುದರಿಂದ ಸಾಕಷ್ಟು ಬಾರಿ ಪೋಲೀಸ್‌ರ ಆಗಮನ ಮನೆಗೆ ಆಗುವುದರಿಂದಲೋ ತಿಳಿಯಲಿಲ್ಲ.

ಮೂವರಿಗೆ ಕಾಫಿ ಕೊಟ್ಟ ಮೇಲೆ ನಮ್ಮ ಮಾತುಕತೆ ಆರಂಭವಾಯಿತು. ನಾಗೇಶ ಕೇಳಕರ್ ಊರಲ್ಲಿ ಇರದ ಕಾರಣ ಕೇವಲ ಅವರ ಪತ್ನಿಯ ವಿಚಾರಣೆಯಷ್ಟೇ ಇಂದು ಸಾಧ್ಯವಾಗಬಹುದಿತ್ತು. ವೆಂಕಟಾದ್ರಿಯ ಎಲ್ಲಾ ಮಾತನ್ನು ಸಮಾಧಾನದಿಂದ ಆಲಿಸಿದ ಆಕೆ ಕೊನೆಗೆ, 'ಏನು ಹೇಳ್ತಾನೆ ಆ ಭಾಡ್ಯಾ. ಅಡುಗೆ ಪುಸ್ತಕನಾ ಹೊಡಿದೀನೀ ಅಂತಾನೇನು ಅವನ' ಅಂತಾ ಸ್ವಲ್ಪ ಸಿಟ್ಟಿನಿಂದಲೇ ಪ್ರತಿಕ್ರಿಯಿಸಿದರು.

'ಹಾಗಲ್ಲಮ್ಮ, ನಿಮಗೆ ಗೊತ್ತೇ ಇದೆ. ಕಂಪ್ಲೇಂಟ್ ದಾಖಲಾದ ಮೇಲೆ ನಾವಿಷ್ಟು ವಿಚಾರಣೆ ಅಂತಾ ಮಾಡಲೇಬೇಕಾಗುತ್ತೆ. ತಪ್ಪು ತಿಳಿಬೇಡಿ' ವೆಂಕಟ ಸಮಾಧಾನ ಗೊಳಿಸಲು ಯತ್ನಿಸಿದ.

'ನನಗೆ ಗೊತ್ತಿತ್ತು! ಇವನ ಹಣೆಬರಹ ಇಷ್ಟೇ ಅಂತಾ. ನನಗೆ ಮೊದಲಿಂದಾ ಈ ಪಾಟೀಲನ ಸಹವಾಸ ಇಷ್ಟ ಇರಲಿಲ್ಲ. ಏನೋ ಫ್ರೆಂಡ್ ಅಂತಾ ಇವರ ಜೊತೆ ಪ್ರತಿ ತಿಂಗಳು ಸೇರತಿದ್ವಿ. ಅವನ ಹೆಂಡತಿ ಸುಟಗೊಂಡ ಸತ್ತಾಗ, ಕೋರ್ಟ್ ಕಚೇರಿ ಅಂತಾ ಓಡಾಡಿ, ಅವನ ಮೇಲೆ ಏನೂ ಕೇಸ್ ಇತ್ಯಾದಿ ಬರದ ಹಾಗೆ ನೋಡಿಕೊಂಡಿದ್ದೇ ಇವರು. ಈ ಸುಡುಗಾಡು ಅಡಿಗೆ ಪುಸ್ತಕಕ್ಕೆ ಕಂಪ್ಲೇಂಟ್ ಬೇರೆ ಕೇಡು. ಹುಚ್ಚು ಖೋಡಿ ಗಂಡ ಹೆಂಡತಿ. ಅವನ ಹೆಂಡತಿ ಒಂತರಾ ಇದ್ಲು. ಇವನು ಇನ್ನೊಂದು ತರಾ!'

ಪಟ್ಟಾಭಿಯ ಕಿವಿ ನೆಟ್ಟಗಾದವು.



ಮುಂದೆ ಬಾಗಿ ಕೇಳಿದ 'ಮೇಡಂ ಅವನ ಹೆಂಡತಿ ಸುರಭಿ ಒಂತರಾ ಅಂದ್ರಲ್ಲಾ. ಏನದು ವಿವರಣೆ ಕೊಡ್ತೀರಾ ಸ್ವಲ್ಪ?'

ರಾಧಾಬಾಯಿಯ ಮುಖ ಸ್ವಲ್ಪ ಕಳೆಗುಂದಿತು. ಆದರೂ ಸಾವರಿಸಿಕೊಂಡು ನುಡಿದರು 'ಏನಂದ್ರೇ, ಮಂದಿನೆಲ್ಲಾ ಊಟಕ್ಕೆ ಕರೆದು, ಹೊಸದೇನೋ ಬೇಯಿಸಿ ಹಾಕಿ ಜಂಭ ಕೊಚ್ಕೋಳ್ಳೋದು, ಧಿಮಾಕು ತೋರಿಸೋದು ಅಂತಾ ನಾನು ಹೇಳಿದ್ದು.'

ವೆಂಕಟಾದ್ರಿ ಗಂಭೀರ ಮುಖ ಮುದ್ರೆಯಿಂದ ಪ್ರಶ್ನಿಸಿದ 'ನೀವು ಹೇಳಬೇಕಾದ್ದು ಬೇರೆ ಏನೋ ಇದೆ ಅಂತ ನಮಗೆ ತಿಳಿದಿದೆ. ಈ ತನಿಖೆಯಲ್ಲಿ ನಿಮ್ಮ ಸಹಕಾರ ಅತ್ಯಗತ್ಯ. ಆದ್ದರಿಂದ ಸುರಭಿ ಬಗ್ಗೆ ನಿಮಗೇನು ತಿಳಿದಿದೆ ಯಾವುದೇ ಭಿಡೆ ಇಲ್ಲದೆ ಹೇಳಿ'.

ರಾಧಾಬಾಯಿ ಒಂದು ಕ್ಷಣ ಯೋಚಿಸಿ ಏನೋ ಒಂದು ನಿರ್ಧಾರಕ್ಕೆ ಬಂದವರಂತೆ ಪ್ರಾರಂಭಿಸಿದರು. 'ಹಾಗೇ ನೋಡಿದ್ರೆ ಸುರಭಿ ಒಳ್ಳೇ ಹುಡುಗೀನೇ, ಆದರೂ ಹೆಂಗಸರ ಕೆಲವು ಸೂಕ್ಷ್ಮಗಳು ಹೆಂಗಸರಿಗೇ ತಿಳಿಯೋದು. ನಚಿಕೇತ ಸುರಭಿಗೆ ಮದುವೆಯಾಗಿ ಹನ್ನೆರಡು ವರ್ಷ ಆಗಿದ್ದರೂ ಮಕ್ಕಳಿರಲಿಲ್ಲ. ಅವಳಲ್ಲಿ ಯಾವುದೇ ದೋಷ ಇಲ್ಲ ಅಂತಾ ಡಾಕ್ಟರ್ ಹೇಳಿದ್ದಾರೆ ಅಂತಾ ಒಮ್ಮೆ ನಮ್ಮ ಮುಂದೆ ಹೇಳಿದ್ದಳು. ಅವಳು ಬಹಳ ಸೋಷಿಯಲ್ ಮತ್ತು ಫ್ರೆಂಡ್ಲಿ ಅಂತಾ ಅಂದುಕೊಂಡರೂ ಕೂಡಾ, ಪರ ಗಂಡಸರ ಜೊತೆ ಅವಳ ಹಾವ ಭಾವ, ಮಾತುಕತೆ ಕೆಲವೊಮ್ಮೆ ಸರಿ ಅನ್ನಿಸ್ತಾ ಇರಲಿಲ್ಲ. ಅದರಲ್ಲಂತೂ ಆ ರವಿ ಜೊತೆ ಬಹಳಾನೇ ಸಲುಗೆಯಿಂದ ನಡ್ಕೋತಾ ಇದ್ಲು. ಕೆಲವೊಮ್ಮೆ ನನಗಂತೂ ನಚಿಕೇತನ ಪುರುಷತ್ವದ ಮೇಲೆ ಸಂಶಯ ಬರ್ತಿತ್ತು. ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಂತೂ ಬಹಳ ಆಶ್ಚರ್ಯವೇ? ಪಟ್ಟಾಭಿ, 'ಅಲ್ಲಮ್ಮಾ ಗಂಡ ಹೆಂಡತಿ ಹೊರಗಡೆ ಎಷ್ಟೇ ಅನೋನ್ಯವಾಗಿದ್ದರೂ ಮನೆ ಒಳಗೆ ಜಗಳ ಮನಸ್ತಾಪ ಇರಲೇ ಇಲ್ಲವೇ?' ಅಂತಾ ಪ್ರಶ್ನಿಸಿದ.

'ಜಗಳವಿಲ್ಲದ ಗಂಡ ಹೆಂಡತಿ ಯಾರು? ನಚಿಕೇತನಿಗೆ ಸುರಭಿಯ ಮೇಲೆ ಎಷ್ಟೇ ಪ್ರೀತಿ ಇದ್ದರೂ, ಅವಳು ಬೇರೆ ಗಂಡಸರ ಜೊತೆ ಸಲುಗೆಯಾಗಿ ವರ್ತಿಸುವುದು ಸರಿ ಹೋಗ್ತಾ ಇರಲಿಲ್ಲ. ಇದನ್ನು ಅವಳೇ ಹಿಂದೊಮ್ಮೆ ನನಗೆ ಹೇಳಿದ್ದಳು. ಅದರಲ್ಲೂ ಈ ರವಿ ಜೊತೆ ಅವಳ ಸರಸಸಲ್ಲಾಪ ಅವನಿಗೆ ಸ್ವಲ್ಪವೂ ಇಷ್ಟ ಇರಲಿಲ್ಲ. ಈ ವಿಷಯಕ್ಕೆ ಅವರ ಮಧ್ಯೆ ಮೇಲಿಂದ ಮೇಲೆ ಮನಸ್ತಾಪ ಆಗುತ್ತಿತ್ತು ಅಂತಾ ಅನಿಸುತ್ತೆ. ಅಷ್ಟಾದರೂ ಗಂಡ ಹೆಂಡತಿ ಚೆನ್ನಾಗಿಯೇ ಇದ್ದರು. ನಮಗೆ ಗೊತ್ತಿರದ ಮತ್ತೇನು ಪ್ರಾಬ್ಲಂ ಇತ್ತೋ, ಅಥವಾ ದಾಂಪತ್ಯದ ಅತೃಪ್ತಿಯಿಂದ ಸುಟ್ಟುಕೊಂಡು ಸತ್ತಳೋ ಕೊನೆಯಲ್ಲಿ ನಮಗಂತೂ ತಿಳಿಯಲಿಲ್ಲ.' ರಾಧಾ ಬಾಯಿಯ ಮಾತುಗಳು ಬಾಯಿ ಚಪಲಕ್ಕೆ ಆಡಿದ ಮಾತುಗಳಂತಿರಲಿಲ್ಲ. ಅವರ ಮಾತಿನಿಂದ ನಚಿಕೇತ ಸುರಭಿಯ ವ್ಯಕ್ತಿತ್ವದ ಇನ್ನೊಂದು ಮುಖದ ಅನಾವರಣವಾಗಿತ್ತು ನಮಗೆ.

ಪಟ್ಟಾಭಿ ಒಂದು ನಿಮಿಷ ಯೋಚಿಸುತ್ತಾ ಕೂತ. ಒಮ್ಮೆಗೆ ಎದ್ದು 'ಆಯ್ತಮ್ಮ ಬರ್ತೀವಿ. ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಿ' ಎಂದು ನನ್ನನ್ನೂ ವೆಂಕಟನನ್ನೂ ಹೊರಡಿಸಿಯೇ ಬಿಟ್ಟ. ನಾವೂ ಆಕೆಗೆ ವಂದಿಸಿ ಹೊರಬೀಳುವಷ್ಟರಲ್ಲಿ ಪಟ್ಟಾಭಿ ಆಕೆಗೆಹೇಳುತ್ತಿದ್ದ. 'ಕಾಫಿ ಚೆನ್ನಾಗಿತ್ತು ಸ್ವಲ್ಪ ಚಿಕೋರಿ ಕಡಿಮೆ ಹಾಕಿಸಿ. ಮತ್ತೆ ಹಾಲು ಅಷ್ಟೇ ಬಿಸಿ ಮಾಡಿ, ತಣ್ಣಗಿನ ಡಿಕಾಕ್ಷನ್‌ಗೆ ಬೆರೆಸಿ, ತಕ್ಷಣ ಸರ್ವ್ ಮಾಡಿ. ಕಾಫಿನ ಒಲೆ ಮೇಲೆ ಎಂದೂ ಕುದಿಸಬಾರ್ದು. ಮತ್ತೆ ಯಾವಾಗಾದ್ರೂ ಬರ್ತೀನಿ ಥ್ಯಾಂಕ್ಸ್.'

*****

ರಾಧಾಬಾಯಿ ಮನೆಯಿಂದ ಹೊರ ಬಿದ್ದೆವು. ಆದರೆ ವೆಂಕಟನಿಗೆ ಅವನದೇ ಆದ ವೃತ್ತಿಯ ಒತ್ತಡಗಳಿದ್ದವು. ಬಹಳ ಹೊತ್ತು ನಮ್ಮೊಡನೆ ಈ ಉಪಯೋಗವಿಲ್ಲದ ತನಿಖೆಯಲ್ಲಿ ಸಮಯ ಹಾಳು ಮಾಡಿದ್ದಕ್ಕೆ ಅವನು ಪೇಚಾಡುತ್ತಲೇ ಇದ್ದ. 'ಮಂತ್ರಿಗಳ ವಿಸಿಟ್ ನಾಡಿದ್ದು ಇದೆ ಮಾರಾಯ. ಇನ್ನೆರಡು ದಿನ ನಾನು ಬಹಳ ಬಿಜಿ. ಮತ್ತೆ ಸಿಕ್ತೀನಿ. ಈ ಪುಸ್ತಕದ ಬಗ್ಗೆ ಏನಾದ್ರೂ ಕ್ಲೂ ಸಿಕ್ಕರೆ ಹೇಳಿ ಡಾಕ್ಟ್ರೆ. ನಿಮ್ಮನ್ನು ಮನೆಗೆ ಡ್ರಾಪ್ ಮಾಡಿ ಹೋಗ್ತೀನಿ.' ಅಂತಾ ಹೇಳಿ ಜೀಪ್ ಹತ್ತಿದ. ನಮ್ಮ ಮನೆ ಸಮೀಪವೇ ಇರುವುದರಿಂದ ನಡದೇ ಹೋಗುತ್ತೇವೆಂದು ನಾವಿಬ್ಬರೂ ವೆಂಕಟಾದ್ರಿಯಿಂದ ಬೀಳ್ಕೊಡುಗೆ ಪಡೆದು ನಡೆಯತೊಡಗಿದೆವು.

'ರಾಮು ಈ ಸುರಭಿ ಇದ್ದಾಳಲ್ಲ ಅವಳ ಸಾವಿನ ಬಗ್ಗೆ ಸ್ವಲ್ಪ ಮಾಹಿತಿ ಕೊಡು ಮಾರಾಯ. ಅವಳ

ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕಾಗಿದೆ. ಅವತ್ತಿನ ದಿನ ಏನೇನು ಆಯ್ತು ಅಂತಾ ನೆನಪಿದೆಯಾ ನಿನಗೆ' ಪಟ್ಟಾಭಿ ಪ್ರಾರಂಭಿಸಿದ. 'ಆ ದಿನ ಹೇಗೆ ಮರೆಯಲಿ ಪಟ್ಟಾಭಿ! ಅವತ್ತು ನಡೆದದ್ದು ಕಣ್ಣಿಗೆ ಕಟ್ಟಿದ ಹಾಗಿದೆ. ನಾನೂ, ರವಿ, ನಚಿಕೇತ ಮತ್ತು ಇನ್ನೂ ಸ್ವಲ್ಪ ಜನ ಯಾವಾಗಲೂ ಕ್ರಿಕೆಟ್ ಮ್ಯಾಚ್ ನೋಡಲಿಕ್ಕೆ ಸೇರುತ್ತಿದ್ದೆವು. ಯಾವಾಗಲೂ ರವಿ ಮನೇನೇ ಪ್ರಶಸ್ತವಾಗಿರುತ್ತಿತ್ತು. ಯಾಕಂದ್ರೆ ಅವನು ಒಂಟಿ ಪ್ರಾಣಿ. ಸೇನೆಯಲ್ಲಿ ಸೇವೆ ಸಲ್ಲಿಸಿ ರಿಟೈರ್ ಆದ ಅವನು ಡಿಫೆನ್ಸ್ ಕ್ಯಾಂಟೀನ್‌ನಿಂದ ಸ್ಕಾಚ್‌ವಿಸ್ಕಿ ತರಿಸಿ ಇಡುತ್ತಿದ್ದ ಬೇರೆ. ಹೀಗಾಗಿ ಲೈಟಾಗಿ ಗುಂಡು ಹಾಕಿ, ಕ್ರಿಕೆಟ್ ನೋಡಿ ಬರ್‍ತಾ ಇದ್ವಿ. ಅವತ್ತು ಇಂಡಿಯಾ ಸೌತ್ ಆಫ್ರಿಕಾ ಮ್ಯಾಚ್ ಇತ್ತು. ಇಂಡಿಯಾ ಆ ಮ್ಯಾಚ್ ಗೆಲ್ಲಲೇಬೇಕಾಗಿತ್ತು. ಅದಕ್ಕೆ ಮಧ್ಯಾಹ್ನಕ್ಕೆ ನಾನೂ, ನಚಿಕೇತ, ನನ್ನ ಇನ್ನೊಬ್ಬ ಫ್ರೆಂಡ್ ರವಿ ಮನೇಲಿ ಸೇರಿದ್ದೆವು. ನಾವು ಮ್ಯಾಚ್ ನೋಡೋದ್ರಲ್ಲಿ ತಲ್ಲೀನರಾಗಿದ್ದರೆ ರವಿ ನಮಗೆಲ್ಲಾ ಗುಂಡು ಸರಬರಾಜು ಮಾಡೋದು, ತಿಂಡಿ ತಂದು ಕೊಡೋದು ಮಾಡ್ತಾ ಇದ್ದ. ಸಂಜೆಗೆ ಹೊರಗೆ ಹೋಗಿ ಎಲ್ಲರಿಗೂ ತಿಂಡಿ ಕಟ್ಟಿಸಿಕೊಂಡು ಬಂದ. ಎಲ್ಲರೂ ಅದನ್ನು ತಿಂತಾ ಇದ್ದಾಗಲೇ ನಚಿಕೇತನಿಗೆ ಪಕ್ಕದ ಮನೆಯವರಿಂದ ಫೋನ್ ಬಂತು. ಸುರಭಿ ಅಡುಗೆ ಮನೆಯಲ್ಲಿ ಬಾಗಿಲು ಹಾಕಿಕೊಂಡು ಗ್ಯಾಸ್ ಸಿಲಿಂಡರ್ ಓಪನ್ ಮಾಡಿಕೊಂಡು, ಸುಟ್ಟುಕೊಂಡು ಸತ್ತಿದ್ದಾಳೆ ಅಂತಾ. ನಮಗೆಲ್ಲಾ ತೀವ್ರ ಆಘಾತವಾದರೆ, ನಚಿಕೇತನಂತೂ ದುಃಖದ ಉದ್ವೇಗದಲ್ಲಿ ಪ್ರಜ್ಞೆಯೇ ಕಳೆದುಕೊಂಡಿದ್ದ. ಅವನನ್ನು ಸಂಭಾಳಿಸಿ ಕರೆದುಕೊಂಡು ಬಾ ಅಂತಾ ಹೇಳಿ ರವಿ ಮೊದಲು ಸ್ಥಳಕ್ಕೆ ಧಾವಿಸಿದ. ನಾವು ನಚಿಕೇತನನ್ನು ಕರೆದುಕೊಂಡು ಬರುವಷ್ಟರಲ್ಲಿ ಅಡುಗೆ ಮನೆ ಬಾಗಿಲು ಒಡೆದು ಸುಟ್ಟು ಕರಕಲಾಗಿದ್ದ ಸುರಭಿಯ ಶವವನ್ನು ಹಾಲಿನಲ್ಲಿ ಮಲಗಿಸಿದ್ದರು. ಅಂತಹಾ ಚಂದದ ಹೆಣ್ಣು ಮಗಳು ಈ ರೀತಿ ಆತ್ಮ ಹತ್ಯೆ ಮಾಡಿಕೊಂಡು ಸಾಯುತ್ತಾಳೆಂದು ಯಾರು ಅಂದುಕೊಳ್ಳಲು ಸಾಧ್ಯ! ನಿಜಕ್ಕೂ ಅನ್ ಲಕ್ಕೀ ಗರ್ಲ್' ನಾನು ಸ್ವಲ್ಪ ಭಾವುಕನಾಗಿಯೇ ಮಾತು ಮುಗಿಸಿದೆ.

'ನಚಿಕೇತನ ಪ್ರತಿಕ್ರಿಯೆಯಲ್ಲಿ ಏನಾದರೂ ಅಸಹಜತೆ ಕಂಡಿತ್ತಾ?' ಈ ಕರುಳು ಕಿವುಚುವ ವೃತ್ತಾಂತ ಪಟ್ಟಾಭಿಯ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. 'ಅವನಂತೂ ಅಕ್ಷರಶಃ ಹುಚ್ಚನಾಗಿದ್ದ. ಮೇಲಿಂದ ಮೇಲೆ ಪ್ರಜ್ಞೆ ತಪ್ಪಿಬೀಳುತ್ತಿದ್ದ. ಅವನನ್ನು ಹಿಡಿಯುವುದು ಬಹಳವೇ ಕಷ್ಟವಾಗಿತ್ತು.'

'ಅದೇ ಕೇಳಿದ್ದು ನಾನು. ಅವನ ವರ್ತನೆ ಸ್ವಲ್ಪ ಓವರ ಆಕ್ಟಿಂಗ್ ಅನ್ನಿಸ್ತಾ ನಿಮಗೆ? ಹೋಗಲಿ, ಆ ಸಮಯದಲ್ಲಿ ರವಿ ಹೇಗಿದ್ದ?' ಪಟ್ಟಾಭಿ ಮತ್ತೇ ಕೆದಕಿದ. 'ನನಗೆ ಸರಿಯಾಗಿ ನೆನಪಿಲ್ಲ. ಈ ಸುದ್ದಿ ತಿಳಿದ ಮೇಲೆ ಅವನೂ ಬಹಳ ವಿಭ್ರಾಂತನಾಗಿದ್ದ. ಹಾಗೆ ನೋಡಿದರೆ ಅವನೂ ಸುರಭಿ ಇಬ್ಬರೂ ಕಾಲೇಜ್ ಕ್ಲಾಸ್‌ಮೇಟ್ಸ್. ಮುಂಚಿನಿಂದಲೂ ಇಬ್ಬರಿಗೂ ಪರಿಚಯ ಇತ್ತು. ಅದಕ್ಕೆ ರವಿಯ ಜೊತೆ ಬಹಳ ಸಲುಗೆಯಿಂದ ಸುರಭಿ ವರ್ತಿಸುತ್ತಿದ್ದಳು. ಹಾಗೆ ನೋಡಿದರೆ ಮೊದಲು ಸುರಭಿಯ ಮನೆ ತಲುಪಿ ಬಾಗಿಲು ಒಡೆದು ಶವವನ್ನು ಹೊರಗೆ ತಂದು ಎಲ್ಲಾ ವ್ಯವಸ್ಥೆ ಮಾಡಿದ್ದು ಅವನೇ!.'

ಅಷ್ಟರಲ್ಲಿ ನನ್ನ ಮನೆ ಸಮೀಪಕ್ಕೆ ಬಂದಿದ್ದೆವು. ಪಟ್ಟಾಭಿ ಒಳಗೆ ಬರಲು ನಿರಾಕರಿಸಿದ. 'ರಾಮು, ಈಗ ಹನ್ನೊಂದೂವರೆ. ಒಮ್ಮೆಗೆ ರಾತ್ರಿ ಊಟಕ್ಕೆ ಬರ್ತೀನಿ. ಬೆಳಿಗ್ಗೆ ವೆಂಕಜ್ಜಿಗೆ ಒಂದಿಷ್ಟು ಎಲೆ ತಂದು ಕೊಟ್ಟಿದ್ದೇನೆ. ಅದರ ಪತ್ರೊಡೆ ಮಾಡಲಿಕ್ಕೆ ಹೇಳು. ನಾನು ಒಬ್ಬನೇ ಕ್ಯಾಪ್ಟನ್ ರವಿನ ಮೀಟ್ ಮಾಡೋದು ಬಾಕಿ ಇದೆ. ಎಲ್ಲಾ ಮುಗಿಸಿ ರಾತ್ರಿಗೆ ಭೇಟಿ ಆಗ್ತೀನಿ. ಬೈ' ಅನ್ನುತ್ತಾ ತನ್ನ ಪ್ರೀಮಿಯರ್ ಪದ್ಮಿನಿ ಹತ್ತಿಯೇ ಬಿಟ್ಟ.

*****

'ವೆಂಕಜ್ಜಿ ಪತ್ರೊಡೆ ಸ್ಪೆಷಲಿಸ್ಟ್! ಪರ್ಫೆಕ್ಟ್ ಸೀಸನಿಂಗ್ ಆಗಿರುವ ಎಲೆ. ಸರಿಯಾದ ಖಾರದ ಹದ! ಹ್ಯಾಟ್ಸ್ ಆಫ್'. ನಮ್ಮ ಮನೆಯಲ್ಲಿ ತಟ್ಟೆ ತುಂಬಾ ಬಿಸಿ ಬಿಸಿ ಪತ್ರೊಡೆ ಮೆಲ್ಲುತ್ತಾ ಕುಳಿತ ಪಟ್ಟಾಭಿ ಪೂರಾ ರಿಲಾಕ್ಸ್ ಆದ ಹಾಗೆ ಕಾಣುತ್ತಿತ್ತು.

'ಅಲ್ಲವೋ ಮಾರಾಯ! ಬೆಳಿಗ್ಗೆ ರಾಧಾ ಬಾಯಿಭೇಟಿ ಆದ ಮೇಲೆ ಮಾಯ ಆದವನು ಈಗ ರಾತ್ರಿ ಹೊತ್ತಿಗೆ ವಾಪಸ್ಸಾಗಿದ್ದೀಯಾ. ಇಡೀ ದಿವಸ ಏನು ಮಾಡಿದೆ? ನಿನ್ನ ನೋಡಿದ್ರೆ ಪೂರ್ತಿ ಆರಾಮಾದಂತೆ ಕಾಣಿಸ್ತಾ ಇದೆ.!' ನನ್ನ ಮಾತಿಗೆ ಪಟ್ಟಾಭಿ ನಸುನಕ್ಕ.

'ಬೆಳಗಿಂದಾ ಬಹಳ ಕೆಲಸ ಮಾಡಿದ್ದೀನಿ. ನಿನ್ನ ಬಿಟ್ಟು ಇಲ್ಲಿಂದ ಸೀದಾ ಕ್ಯಾಪ್ಟನ್ ಮನೆಗೆ ಹೋದೆ.

ಆಮೇಲೆ ಧಾರವಾಡದಲ್ಲಿ ಒಂದಿಬ್ಬರನ್ನು ಭೇಟಿ ಮಾಡಲು ಹೋಗಿದ್ದೆ. ಸಂಜೆಗೆ ನಿನ್ನ ಫ್ರೆಂಡ್ ವೆಂಕಟಾದ್ರಿ ಕಡೆಗೂ ಹೋಗಿ ಬಂದೆ. ಈ ಪುಸ್ತಕದ ವಿಷಯ ಒಂದು ಹಂತಕ್ಕೆ ಬಂದು ತಲುಪಿತು ನೋಡು.'

'ಅಂದರೆ ಏನು ಅರ್ಥ? ಕಳೆದು ಹೋದ ಪುಸ್ತಕ ಸಿಕ್ಕಿತಾ? ಯಾರ ಹತ್ರ ಇದೆ ಅದು ಈಗ?' ಪಟ್ಟಾಭಿಯ ಒಗಟಿನ ಮಾತು ನನಗೆ ಅಚ್ಚರಿ ತಂದಿತ್ತು.

'ಪುಸ್ತಕ ಸಿಕ್ಕೇ ಸಿಗುತ್ತೆ. ಚಿಂತೆಮಾಡಬೇಡ. ಇನ್ನೂ ಒಂದೆರಡು ವಿಷಯ ಸ್ಪಷ್ಟ ಆಗಬೇಕಾಗಿದೆ. ನಾಳೆಗೆ ನಾನು ಇದರ ಕ್ಲೈಮ್ಯಾಕ್ಸ್ ಫಿಕ್ಸ್ ಮಾಡ್ತಾ ಇದ್ದೇನೆ' ಪಟ್ಟಾಭಿ ಕೈಕಾಲುಗಳನ್ನು ಅಗಲಿಸಿ ಆರಾಮಾಗಿ ಕೂತ. 'ಯಾವುದರ ಕ್ಲೈಮ್ಯಾಕ್ಸ್? ಅಂದ್ರೆ ಪುಸ್ತಕದ ಕಳ್ಳ ಸಿಕ್ಕಿದ ಅಂತಾ ಆಯ್ತು ರಾಧಾ ಬಾಯಿಯೇ ಹಾರಿಸಿರಬೇಕು ಹಾಗಿದ್ದರೆ.' ಪಟ್ಟಾಭಿಯೆಂದರೆ ಪ್ರತಿಕ್ಷಣದಲ್ಲೂ ಅನಿರೀಕ್ಷಿತ ತಿರುವುಗಳು, ಸೋಜಿಗಗಳು ಎಂದೇ ಅರ್ಥ!

'ಇರು ಇರು. ಒಂದು ಫೋನ್ ಮಾಡಿ ಬಿಡ್ತೀನಿ. ಆಮೇಲೆ ನಿನಗೇ ಅರ್ಥ ಆಗುತ್ತೆ' ಎನ್ನುತ್ತಾ ತನ್ನ ಮೊಬೈಲ್ ಫೋನ್‌ನಿಂದ ಯಾರಿಗೋ ಕಾಲ್ ಮಾಡಿ ಮಾತನಾಡತೊಡಗಿದ. 'ಹಲೋ ನಚಿಕೇತ ಪಾಟೀಲ್ ನಾನು ಡಾ. ಪಟ್ಟಾಭಿರಾಮ್. ಹೌದು ಹೌದು. ರಾಮರಾವ್ ಫ್ರೆಂಡ್. ನಿಮ್ಮ ಹೊಸರುಚಿ ಪುಸ್ತಕ ಸಿಕ್ಕಿದೆ. ಹೌದು ಸಿಕ್ಕಿದೆ. ಇಲ್ಲ, ನನ್ನ ಕೈಯಲ್ಲಿ ಈಗ ಇಲ್ಲ ಅದು. ನಿಮಗೆ ಅದು ಸಿಗೋ ಹಾಗೆ ಮಾಡೋದು ನನ್ನ ಜವಾಬ್ದಾರಿ. ನಾಳೇನೇ ನಿಮಗೆ ಸಿಗತ್ತೆ' ಎನ್ನುತ್ತಾ ನನ್ನ ಕಡೆ ನೋಡಿ ನಸುನಗುತ್ತ ಫೋನ್‌ನ ಸ್ಪೀಕರ್ ಆನ್ ಮಾಡಿದ. ಅತ್ತ ಕಡೆಯಿಂದ ನಚಿಕೇತನ ಉದ್ವೇಗ ಭರಿತ ಧ್ವನಿ ಕೇಳಿಸಿತು. ಅತ್ಯಂತ ಕೃತಜ್ಞತೆಯಿಂದ ಪಟ್ಟಾಭಿಯನ್ನು ವಂದಿಸುತ್ತಿದ್ದ ನಚಿಕೇತ. ಅವನ ಧ್ವನಿ ಕೇಳಿ ನನಗೆ ಅವನ ಮೇಲೆ ಕನಿಕರ ಉಂಟಾಗತೊಡಗಿತು. ಮತ್ತೆ ಪಟ್ಟಾಭಿ ಮಾತನಾಡಿದ 'ಆದರೆ ನಚಿಕೇತ್, ನನಗೊಂದು ಸಹಾಯ ಮಾಡಬೇಕು ನಾಳೆ ನಾನು ಇನ್ಸ್‌ಪೆಕ್ಟರ್ ವೆಂಕಟಾದ್ರಿ, ರಾಮರಾವ್ ದಂಪತಿಗಳು, ಕೇಳಕರ್ ದಂಪತಿಗಳು ಹಾಗೂ ಕ್ಯಾಪ್ಟನ್ ರವಿ ನಿಮ್ಮ ಮನೆಗೆ ಡಿನ್ನರ್‌ಗೆ ಬರಲಿದ್ದೇವೆ. ನಾಳೆ ರಾತ್ರಿಗೆ ನೀವೇ ನಮ್ಮ ಹೋಸ್ಟ್! ನಿಮಗೆ ಬುಕ್ ವಾಪಸ್ಸು ಸಿಗೋದನ್ನ ಸೆಲೆಬ್ರೇಟ್ ಮಾಡಲಿಕ್ಕೆ ಅಷ್ಟೇ! ಬುಕ್ ಇಲ್ಲ ಅಂತಾ ಚಿಂತೆ ಮಾಡಬೇಡಿ. ನಾನು ನಾಳೆ ಸಂಜೆಗೇ ನಿಮ್ಮ ಮನೆಗೆ ಬಂದು ಅಡಿಗೆಗೆ ಸಹಾಯ ಮಾಡ್ತೀನಿ. ನನ್ನದೇ ಮೆನು! ಎಲ್ಲರನ್ನೂ ರಾತ್ರಿ ಎಂಟು ಘಂಟೆ ಬರಲಿಕ್ಕೆ ನಿಮ್ಮ ಪರವಾಗಿ ನಾನೇ ಅಮಂತ್ರಣ ಕೊಡ್ತೀನಿ. ಓಕೆ' ಅತ್ತ ಕಡೆಯಿಂದ ನಚಿಕೇತ್‌ನಿಗೆ ಸಂತೋಷ, ಆಶ್ಚರ್ಯಗಳಿಂದ ಬಾಯಿ ಕಟ್ಟಿದಂತೆ ಭಾಸವಾಗುತ್ತಿತ್ತು. 'ಆಯ್ತು ಸಾರ್, ಖಂಡಿತವಾಗಿ ನನಗೆ ಆ ಪುಸ್ತಕ ಸಿಕ್ಕಿದರೆ ಸಾಕು. ನಾನು ನೀವು ಹೇಳಿದ ಹಾಗೇ ಮಾಡ್ತೀನಿ ಥ್ಯಾಂಕ್‌ಯೂ ವೆರಿ ಮಚ್' 'ಓಕೆ ನಾಳೆಗೆ ಸಂಜೆ ಸಿಗೋಣ ಹಾಗಾದ್ರೆ ಬೈ' ಎನ್ನುತ್ತಾ ಪಟ್ಟಾಭಿ ಫೋನ್ ಆಫ್ ಮಾಡಿ ಮತ್ತೊಮ್ಮೆ ನನ್ನ ಕಡೆ ನೋಡಿ ಕಣ್ಣು ಮಿಟುಕಿಸಿದ.

ನನ್ನ ತೆರೆದ ಬಾಯಿ ಅಚ್ಚರಿಯಿಂದ ತೆರೆದೇ ಇತ್ತು. ನಾಳೆ ಮತ್ತೆ ನಚಿಕೇತನ ಮನೆಯಲ್ಲಿ ಔತಣ! ಅದೂ ಪಟ್ಟಾಭಿಯ ರಾಯಭಾರತ್ವದಲ್ಲಿ! ಇದರಲ್ಲೇನೂ ಪಟ್ಟಾಭಿಯ ಕರಾಮತ್ತು ಇದೆಯೆಂದು ಸ್ಪಷ್ಟವಾಯಿತು. 'ಹೋಗಲಿ ಅ ಪುಸ್ತಕ ಕದ್ದವರು ಯಾರು ಹೇಳು ಹೋಗ್ಲಿ' ನನ್ನ ತಲೆ ಗೊಂದಲದ ಗೂಡಾಗಿತ್ತು.

'ಬಹಳ ತಲೆ ಕೆಡಿಸ್ಕೋಬೇಡ, ಮೊದಲು ಪತ್ರೊಡೆ ಮುಗಿಸು. ನಾಳೆ ಮೆನು ಕೂಡಾ ಭರ್ಜರಿಯಾಗಿದೆ. ನಾಳೆ ನೀನೂ, ಅತ್ತಿಗೆ ರಾತ್ರಿ ಎಂಟಕ್ಕೆ ನಚಿಕೇತನ ಮನೆಗೆ ಬಂದು ಬಿಡು. ನನಗಿನ್ನು ಕೆಲಸ ಇದೆ' ಎನ್ನುತ್ತಾ ಪಟ್ಟಾಭಿ ಹೊರಟೇ ಬಿಟ್ಟ.

*****

ಮರುದಿನ ರಾತ್ರಿ ಎಂಟಕ್ಕೆ ನಚಿಕೇತನ ಮನೆಯಲ್ಲಿ ನಮಗೆ ಚಿರಪರಿಚಿತ ವಾತಾವರಣವೇ ಇತ್ತು. ಆದರೆ ಕಳ್ಳತನದ ಆರೋಪ ಹೊತ್ತ ನಾವುಗಳೆಲ್ಲಾ, ಆರೋಪ ಹೊರೆಸಿದವನ ಅತಿಥಿಗಳಾಗಿ ಬಂದಿದ್ದೆವು. ಪಟ್ಟಾಭಿ ಹಾಗೂ ವೆಂಕಟಾದ್ರಿ ಅಷ್ಟೇ ಹೊಸಬರು. ಅವತ್ತು ಪಟ್ಟಾಭಿಯ ಮಾರ್ಗದರ್ಶನದಲ್ಲಿ ನಚಿಕೇತ ಅತ್ಯಂತ ಶ್ರದ್ಧೆಯಿಂದ ರುಚಿಕರವಾದ ಅಡಿಗೆ ತಯಾರಿಸಿದ್ದ. ತರಕಾರಿ ಕೂಟು, ನಿಂಬೆಹಣ್ಣಿನ ಚಿತ್ರಾನ್ನ ಹಾಗೂ ಗಸಗಸೆ ಪಾಯಸ ಉತ್ಕೃಷ್ಟವಾಗಿತ್ತು. ಆದರೆ ಇದ್ದ ಮೂವರಲ್ಲಿ ಕದ್ದವರು ಯಾರು ಎಂಬಂತೆ ನಾವುಗಳು ಮತ್ತೊಬ್ಬರನ್ನು ಸಂಶಯಾಸ್ಪದವಾಗಿ ನೋಡುತ್ತಲೇ ಊಟ ಮಾಡಿದೆವು. ಪಟ್ಟಾಭಿಯಂತೂ ಬಿಟ್ಟು ಬಿಡದೇ ಮಾತನಾಡುತ್ತಿದ್ದರಿಂದ ಬೇರೆ ಯಾವ ಮಾತಿಗೂ ಅವಕಾಶವೇ ಇರಲಿಲ್ಲ. ವೆಂಕಟನಂತೂ ನಿರಾಶ್ರಿತರು

ಗಬಗಬನೇ ತಿನ್ನುವ ಹಾಗೆ ಸಿಕ್ಕ ಸುವರ್ಣಾವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದ. ನಚಿಕೇತ ಮ್ಲಾನವದನನಾಗಿ ಮೌನವಾಗಿದ್ದು, ಕೆಲವೊಮ್ಮೆ ಕಣ್ಣೀರು ಒರೆಸಿಕೊಳ್ಳುತ್ತಿದ್ದ.

ಪುಷ್ಕಳ ಊಟವಾದ ಮೇಲೆ ಎಲ್ಲರೂ ಹಾಲ್‌ನಲ್ಲಿ ಆಸೀನರಾದೆವು. ಆತಂಕ ಹಾಗೂ ಗಾಂಭೀರ್ಯ ಮತ್ತೊಮ್ಮೆ ಮನೆ ಮಾಡಿತು. ಬೇಕೆಂತಲೇ ಸಸ್ಪೆನ್ಸ್ ಬೆಳೆಸುತ್ತಾ ಹೊರಟಿದ್ದ ಪಟ್ಟಾಭಿ, ಕೂತ ಎಲ್ಲರ ಮುಖಗಳನ್ನು ಒಮ್ಮೆ ಅವಲೋಕಿಸಿ ರಂಗ ಪ್ರವೇಶ ಮಾಡಿದ.

'ನನ್ನ ಆಮಂತ್ರಣಕ್ಕೆ ಓಗೊಟ್ಟು ಬಂದಿದ್ದಕ್ಕೆ ಮೊದಲು ಎಲ್ಲರಿಗೂ ಧನ್ಯವಾದ. ಅಲ್ಲದೆ ನನ್ನ ಮಾತಿಗೆ ಒಪ್ಪಿ ಇಷ್ಟು ಒಳ್ಳೇ ಊಟ ಹಾಕಿದ್ದಕ್ಕೆ ನಚಿಕೇತ್‌ಗೆ ದೊಡ್ಡ ಥ್ಯಾಂಕ್ಸ್!'

ನಚಿಕೇತ ಕಾತರವೇ ಮೂರ್ತಿವೆಂತ್ತಂತೆ ಕುಳಿದ್ದವನು ಮಧ್ಯ ಬಾಯಿ ಹಾಕಿದ 'ಡಾಕ್ಟ್ರೇ, ಆ ಪುಸ್ತಕ ಎಲ್ಲಿದೆ?'

ಪಟ್ಟಾಭಿ ಅವನೆಡೆ ತಿರುಗಿ ಕೈ ಎತ್ತಿ ಸಮಾಧಾನ ಪಡೆಸಿದ. "ಸಹನೆಯಿರಲಿ. ನಾನೆಲ್ಲಾ ಹೇಳೋ ತನಕ ಆರಾಮಾಗಿ ಎಲ್ಲರೂ ಕೂತಿರಿ. ಈಗ ಮೊದಲು ನಮ್ಮ ಮುಂದಿರುವ ಒಂದು ಗೋಜಲನ್ನು ಸರಿಪಡಿಸಬೇಕಾಗಿದೆ. ಅದೇನೆಂದರೆ ನಿಮಗೆಲ್ಲರಿಗೂ ನಮ್ಮ ನಚಿಕೇತ ಪಾಟೀಲರ ಮೇಲೆ ಅಸಮಾಧಾನ ಉಂಟಾಗಿದೆ. ಅವರು ನಿಮ್ಮೆಲ್ಲರ ಮೇಲೆ ಹೊಸರುಚಿ ಪುಸ್ತಕದ ಕಳ್ಳತನದ ಆರೋಪ ಹೊರೆಸಿದ್ದಕ್ಕೆ ನೀವು ಅವರನ್ನು ತಪ್ಪು ತಿಳಿದಿರಲಿಕ್ಕೂ ಸಾಧ್ಯವಿದೆ. ಅದನ್ನು ಪರಿಹರಿಸಲೆಂದೇ ಇವತ್ತು ಅವರ ಕೈಯಿಂದಲೇ ನಿಮಗೆಲ್ಲಾ ಭೂರಿ ಭೋಜನದ ಏರ್ಪಾಟು ಮಾಡಿದ್ದು ನಾನು. ದಯವಿಟ್ಟು ನೀವೆಲ್ಲಾ ದೊಡ್ಡ ಮನಸ್ಸು ಮಾಡಿ ಅವರನ್ನು ಕ್ಷಮಿಸಿ ಬಿಡಿ'.

ನಚಿಕೇತ ತಕ್ಷಣ ಎದ್ದು ನಿಂತು ಕೈ ಮುಗಿಯುತ್ತಾ ನುಡಿದ. 'ಹೌದು, ನನ್ನದು ತಪ್ಪಾಗಿದೆ. ಆ ಪುಸ್ತಕ ನನಗೆ ಜೀವಕ್ಕಿಂತಾ ಮಿಗಿಲಾಗಿತ್ತು. ಸುರಭಿಯೇ ನನ್ನ ಜೊತೆಗೆ ಇದ್ದಂತೆ ಆ ಪುಸ್ತಕ ನನಗೆ ಮನಶ್ಶಾಂತಿ ನೀಡುತ್ತಿತ್ತು. ಅದು ಅವತ್ತಿನ ಊಟದ ನಂತರ ಈ ಟೇಬಲ್‌ನಿಂದಲೇ ಮಾಯವಾದ ಕೂಡಲೇ ಹುಚ್ಚನಂತಾಗಿ ಏನು ಮಾಡಬೇಕೆಂದು ತಿಳಿಯದೇ, ಈ ರೀತಿ ಪೋಲೀಸ್ ಕಂಪ್ಲೇಂಟ್ ಕೊಟ್ಟೆ! ಕೈಮುಗಿದು ಕೇಳ್ಕೋತಿನಿ. ನಿಮ್ಮಲ್ಲಿ ಯಾರಾದರೂ ಆ ಪುಸ್ತಕ ತಗೊಂಡಿದ್ದರೆ, ದಯವಿಟ್ಟು ವಾಪಸ್ಸು ಕೊಟ್ಟು ಬಿಡಿ. ನಿಮ್ಮ ಉಪಕಾರ ಈ ಜನ್ಮದಲ್ಲಿ ಮರೆಯೋದಿಲ್ಲ'. ತನ್ನ ಆರಡಿ ದೇಹವನ್ನು ಮೂರಡಿಗೆ ಕುಗ್ಗಿಸಿ ನಚಿಕೇತ ಮತ್ತೆ ಕಣ್ಣೀರು ಮಿಡಿದ.

ನಚಿಕೇತನ ಎರಡೂ ಹೆಗಲ ಮೇಲೆ ಕೈಯಿಟ್ಟು ಪಟ್ಟಾಭಿ ಅವನನ್ನು ಕೂಡಿಸಿದ' ಪಾಟೀಲ್ ನೀವು ಸಮಾಧಾನ ಮಾಡ್ಕೋಳ್ಳಿ. ನಿಮ್ಮ ಪುಸ್ತಕ ನಿಮಗೆ ಸಿಕ್ಕೇ ಸಿಗುತ್ತೆ. ಅದನ್ನು ಹುಡುಕೋದರಲ್ಲಿ ನನ್ನ ಸ್ವಾರ್ಥವೂ ಇದೆ.' ಸ್ವಲ್ಪ ದೂರ ಸರಿದು ಎಲ್ಲರ ಮುಂದೆ ನಿಂತು ಮತ್ತೆ ಪ್ರಾರಂಭಿಸಿದ 'ಈ ಪುಸ್ತಕ ಸುರಭಿಯದು. ನಚಿಕೇತನಿಗೆ ಈ ಪುಸ್ತಕ ಸುರಭಿಯ ನೆನಪನ್ನು ಚಿರನೂತನವಾಗಿ ಇಡಲು ಆಧಾರವಾಗಿತ್ತು. ಹಾಗಾದರೆ ಇದನ್ನು ಕದ್ದವರು ಹೊಸರುಚಿ ಕಲಿಯಲು ಈ ಕಳ್ಳತನ ಮಾಡದೆ, ನಚಿಕೇತ ಸುರಭಿಯ ಈ ನೆನಪಿನ ಕಾಣಿಕೆಯನ್ನು ಹೊಂದಿದ್ದನ್ನು ಸಹಿಸದೇ ಮಾಡಿರಬಹುದು. ಅಂದರೆ ಅವರೂ ನಚಿಕೇತನಂತೆ ಸುರಭಿಯನ್ನು ಬಹಳ ಹಚ್ಚಿಕೊಂಡಿದ್ದರು ಅಂತಾ ಗುಮಾನಿ ಬರತ್ತೆ. ಈ ಮಿಸ್ಟರ್ ರಾಮ ರಾವ್. ಎರಡು ವರ್ಷದ ಹಿಂದೆ ಸುರಭಿ ಸುಟ್ಟುಕೊಂಡು ಸತ್ತ ದಿನ ನಿಮಗೆ ನೆನಪಿರಬಹುದು. ಅಂದು ನೀವೆಲ್ಲಾ ಕ್ಯಾಪ್ಟನ್ ರವಿ ಮನೆಯಲ್ಲಿ ಕ್ರಿಕೆಟ್ ಮ್ಯಾಚ್ ನೋಡಲಿಕ್ಕೆ ಸೇರಿದ್ದಿರಿ ಅಲ್ವಾ. ಆಗ ಸುರಭಿ ಮನೆಯಲ್ಲಿ ಒಂಟಿಯಾಗಿ ಇದ್ದಳು ಮತ್ತು ಗ್ಯಾಸ್ ಸಿಲಿಂಡರ್ ಸ್ಫೋಟದಲ್ಲಿ ತೀರಿಕೊಂಡಳು ಅಲ್ವಾ?'

ನಾನು ಬಾಯಿ ತೆಗೆಯುದರೊಳಗೆ ನಚಿಕೇತ ಸಿಟ್ಟಿನಿಂದ ನುಡಿದ' ಆ ದಿನ ಯಾಕೆ ಜ್ಞಾಪಿಸ್ತೀರಾ ಡಾಕ್ಟರ್. ಅವತ್ತಿನ ನೆನಪು ಬಂದರೆ ಕರುಳು ಕಿತ್ತಿ ಬರತ್ತೆ' "ನಿಮ್ಮ ಹೆಂಡತಿಯ ಮೇಲಿನ ಪ್ರೀತಿ, ವ್ಯಾಮೋಹದಿಂದ ಹಾಗಾಗೋದು ಸಹಜ. ನಚಿಕೇತ್ ಅತಿ ಪ್ರೀತಿ ಬಹಳ ಕೆಟ್ಟದ್ದು. ಅದರಿಂದ ಕೆಲವೊಮ್ಮೆ ಅನಾಹುತಗಳೂ ಆಗುತ್ತದೆ." ಪಟ್ಟಾಭಿ ಒಗಟಿನ ಮಾತಾಡುತ್ತಾ ನಚಿಕೇತನನ್ನು ಒಮ್ಮೆ ತೀಕ್ಷ್ಣವಾಗಿ ದಿಟ್ಟಿಸಿ ನೋಡಿದ. ಅವನ ಗಂಭೀರವದನವನ್ನು ನೋಡುತ್ತಾ ನಚಿಕೇತ ತೆಪ್ಪಗೆ ಕೂತ.

'ಈ ರೀತಿಯ ಪ್ರೀತಿ ಯಾವ ವಿಧದಲ್ಲಿ ಸುರಭಿನ ಬಲಿ ತಗೊಳ್ತು ಅಂತಾನಾ ನಿಮಗೆ ಹೇಳ್ತಿನಿ

ಕೇಳಿ. ಕ್ಯಾಪ್ಟನ್ ರವಿ ಅವರೇ ಈಗ ಹೇಳಿ ಅವತ್ತು ಕ್ರಿಕೆಟ್ ಮ್ಯಾಚ್ ಗೆದ್ದಿದ್ದು ಯಾರು? ನೀವೆಲ್ಲಾ ಬೇಡ ಇಂಡಿಯಾನಾ? ಸೌತ್ ಆಫ್ರಿಕಾನಾ?

ಕ್ಯಾಪ್ಟನ್ ರವಿಯ ಮುಖ ವಿವರ್ಣವಾದರೂ ಸಾವರಿಸಿಕೊಂಡು ಗಡುಸಾಗಿ ಉತ್ತರಿಸಿದ 'ಅದನ್ನು ಕಟ್ಟಿಕೊಂಡು ನಿಮಗೇನು ಈಗ?'.

'ಕೋಪಬೇಡ ರವಿ ಅವರೇ. ಅವತ್ತು ಎಲ್ಲರೂ ಮ್ಯಾಚ್ ನೋಡ್ತಾ ಇದ್ದಾಗ ನೀವು ಯಾಕೆ ಬಹಳ ಹೊತ್ತು ನಾಪತ್ತೆಯಾಗಿದ್ದಿರಿ?'

ರವಿ ಒರಟಾಗಿಯೇ ಉತ್ತರಿಸಿದ 'ಅವತ್ತು ಎಲ್ಲರಿಗೂ ಸ್ಕಾಚ್‌ವಿಸ್ಕಿ ಅರೇಂಜ್ ಮಾಡಿದ್ದೆ. ಅದಕ್ಕೆ ಸ್ವಲ್ಪ ಕುರುಕಲು ತಿಂಡಿ ತರಲಿಕ್ಕೆ ಹೊರಗೆ ಹೋಗಿದ್ದೆ ಅಷ್ಟೇ'

'ಆದರೆ ನೀವು ಸಾಮಾನ್ಯವಾಗಿ ಈ ಕುರುಕಲು ತಿಂಡಿ, ಸ್ಟಾರ್ಟರ್ಸ್‌ಗಳನ್ನು ಕೊಳ್ಳುವ ಅಂಗಡಿ ನಿಮ್ಮ ಮನೆಗೆ ಎರಡು ನಿಮಿಷದ ದಾರಿಯಲ್ಲಿದೆ. ಆದರೆ ನೀವು ಸುಮಾರು ಒಂದು ಘಂಟೆ ಮನೆಯಲ್ಲಿ ಇರಲಿಲ್ಲ. ಯಾಕೆ ಅಂತಾ ಹೇಳ್ತಿರಾ' ಪಟ್ಟಾಭಿ ತನ್ನ ಒಂದೊಂದೇ ಪಟ್ಟುಗಳನ್ನು ಪ್ರಯೋಗಿಸಲು ಪ್ರಾರಂಭಿಸಿದ್ದ.

ರವಿ ಕ್ರೋಧದಿಂದ ಕಿರುಚಾಡ ತೊಡಗಿದ 'ನಾನು ಎಲ್ಲಿ ಹೋಗಿದ್ದೆ ಅಂತಾ ನಿಮಗ್ಯಾಕೆ ಹೇಳಲಿ. ಅದಕ್ಕೂ ಈ ಪುಸ್ತಕ ಕಳುವಾದ್ದಕ್ಕೂ ಏನು ಸಂಬಂಧ?

ಇನ್ಸ್‌ಪೆಕ್ಟರ್ ಇವರು ಯಾರು ಇದೆಲ್ಲಾ ಕೇಳಲಿಕ್ಕೆ? ನೀವು ಇಲ್ಲಿ ಇದ್ದಾಗ ಇವರಿಗೆ ಈ ಪ್ರಶ್ನೆ ಕೇಳಲಿಕ್ಕೆ ಹಕ್ಕು ಯಾರು ಕೊಟ್ರು?'

ವೆಂಕಟಾದ್ರಿ ತನ್ನ ಪೋಲೀಸ್ ಗತ್ತಿನಲ್ಲಿ ನುಡಿದ 'ಅವರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರೆ ನಿಮಗೆ ಕ್ಷೇಮ ಮಿಸ್ಟರ್ ರವಿ. ಅವರು ನಾನೂ ಒಂದು ಟೀಮ್. ನೀವು ಮುಂದುವರೆಸಿ ಡಾಕ್ಟ್ರೇ'. ರವಿ ಇಂಗು ತಿಂದ ಮಂಗನಂತೆ ಒಳಗೊಳಗೆ ಭುಸುಗುಡುತ್ತಾ ತೆಪ್ಪಗೆ ಕೂತ.

'ಕ್ಯಾಪ್ಟನ್ ಸಾಹೇಬ್ರೇ. ಅವತ್ತು ಏನೇನು, ನಡೀತು ಅಂತಾ ಮತ್ತೊಮ್ಮೆ ಮೆಲುಕು ಹಾಕೋಣ' ಪಟ್ಟಾಭಿ ಇಂದು ಒಳ್ಳೆಯ ಲಯದಲ್ಲಿದ್ದ 'ಸುರಭಿ ಸತ್ತ ವಿಚಾರ ನಿಮಗೆ ತಲುಪಿದ ಕೂಡಲೇ ನಚಿಕೇತನನ್ನು ಸಂಭಾಳಿಸಿ ಕರೆದುಕೊಂಡು ಬನ್ನಿ ಅಂತಾ ಇತರರಿಗೆ ಹೇಳಿ, ತಾವು ಎಲ್ಲರಿಗಿಂತಾ ಬೈಕ್ ಹತ್ತಿ ಅವರ ಮನೆಗೆ ಧಾವಿಸಿದಿರಿ. ಅಷ್ಟರಲ್ಲೇ ಅಲ್ಲಿ ನೆರೆದಿದ್ದ ಪಕ್ಕದ ಮನೆಯವರ ಪ್ರಕಾರ ನೀವು ಬಾಗಿಲು ಒಡೆಯುವುದನ್ನು ಬಿಟ್ಟು, ಅವರ ಮನೆಯಲ್ಲಿ ಏನೋ ಹುಡುಕಾಟ ನಡೆಸಿ ಆಮೇಲೆ ಎಲ್ಲರ ಜೊತೆ ಸಹಾಯಕ್ಕೆ ನಿಂತಿರಿ. ನೀವು ಅಲ್ಲಿ ಏನು ಹುಡುಕುತ್ತಾ ಇದ್ದಿರಿ ರವಿ? ಅಂದ ಹಾಗೆ ನಚಿಕೇತ್. ಆ ದುರ್ಘಟನೆ ನಡೆದ ಮನೆಯಲ್ಲಿ ಸುರಭಿಯವರ ಮೊಬೈಲ್ ಫೋನ್ ನಿಮಗೆ ಸಿಕ್ಕಿತ್ತಾ?'

'ಇಲ್ಲ, ಅವಳ ಮೊಬೈಲ್ ಫೋನ್ ಮನೆಯಲ್ಲಿ ಆಮೇಲೆ ಸಿಗಲೇ ಇಲ್ಲ. ಬಹುಶಃ ಅದೂ ಬೆಂಕಿಯಲ್ಲಿ ಸುಟ್ಟು ಹೋಯಿತು ಅಂತಾ ಎಲ್ಲರೂ ತಿಳಿದಿದ್ದರು' ನಚಿಕೇತ ಉದ್ವೇಗದಿಂದ ನುಡಿದ. ಈಗ ರವಿಯ ಮುಖದಲ್ಲಿ ಬೆವರು ಸುರಿಯಲು ಪ್ರಾರಂಭಿಸಿತ್ತು.

'ಸರಿ ಹಾಗಾದರೆ, ರವಿ ಮೊದಲು ಓಡಿ ಬಂದು ಸುರಭಿಯ ಮೊಬೈಲ್ ಫೋನ್ ಮಾಯ ಮಾಡಿರಬಹುದು ಅಂದು ಕೊಳ್ಳೋಣ. ಅಂದರೆ ಏನೋ ಸಂಶಯಾಸ್ಪದವಾದ ಫೋನ್ ಕರೆಯ ವಿವರಗಳೋ, ಫೋಟೋಗಳೋ ಅಥವಾ ಮೆಸೇಜ್‌ಗಳೋ ಸುರಭಿಯ ಫೋನ್‌ನಲ್ಲಿ ಸಿಗಬಹುದು ಅಂತಾ ಭಯಪಟ್ಟು ಈ ರೀತಿ ಮಾಡಿರಬಹುದೇ?'

ಪಟ್ಟಾಭಿ ಸರಿಯಾದ ಜಾಗಕ್ಕೆ ಪೆಟ್ಟು ಕೊಟ್ಟ ಅನ್ನಿಸಿತು. ಈಗ ರವಿಯ ಚರ್ಯೆ ಸಂಪೂರ್ಣ ಬದಲಾಗಿತ್ತು. ಹತಾಷೆ, ಭಯದಿಂದ ನಡುಗುತ್ತಾ ನುಡಿದ' ಇಲ್ಲ. ನಾನು ಸುರಭಿಗೆ ಯಾವ ಮೇಸೇಜ್ ಕಳಿಸಿಲ್ಲ, ಫೋನ್ ಮಾಡಿಲ್ಲ. ನನ್ನ ನಂಬಿ. ಅವಳಿಗೆ ನಾನು ಯಾವತ್ತೂ ಯಾವುದೇ ರೀತಿಯ ಕಾಟ ಕೊಟ್ಟಿಲ್ಲ!'

"ನೀವು ಆ ದಿನ ಸುರಭಿಗೆ ಮಾಡಿದ ನಾಲ್ಕು ಫೋನ್ ಕರೆಗಳು ಹಾಗೂ ಏಳು ಮೆಸೇಜ್‌ಗಳ ವಿವರ ನಮಗೆ ಟೆಲಿಫೋನ್ ಕಂಪನಿಯ ದಾಖಲೆಗಳಲ್ಲಿ ಸಿಕ್ಕಿವೆ. ಅಂದರೆ ನೀವು ಮನೆಯಿಂದ ಹೊರಗೆ ಹೋದ ಒಂದು ಘಂಟೆಯ ಅವಧಿಯಲ್ಲಿ ಇವೆಲ್ಲಾ ನಡೆದಿದೆ' ಪಟ್ಟಾಭಿ ವಿವರಿಸಿದ. 'ಆದರೆ ರವಿ, ನೀವು ಅವಳ

ಮನೆಗೆ ಯಾಕೆ ಹೋದ್ರಿ?' ರವಿ ಬಡಪೆಟ್ಟಿಗೆ ಜಗ್ಗುವ ಆಸಾಮಿಯೇನಲ್ಲ! "ನಾನು ಫೋನ್ ಮಾಡಿರಬಹುದು. ಮೇಸೇಜ್ ಕೂಡಾ ಮಾಡಿರಬಹುದು. ಅವಳು ನನ್ನ ಕಾಲೇಜ್ ಕ್ಲಾಸ್‌ಮೇಟ್. ಕ್ಲೋಸ್ ಫ್ರೆಂಡ್ ಕೂಡಾ. ನಮ್ಮ ನಡುವೆ ಸಲುಗೆ ಇತ್ತು. ಫೋನ್ ಮುಖಾಂತರ ಆಗಾಗ ಮಾತಾಡ್ತಾ ಇದ್ವಿ. ಆದರೆ ನಾನು ಅವಳ ಮನೆಗೆ ಯಾಕೆ ಹೋಗಲಿ? ಅವೆಲ್ಲಾ ನಿಮ್ಮ ಕಟ್ಟು ಕತೆ!'.

ಬಲೆಗೆ ಬಿದ್ದ ಮಿಕವನ್ನು ನೋಡುವಂತೆ ಪಟ್ಟಾಭಿ ರವಿಯತ್ತ ಒಂದು ದೀರ್ಘನೋಟ ಬೀರಿದ. "ಅಲ್ಲೇ ನಮಗೆ ಇನ್ಸ್‌ಪೆಕ್ಟರ ವೆಂಕಟಾದ್ರಿ ಸಹಾಯ ಮಾಡಿದ್ದು. ನೀವು ಅವತ್ತು ನಿಮ್ಮ ಮನೆಯಿಂದ ನಚಿಕೇತನ ಮನೆಗೆ ಹೋಗುವಾಗ ದಾರಿಯ ಟ್ರಾಫಿಕ್ ಪೋಲೀಸ್‌ನ ಕ್ಲೋಸ್‌ಸರ್ಕ್ಯೂಟ್ ಕ್ಯಾಮರಾದಲ್ಲಿ ಕನಿಷ್ಠ ಎರಡು ಕಡೆ ನೀವು ಬೈಕ್ ಸವಾರಿ ಮಾಡುತ್ತಿರುವುದು ರೆಕಾರ್ಡ್ ಆಗಿದೆ. ಅಲ್ಲದೆ ನೀವು ಸುರಭಿಯ ಮನೆಯಿಂದ ಬೈಕ್ ಹತ್ತಿ ಹೊರಟದ್ದು ಎದುರು ಮನೆ ವಾಚ್‌ಮನ್ ನೋಡಿದ್ದಾನೆ. ಅದಾದ ಕೆಲವು ನಿಮಿಷಗಳಿಗೆ ಸ್ಫೋಟದ ಸದ್ದು ಕೇಳಿಸಿತು ಅಂತಾನೂ ಹೇಳಿದ್ದನೆ. ಈಗ ಹೇಳಿ ರವಿ. ನಿನ್ನ ಆತ್ಮೀಯ ಗೆಳತಿಗೆ ಏನು ಮಾಡಿದೆ? ಅವಳು ನಿನ್ನ ಕಾಟ ತಡೆಯಲಾರದೇ ಆತ್ಮಹತ್ಯೆ ಮಾಡಿಕೊಂಡಳೋ ಅಥವಾ ನೀನೇ ಅವಳನ್ನು ಕೊಂದು ಬಿಟ್ಟೆಯೋ?'

ಪಟ್ಟಾಭಿಯ ಪೆಟ್ಟು ಮರ್ಮಸ್ಥಾನಕ್ಕೆ ತಗುಲಿತ್ತು, "ಅಯ್ಯೋ ನಿಲ್ಲಿಸಿ, ನಾನೆಲ್ಲಾ ಹೇಳ್ತಿನಿ. ಅವಳನ್ನು ನಾನು ಕೊಲ್ಲಲಿಲ್ಲ. ಆದರೆ ಅವಳ ಸಾವಿಗೆ ನಾನೇ ಕಾರಣ. ಅವಳು ಸಾಯೋ ಹಾಗೇ ಮಾಡಿದ್ದು ನಾನೇ. ನಾನು ಪಾಪಿ' ರವಿ ಕಟ್ಟೆಯೊಡೆದ ಪ್ರವಾಹದಂತೆ ಆರ್ತನಾದ ಮಾಡಿದ.

'ಸುರಭಿ ನಾನು ಧಾರವಾಡದಲ್ಲಿ ಕಾಲೇಜ್ ದಿನಗಳಿಂದಲೂ ಗೆಳೆಯರು. ಅವಳ ಸೌಂದರ್ಯಕ್ಕೆ ಮನಸೋತು ಅವಳಿಗಾಗಿ ಹುಚ್ಚಾಗಿದ್ದೆ. ಆದರೆ ಪ್ರೇಮ ನಿವೇದನೆ ಮಾಡಿಕೊಳ್ಳುವ ಧೈರ್ಯ ಇಲ್ಲದೇ ಅವಳು ಮದುವೆಯಾಗಿ ಹೋದ ಮೇಲೆ ಕೂಡಾ ಭಗ್ನಪ್ರೇಮಿಯಾಗಿಯೇ ಉಳಿದೆ. ವರ್ಷಗಳು ಉರುಳಿದವು. ನಾನು ಮದುವೆಯಾಗಿ,

ಮಿಲಿಟರಿ ಸೇರಿದೆ. ನನ್ನ ಹೆಂಡತಿ ಕ್ಯಾನ್ಸರ್‌ನಿಂದ ತೀರಿಕೊಂಡ ಮೇಲೆ ಮಿಲಿಟರಿಗೆ ಶರಣು ಹೊಡೆದು ಹುಬ್ಬಳ್ಳಿಗೆ ತಿರುಗಿ ಬಂದೆ. ಆಗ ನನಗೆ ಸುರಭಿ ಮತ್ತೆ ಭೇಟಿಯಾದಳು. ಅವಳೂ ನಚಿಕೇತ ಕುವೈತ್ ಬಿಟ್ಟು ಈ ಊರಿಗೆ ವಾಪಸ್ಸು ಬಂದಿದ್ದರು. ಮತ್ತೆ ನಮ್ಮ ಗೆಳೆತನ ಚಿಗುರಿತು. ನನ್ನ ಹಳೆಯ ಆಸೆಗಳು ಮರುಕಳಿಸಿದವು. ಆದರೆ ಸುರಭಿ ಚಿನ್ನದಂತಾ ಹುಡುಗಿ. ನನ್ನನ್ನು ಕೇವಲ ಸ್ನೇಹಿತನಂತೆ ಆದರಿಸಿದಳು. ಒಂಟಿಯಾದ ನನಗೆ ನಿಷ್ಕಪಟ ಸ್ನೇಹವನ್ನು ಧಾರೆಯೆರೆದು ಆತ್ಮೀಯಳಾದಳು. ಆದರೆ ಅವಳನ್ನು ನೋಡಿದಾಗಲೆಲ್ಲಾ ಮತ್ತೆ ಅವಳ ಸಂಗದ ಬಯಕೆ ಉತ್ಕಟವಾಗುತ್ತಿತ್ತು. ಅವಳಿಗೊಂದು ಮಗುವನ್ನು ಕೊಡಲು ಸಾಧ್ಯವಿಲ್ಲದ ನಚಿಕೇತನನ್ನು ಕೊಂದು ಅವಳನ್ನು ಓಡಿಸಿಕೊಂಡು ಹೋಗಬೇಕೆಂದು ವಿಕೃತ ಆಸೆ ಹುಟ್ಟುತ್ತಿತ್ತು. ನಾನು ಮೇಲ್ನೋಟಕ್ಕೆ ಪ್ರಾಣ ಸ್ನೇಹಿತನಂತೆ ನಟಿಸುತ್ತಾ ಇನ್ನಷ್ಟು ಅವರ ಕುಟುಂಬಕ್ಕೆ ಹತ್ತಿರವಾದೆ. ನಚಿಕೇತನಿಗೂ ಯಾವ ಗುಮಾನಿಯೂ ಬರದ ಹಾಗೆ ಎಚ್ಚರಿಕೆ ವಹಿಸಿದೆ. ಒಮ್ಮೆ ತಡೆಯಲಾರದೆ ಸುರಭಿಗೆ ನನ್ನ ಪ್ರೇಮ ನಿವೇದನೆ ಮಾಡಿಯೇ ಬಿಟ್ಟೆ. ಅವಳು ನಿಜಕ್ಕೂ ಮಹಾನ್ ಗೆಳತಿ. ಇದರ ಬಗ್ಗೆ ನಚಿಕೇತನಿಗೂ ಹೇಳದೇ, ನನಗೆ ಬುದ್ಧಿವಾದ ಹೇಳಿ ನನ್ನನ್ನು ತಿದ್ದಲು ಪ್ರಯತ್ನಿಸಿದಳು. ನನಗೆ ಇನ್ನೊಂದು ಮದುವೆ ಮಾಡಬೇಕೆಂದೂ ಪ್ರಯತ್ನ ಪಟ್ಟಳು. ಆದರೆ ನಾನು ಮಾತ್ರ ಅಂಧನಾಗಿ ಅವಳ ಪ್ರೇಮಕ್ಕಾಗಿ ಕಾಡಿ ಬೇಡತೊಡಗಿದೆ'.

'ನಮಕ್ ಹರಾಮ್! ನಂಬಿದ ನಮಗೆ ಕತ್ತು ಕುಯ್ಯಬಿಟ್ಯಲ್ಲಾ ಸ್ಕೌಂಡ್ರಲ್, ನನ್ನ ಸುರಭೀನೇ ಬಲಿ ತಗೊಂಡ್ಯಲ್ಲೋ ಪಾಪಿ' ಕ್ರೋಧದಿಂದ ರವಿಯನ್ನು ಎಳೆದಾಡಿದ ನಚಿಕೇತನನ್ನು ನಿಯಂತ್ರಿಸಲು ನಾವು ಹರಸಾಹಸ ಮಾಡಬೇಕಾಯಿತು.

ರವಿ ಮುಂದುವರೆಸಿದ 'ಅವತ್ತು ಕ್ರಿಕೆಟ್ ಮ್ಯಾಚ್ ನೋಡಲೆಂದು ನಚಿಕೇತನ ನಮ್ಮ ಮನೆಗೆ ಬಂದೊಡನೆ ಅವರಿಗೆ ಡ್ರಿಂಕ್ಸ್ ವ್ಯವಸ್ಥೆ ಮಾಡಿ, ತಿಂಡಿ ತರುತ್ತೇನೆಂದು ನೆಪಮಾಡಿಕೊಂಡು ಸುರಭಿಯ ಮನೆಗೆ ಧಾವಿಸಿದೆ. ಫೋನ್‌ನಲ್ಲಿ ಅವಳ ಪ್ರೇಮ ಭಿಕ್ಷೆ ಬೇಡುತ್ತಾ ಅವಳ ಮನೆ ತಲುಪಿದೆ. ಅದೇನು ಕೆಟ್ಟ ಬುದ್ಧಿ ಅವತ್ತು ಬಂದಿತ್ತೋ ಗೊತ್ತಿಲ್ಲ. ಮೋಹಕವಾಗಿ ಕಾಣುತ್ತಿದ್ದ ಸುರಭಿಯನ್ನು ನನ್ನವಳಾಗಿಸಿಕೊಳ್ಳಲು ಬಲಾತ್ಕಾರ ಮಾಡಲು ಮುಂದಾದೆ. ನನ್ನಿಂದ ತಪ್ಪಿಸಿಕೊಳ್ಳಲು ಅಡುಗೆ ಮನೆಗೆ ಹೋಗಿ ಬಾಗಿಲು ಹಾಕಿ ಕೊಂಡಳು. ಅಡಿಗೆ ಮನೆಯ



ಗಾಜಿನ ಕಿಟಕಿಯಲ್ಲಿ ಅವಳಿಗೆ ನಾನು ಬೆದರಿಕೆ ಹಾಕಿ ಅಡಿಗೆ ಮನೆಯ ಬಾಗಿಲು ಮುರಿಯಲು ತಯಾರಾದೆ. ಹೇಗಾದರೂ ಮಾಡಿ ನನ್ನನ್ನು ಹೆದರಿಸಿ ಅಲ್ಲಿಂದ ಓಡಿಸಲು ಅವಳು ಗ್ಯಾಸ್ ಸ್ಟೋವ್ ಅನ್ನು ಆನ್ ಮಾಡಿ, ಗ್ಯಾಸ್ ಲೀಕ್ ಆದ ಮೇಲೆ ಕಡ್ಡಿ ಗೀರಿ ಬೆಂಕಿ ಹಚ್ಚಿಕೊಳ್ಳುತ್ತಾಳೆಂದು ಬೆದರಿಸಿದಳು. ಅದನ್ನು ನೋಡಿ ನಾನೂ ಹೆದರಿಬಿಟ್ಟೆ. ಅಷ್ಟರಲ್ಲಿ ನನ್ನ ಆವೇಶ ತಣ್ಣಗಾಗುತ್ತಾ ಬಂದಿತ್ತು. ನಿರ್ವಾಹವಿಲ್ಲದ ಅವಳನ್ನು ಹಾಗೇ ಬಿಟ್ಟು ಬೈಕ್ ಹತ್ತಿ ಮನೆಗೆ ವಾಪಸ್ಸು ಬಂದೆ. ಆದರೆ ವಾಪಸ್ಸು ಬಂದು ಮನೆಯಲ್ಲಿದ್ದಾಗ ಅವಳು ಸುಟ್ಟುಗೊಂಡು ಸತ್ತ ಸುದ್ದಿ ಬಂದಾಗ ನನಗೆ ಅತ್ಯಂತ ಆಘಾತವಾಯಿತು. ಏಕೆಂದರೆ ಆತ್ಮಹತ್ಯೆ ಮಾಡಿಕೊಳ್ಳುವ ಹೇಡಿ ಅವಳಾಗಿರಲಿಲ್ಲ. ಅವಳು ಯಾಕೆ ಸತ್ತಳು ಅಂತಾ ನನಗೂ ಯಕ್ಷಪ್ರಶ್ನೆಯಾಗೇ ಉಳಿದಿದೆ.' ಇಷ್ಟು ಹೇಳಿ ರವಿ ಕೈಗಳಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಲು ಪ್ರಾರಂಭಿಸಿದ. ನಚಿಕೇತ ಎಲ್ಲಾ ಕಳೆದು ಕೊಂಡವನಂತೆ ನಿರ್ಭಾವುಕನಾಗಿ ನಮ್ಮನ್ನೇ ನೋಡುತ್ತಿದ್ದ. ನಾವು, ಕೇಳಕರ್ ದಂಪತಿಗಳು ಸತ್ಯದ ಅನಾವರಣದಿಂದ ಭ್ರಾಂತರಾಗಿ ಮೌನವನ್ನೇ ಆಶ್ರಯಿಸಿದ್ದೆವು.

ಸಾವರಿಸಿಕೊಂಡು ನಾನು ನುಡಿದೆ, 'ಪಟ್ಟಾಭಿ, ಈ ರವಿ ಇಂತಹಾ ಮನೆಹಾಳ ಕೆಲಸ ಏಕೆ ಮಾಡಿದಾ? ನಿನಗೆ ಅವನ ಮೇಲೆ ಸಂಶಯ ಬಂದಿದ್ದಾದರೂ ಹೇಗೆ?

ಪಟ್ಟಾಭಿ ಅಂತಿಮವಾಗಿ ನುಡಿದ 'ನಚಿಕೇತ ಸುರಭಿಯ ಪುಸ್ತಕದಿಂದ ಮತ್ತೊಮ್ಮೆ ಜೀವನೋತ್ಸಾಹ ಕಂಡುಕೊಂಡು ಅವಳ ನೆನಪಲ್ಲೇ ದಿನ ಕಳೆಯುವುದು ರವಿಗೆ ಸಹನೆಯಾಗುತ್ತಿರಲಿಲ್ಲ. ಅದಕ್ಕೆ ಸಮಯ ಸಾಧಿಸಿ ಊಟದ ನಂತರ ಆ ಹೊಸರುಚಿ ಪುಸ್ತಕವನ್ನೇ ಹಾರಿಸಿದ. ಅದನ್ನು ರವಿ ನಾಶ ಮಾಡಿದ್ದಾನೆ ಅಂದರೆ ನಾನು ನಂಬುವುದಿಲ್ಲ. ಏಕೆಂದರೆ ರವಿ ಕೂಡಾ ಸುರಭಿಯ ಕೈ ಬರಹದ ಆ ಪುಸ್ತಕವನ್ನು ಜತನವಾಗಿ ಇಟ್ಟುಕೊಂಡಿದ್ದಾನೆ ಅಂತ ನನ್ನ ಅನುಮಾನ. ನಚಿಕೇತ ಅವರೇ, ಆ ಪುಸ್ತಕ ರವಿಯಿಂದ ನಿಮಗೆ ವಾಪಸ್ಸು ಕೊಡಿಸುವ ಜವಾಬ್ದಾರಿ ಇನ್ಸ್‌ಪೆಕ್ಟರ್ ವೆಂಕಟಾದ್ರಿಯವರದು. ಅದರ ಕ್ಸೆರಾಕ್ಸ್ ಮಾತ್ರ ನನಗೆ ಬೇಕು.'

ವೆಂಕಟಾದ್ರಿ ಪಟ್ಟಾಭಿಯನ್ನು ಪ್ರಶ್ನಿಸಿದ, 'ರವಿಯಿಂದ ಪುಸ್ತಕ ವಾಪಸ್ಸು ಪಡೆಯುವುದು, ರವಿಯ ಮೇಲೆ ಕಾನೂನು ರೀತ್ಯಾ ಕೇಸ್ ನಡೆಸುವುದು ಇದೆಲ್ಲಾ ನಾನು ನೋಡಿಕೊಳ್ಳುತ್ತೇನೆ. ಆದರೆ ಒಂದು ವಿಷಯ ಅರ್ಥವಾಗಲಿಲ್ಲ. ಇಷ್ಟು ಜೀವನೋತ್ಸಾಹಿ ಹೆಂಗಸು ಈ ಸುರಭಿ ಕೇವಲ ರವಿಯ ಭಯಕ್ಕೆ ಕಡ್ಡಿ ಗೀರಿ ತನ್ನನ್ನೇ ಸುಟ್ಟುಕೊಂಡಳಾ?'

'ಈ ವಿಷಯದ ಬಗ್ಗೆ ನಾನೂ ಯೋಚಿಸಿದೆ. ಸುರಭಿ ಕೇವಲ ರವಿಯನ್ನು ಹೆದರಿಸಲು ಅಷ್ಟೇ ಗ್ಯಾಸ್‌ಲೀಕ್ ಮಾಡಿದ್ದಳು ಅನ್ನಿಸುತ್ತೆ. ರವಿ ಅಲ್ಲಿಂದ ಹೊರಟು ಹೋದ ಮೇಲೆ ಅವಳು ಹೊರಗೆ ಬರಲು ಹವಣಿಸಿದಳು ಅಂತಾ ನನ್ನ ಗ್ರಹಿಕೆ. ಆದರೆ ದೇವರಿಗೆ ಇಂತಹಾ ಒಳ್ಳೆಯ ಹೆಣ್ಣು ಮಗಳನ್ನು ತನ್ನ ಬಳಿಗೆ ಕರೆಸಿಕೊಳ್ಳುವ ಧಾವಂತವಿತ್ತೋ ಏನೋ! ಅಡಿಗೆಯ ಮನೆಯಲ್ಲೇ ಇದ್ದ ದೇವರ ಮುಂದಿನ ನಂದಾದೀಪ ನಚಿಕೇತನ ಮನೆಯ ನಂದಾದೀಪವನ್ನು ಅವನಿಂದ ಕಸಿದುಕೊಂಡಿತು ಅನ್ನಿಸುತ್ತೆ. ವಾಟ್ ಎ ಅನ್‌ಲಕ್ಕೀ ಗರ್ಲ್' ಎನ್ನುತ್ತಿದ್ದಂತೆ ಪಟ್ಟಾಭಿಯ ಮುಖದಲ್ಲಿ ವಿಷಾದದ ಛಾಯೆ ಆವರಿಸಿಕೊಂಡಿತು.

## ಕೃತಿ ಪರಿಚಯ


# ಮೂಕಜ್ಜಿಯ ಕನಸುಗಳು



**ಡಾ. ರಶ್ಮಿ ಮರಳಿಹಳ್ಳಿ**
ನೇತ್ರ ತಜ್ಞೆ
ದಾವಣಗೆರೆ



ಡಾ. ಉಷಾ ಎಂ. ಜಿ.
ವಿಭಾಗೀಯ ಸಂಪಾದಕರು



ಓದುವ ಹವ್ಯಾಸ ಕೆಲ ವರ್ಷಗಳಿಂದಷ್ಟೇ ಶುರುವಾದದ್ದಾದರೂ, ಓದಿದ ಎಲ್ಲಾ ಪುಸ್ತಕಗಳಿಂದ ಒಂದಿಲ್ಲೊಂದು ಹೊಸತನ್ನು ಕಲಿತಿದ್ದೇನೆ.

ಚಿಕ್ಕಂದಿನಿಂದ ನಾನು ಕೇಳಿ ನಂಬಿಕೊಂಡು ಬಂದ ಎಷ್ಟೋ ವಿಷಯಗಳ ಬಗೆಗಿನ ದೃಷ್ಟಿಕೋನವನ್ನು ಬದಲಿಸಿದ, ಆತ್ಮಾವಲೋಕನಕ್ಕೆ ಸ್ಫೂರ್ತಿ ನೀಡಿದ ಪುಸ್ತಕವೆಂದರೆ, ಡಾ. ಶಿವರಾಮ ಕಾರಂತರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಾದಂಬರಿ "ಮೂಕಜ್ಜಿಯ ಕನಸುಗಳು".


ಮೂಕಾಂಬಿಕೆಯೆಂದು ನಾಮಕರಣಗೊಂಡ, ಹತ್ತನೆ ವಯಸ್ಸಿನಲ್ಲಿಯೇ ಗಂಡನನ್ನು (ಹದಿನಾಲ್ಕು ವಯಸ್ಸಿನ ಬಾಲಕ) ಕಳೆದುಕೊಂಡು, ಪ್ರೀತಿಯಿಂದಲೋ / ಸ್ವಭಾವದಿಂದಲೋ / ಸ್ವಪ್ರೇರಿತರಾಗಿ ಮೌನಕ್ಕೆ ಶರಣಾದ 'ಮೂಕಿ' ಎಂದು ಕರೆಯಲ್ಪಡುತ್ತಿದ್ದ ಅಜ್ಜಿಯ ವಿಚಿತ್ರ ತೆರನಾದ ಕನಸುಗಳ ಕಥಾ ಬುತ್ತಿಯೇ ಕಾರಂತರ 'ಮೂಕಜ್ಜಿಯ ಕನಸುಗಳು'.

ಮೊಮ್ಮಗನ ಪಾತ್ರದಲ್ಲಿರುವ ಕಾರಂತರ ಪ್ರಕಾರ, ಎಪ್ಪತ್ತು – ಎಂಭತ್ತರ ಆಸುಪಾಸಿನಲ್ಲಿರುವ ಅಜ್ಜಿಗೆ ಅದ್ಭುತ ಶಕ್ತಿ ಇತ್ತು. ಹೋದ ಜಾಗಗಳ, ಪಕ್ಕದಲ್ಲಿ ಸುಳಿಯುವ ವ್ಯಕ್ತಿಗಳ ಬಗ್ಗೆ ಅಜ್ಜಿಗೆ ಸರಿಯೇ ಅನ್ನಿಸುವಂತಹ ಪೂರ್ವಸ್ಮೃತಿಗಳು ಹುಟ್ಟುತ್ತಿದ್ದವು. ಅವರು ತಮ್ಮ ಕಣ್ಣಿಗೆ ಕಾಣುತಿದ್ದ ದೃಶ್ಯಗಳನ್ನು ಮುಚ್ಚುಮರೆ ಮಾಡದೆ, ಅಂಜು ಅಳುಕು ಇಲ್ಲದೆ ತಟ್ಟನೆ ಹೇಳುತ್ತಿದ್ದರು. ಮುಜುಗರದಿಂದಲೋ, ನಿರಾಕರಣ ಭಾವದಿಂದಲೋ ಜನರು ಅವರನ್ನು 'ಮರಳು ಒಂದು ಸುತ್ತು ಕಡಿಮೆ' ಎಂದು ಕರೆಯುತ್ತಿದ್ದರು.

ಈ ಕತೆಯಲ್ಲಿ ಬರುವ ಕೆಲ ಪಾತ್ರಗಳ ಮುಖೇನ, ಅಜ್ಜಿ, ಸ್ವಾರಸ್ಯಕರ ಹಾಗೂ ವಾಸ್ತವಕ್ಕೆ ಹತ್ತಿರವಿರುವಂತಹ ಹಲವಾರು ವಿಷಯಗಳನ್ನು ಹೇಳುತ್ತಾರೆ.

- ರೂಪವೇ ಮುಳುವಾದ ರಾಮಣ್ಣನ ಹೆಂಡತಿ ನಾಗಿಯ ಜೀವನಗಾಥೆಯಿಂದ ಹೆಣ್ಣು ಗಂಡಿನ ಮೋಹ ಅವರವರು ಮಾಡಿಕೊಂಡದ್ದಕಿಂತ ಹೆಚ್ಚಿಗೆ ಸೃಷ್ಟಿಯೇ ಜೀವಿಗಳೊಳಗೆ ತುಂಬಿಸಿಟ್ಟ ಪ್ರೇರಣೆಎಂದು ಹೇಳುತ್ತಾರೆ.

- ತಮ್ಮ ಊರು 'ಮೂರೂರು'. ಅಲ್ಲಿ ಇರುವ ಮೂರು ಕಟ್ಟೆಗಳು – ಬಸರಿಕಟ್ಟೆ, ಬಾಳಕಟ್ಟೆ, ಬೂದಿಕಟ್ಟೆ ಜೀವನದ ಮೂರು ಪಹಲುಗಳೆಂದು ಬಣ್ಣಿಸುತ್ತಾರೆ
- ಮಂಜುನಾಥ, ತನ್ನ ಊರಾದ ಮೂಡೂರಿನ ಕೋಟಾಳಮ್ಮ ದೇವಿ ಗುಡಿಯ ಜೀರ್ಣೋದ್ಧಾರಕ್ಕೆ ಹಾವಣಿಸುತ್ತಾನೆ. ಅಜ್ಜಿಯ ಪ್ರಕಾರ ಸಾವಿರಾರು ದೇವರುಗಳನ್ನು ಹುಟ್ಟು ಹಾಕಿ ಹೋಮ ಹವಿಸ್ಸನ್ನು ಮಾಡುವುದು ಅಜ್ಞಾನದ ಆಟ. ಅಜ್ಞಾನದ ಬೆನ್ನಿಗೆ ಅನ್ಯಾಯ ಹುಟ್ಟುತ್ತದೆ.
- ದುಷ್ಟರ ಶಿಕ್ಷೆಗೆ, ಶಿಷ್ಟರ ಪರಿಪಾಲನೆಗೆ ದೇವರುಗಳು ನೂರಾರು ಅವತಾರಗಳ ತಕ್ಕೊಂಡು ಭೂಮಿಗೆ ಬಂದರು ಎಂಬುದು ಅಜ್ಜಿಯ ಪಾಲಿಗೆ ಪುರಾಣಗಳ ಬದನೆಕಾಯಿ. ದೇವರಿಗೆ ಅವತಾರ ಕೊಟ್ಟವರು ನಾವು ನಮ್ಮ ಬುದ್ಧಿ. ಈ ಜಗತ್ತನ್ನು ಸೃಷ್ಟಿಸಲು ಅವನಿಗೊಂದು ಅವತಾರ ಬೇಕೇ? ಚಟ್ಟನೆ ಒಂದು ಸಿಡಿಲು ಬಡಿದರೆ ಸಾಯಬಹುದಾದ ದುಷ್ಟ ಹುಳುಗಳಿಗಾಗಿ ಅವತಾರ ಬೇಕೇ? ಎಂಬುದು ಅವರ ತರ್ಕ.




- ಋಷಿಗಳು ತಪಸ್ಸು ಮಾಡಲು ಗುಹೆ ಸೇರುವುದು ಸಂಸಾರದ ಭಯಕ್ಕೆ. ಸಂಸಾರದಿಂದ ದೂರ ಉಳಿಯಬೇಕೆಂಬ ಈ ತಪಸ್ಸು ಚೀರಟೆ ಹುಳುವಿನ ಕತೆಯ ಹಾಗೆ. ಸಂಸಾರ ಮಾಡಿಕೊಂಡಿರಲಿ ಎಂದು ಕಳಿಸಿರುವ ದೇವರನ್ನು ಮೆಚ್ಚಿಸಲು ಗುಹೆ ಸೇರುವುದು, ತಪಸ್ಸು ಮಾಡುವುದು, ತಾಯಿಯ ಹೊಟ್ಟೆಯನ್ನು ಸೇರಲು ಬಯಸುವ ಶಿಶುವಿನ ನಡೆಗೆ ಹೋಲಿಸುವರು.
- ದೇವರಲ್ಲಿ ಬೇಡುವುದು ಬುದ್ಧಿಬಂದ ಮನುಷ್ಯನ ಕಳಪೇತನವನ್ನು ತೋರಿಸುತ್ತದೆ. ದೇವರೇ ನಮ್ಮನ್ನು ಹುಟ್ಟಿಸಿದ್ದಾನೆ ಎಂದು ತಿಳಿಯುವುದಾದರೆ ಕೊಡುವಷ್ಟು ಕೊಟ್ಟೇ ಹುಟ್ಟಿಸಿದ್ದಾನೆ ಎಂದು ತಿಳಿಯಬೇಕು. ನಮ್ಮ ಹಾಗೆ ಹುಟ್ಟಿ ಬಂದಿರುವ ಕೋಟಿ ಕೋಟಿ ಪ್ರಾಣಿಗಳು ಯಾರನ್ನಾದರೂ ಏನಕ್ಕಾದರೂ ಬೇಡುವುದನ್ನು ಕಂಡಿದ್ದೇವೆಯೇ? ಹುಲ್ಲೆಯ ಮುಂದೆ ಹುಲಿ ಬಂದರೆ 'ಸಹಾಯ ಮಾಡು' ಎಂತಲೂ ಕೇಳುವುದಿಲ್ಲ.

ಜೀವನ ಒಂದು ನಾಟಕ ಇಲ್ಲವೇ ಕಾಣಸಿರಬಹುದು. ಇರುವಷ್ಟು ಕಾಲ ವೇಷ ಹಾಕಿ ಕುಣಿಯುವುದಷ್ಟೆ ನಮ್ಮ ಕೆಲಸ. ನಮಗೆ ಒಪ್ಪುವ ವೇಷ ಹಾಕಿ ಕುಣಿಯಬೇಕಷ್ಟೆ.

ದೇವರುಗಳ ಬಗ್ಗೆ, ಕುರುಕ್ಷೇತ್ರದಲ್ಲಿ ಕೃಷ್ಣ ಅರ್ಜುನನಿಗೆ ತದ್ವಿರುದ್ಧ ಉಪದೇಶಗಳನ್ನು ಮಾಡಿದರ ಬಗ್ಗೆ, ರಾಮನು ಸೀತೆಯನ್ನು ಅಗ್ನಿ ಪರೀಕ್ಷೆಗೆ ಒಳಪಡಿಸುದದರ ಬಗ್ಗೆ, ಕಪಾಲಿಗಳ ಬಗ್ಗೆ ಅಜ್ಜಿಯ ವಿಚಾರಗಳು ಪಾದರಸದಂತೆ ಹರಿದಾಡುತ್ತವೆ. ಅವರ ಮಾತಿನಲ್ಲಿ ಕೇಳಬೇಕಷ್ಟೆ .


ಅಜ್ಜಿಯ ಅನುಭವದಿಂದಲೊ ಅಥವ ಹಿಂದು ಮುಂದುಗಳನ್ನು ಇಣುಕಿ ನೋಡುವ ಶಕ್ತಿಯಿಂದಲೊ ಕಾಣೆ... ದಿನನಿತ್ಯದ ಕೆಲಸಗಳನ್ನು ಮಾಡುತ್ತಾ, ಅಜ್ಜಿಯನ್ನು ಅಶ್ವತ್ಥ ಮರದ ಕಟ್ಟೆಗೆ ಚರ್ಚಿಸಲು ಎಳೆದೊಯ್ಯುತ್ತ ಎಲ್ಲೂ ನಿರಾಶೆಗೊಳಸದೆ, ಕಾರಂತರು ವಿಮರ್ಶಾ ಮಾರ್ಗದೆಡೆ ಓದುಗರನ್ನು ಕರೆದೊಯ್ಯುತ್ತಾರೆ.

## ಕೃತಿ ಪರಿಚಯ


# ಇತ್ತೀಚೆಗೆ ಬಿಡುಗಡೆಯಾದ ವೈದ್ಯರ ಕೃತಿಗಳು




**ಡಾ. ಉಷಾ ಎಂ. ಜಿ.**
ವಿಭಾಗಿಯ ಸಂಪಾದಕರು





| | | |
|---|---|---|
| ಕೃತಿಯ ಹೆಸರು | : | "ನೀವೂ ಶತಾಯುಷಿಗಳಾಗಿ" |
| ಲೇಖಕರ ಹೆಸರು | : | ಡಾ. ಅಣ್ಣಪ್ಪಪಾಂಗಿ. ಎಂ. ಡಿ., ಹಿರಿಯ ವೈದ್ಯರು |
| ಕೃತಿಯ ಬಗ್ಗೆ | : | ಆರೋಗ್ಯಯುತ ದೀರ್ಘಾಯುವಿಗಾಗಿ ಜನಸಾಮಾನ್ಯರು ಮಾಡುವ, ಮಾಡಬಹುದಾದ ಮಧ್ಯಸ್ಥಿಕೆಗಳ ಬಗ್ಗೆ ಹಿರಿಯ ವೈದ್ಯರಿಂದ ರಚಿಸಲ್ಪಟ್ಟ ಕೃತಿ |
| ಪ್ರಕಾಶಕರ ಹೆಸರು | : | ವಿಕ್ರಂ ಪ್ರಕಾಶನ, ಬೆಂಗಳೂರು, |
| ಪುಟಗಳ ಸಂಖ್ಯೆ | : | ೩೨೦ |
| ಪುಸ್ತಕದ ದರ | : | ರೂ. ೩೨೦-೦೦ |




| | | |
|---|---|---|
| ಕೃತಿಯ ಹೆಸರು | : | ಸತ್ಕುಲ ಪ್ರಸೂತರು |
| ಲೇಖಕರ ಹೆಸರು | : | ಡಾ. ಗುರುಪ್ರಸಾದ್ ಕಾಗಿನೆಲೆ |
| ಪ್ರಕಾಶಕರ ಹೆಸರು | : | ಅಂಕಿತ ಪುಸ್ತಕ, ಬೆಂಗಳೂರು. |
| ಪುಟಗಳ ಸಂಖ್ಯೆ | : | ೨೫೬ |
| ಪುಸ್ತಕದ ದರ | : | ರೂ ೨೯೫ / - |




ಕೃತಿಯ ಹೆಸರು : ಗೀತಾಂಜಲಿ ಕವಿತೆಗಳು
ಲೇಖಕರ ಹೆಸರು : ಡಾ. ಎಚ್.ಎಸ್. ಅನುಪಮಾ
ಪ್ರಕಾಶಕರ ಹೆಸರು : ಲಡಾಯಿ ಪ್ರಕಾಶನ, ಗದಗ
ಪುಸ್ತಕದ ದರ : ರೂ.೧೩೦ / –




ಕೃತಿಯ ಹೆಸರು : ಹದಿಹರೆಯ ಸಮಸ್ಯೆಗಳು–ಸವಾಲುಗಳು
ಲೇಖಕರ ಹೆಸರು : ಡಾ. ಸೋಮಶೇಖರ್ ಎ. ಆರ್.
ಪ್ರಕಾಶಕರ ಹೆಸರು : ಸಪ್ನ
ಪುಸ್ತಕದ ದರ : ರೂ. ೨೨೫/ –

## ಅನಿವಾಸಿ ಲೋಕ (ಕಥೆ)

# ಅನುರಾಗ ಅರಳಿತು!!



**ಡಾ. ಮೀನಾ ಸುಬ್ಬರಾವ್**
ಮಕ್ಕಳ ತಜ್ಞರು
ಕ್ಯಾಲಿಫೋರ್ನಿಯ



ಡಾ. ಶಿವಶಂಕರ
ಎನ್. ಮೇಟಿ
ವಿಭಾಗೀಯ
ಸಂಪಾದಕರು

ಚಿತ್ಕಲ ದೇವರಿಗೆ ದೀಪ ಹಚ್ಚುತ್ತಾ "ಈ ಹುಡುಗಿಗೆ ಒಂದು ನೆಮ್ಮದಿಯಾದ ನೆಲೆ ತೋರಿಸಿಬಿಡಪ್ಪಾ, ಪರಮಾತ್ಮಾ" ಎಂದು ಬೇಡಿಕೊಳ್ಳುತ್ತಾ, ಮನಸ್ಸಿನಲ್ಲೇ ದೇವರ ಸ್ತುತಿಯಲ್ಲಿ ಕಣ್ಣು ಮುಚ್ಚಿ ದೇವರ ಮನೆಯಲ್ಲೇ ಕುಳಿತರು. ನಮ್ರತಾ ಆಕಳಿಸುತ್ತಾ, ಅರೆನಿದ್ದೆಯಿಂದ ಎದ್ದು, "ಅರೆ, ಗಂಟೆ ಒಂಬತ್ತಾಯಿತು, ಇನ್ನೂ ಏಕೆ ದೇವರಮನೆ ದೀಪ ಉರಿಯುತ್ತಿದೆ!?" ಎನ್ನುತ್ತಾ ದೇವರ ಮನೆಗೆ ಧಾವಿಸುತ್ತಾ, "ಅಮ್ಮಾ ನಿನಗೆ ಸ್ಕೂಲ್‌ಗೆ ಹೊತ್ತಾಯಿತು, ಇವತ್ತ್ಯಾಕೋ ನಿನ್ನ ಪೂಜೆನೇ ಮುಗಿಲಿಲ್ವಲ್ಲಾ?". ಚಿತ್ಕಲ ಕಣ್ಣು ಬಿಟ್ಟು "ಇಗೋ ಹೊರಟೆ, ಇವತ್ತ್ಯಾಕೋ ಟೈಮ್ ಆಗಿದ್ದೇ ತಿಳಿಯಲಿಲ್ಲ. ಇವತ್ತೇ ಸಂಜೆ ಪ್ರತಿಮಾ ಅವರು ನಿನ್ನ ನೋಡಲು ಬರ್ತಾರೆ, ಆ ನೀಲಿ ಸೀರೆ ಉಟ್ಕೊಂಡು ರೆಡಿಯಾಗಿರು, ನಿನಗದು ಚೆನ್ನಾಗಿ ಒಪ್ಪುತ್ತೆ." ಎಂದೊಡನೆ ಬಾಗಿಲಿಂದ ಹೊರಜಾರಿದರು. ಸ್ಕೂಲ್‌ಗೆ ನಡೆಯುತ್ತಾ ಚಿತ್ಕಲಾ, ಅವರ ನೆನಪಿನಾಳದಿಂದ ಹೊರಬಂದ ವಾಹಿನಿಯನ್ನು ಏಕಾಗ್ರತೆಯಿಂದ ಮನದಲ್ಲೇ ಹರಿಸಿದರು.

"ವರ್ಷಗಳು ಕಳೆದಿದ್ದೇ ತಿಳಿಯಲಿಲ್ಲ. ನಮ್ರತಾ ಮಗುವಾಗಿ, ಬಾಲೆಯಾಗಿ, ಹುಡುಗಿಯಾಗಿ ಈಗ ಮೈನೆರೆದು ಮದುವೆಗೆ ರೆಡಿಯಾಗಿದ್ದಾಳೆ. ಅವಳ ಹೆತ್ತ ತಾಯಿ ಸುಹಾನಿ ಅಂದು ನಮ್ರತೆಯಿಂದ ನನ್ನನ್ನು ಕೇಳಿಕೊಂಡ ಪರಿಯೇ ಹಾಗಿತ್ತು. ಅದಕ್ಕಲ್ಲವೇ ನಾನು ಅವಳಿಗೆ ನಮ್ರತಾ ಅಂತ ಹೆಸರಿಸಿದ್ದು? ಚಿತ್ಕಲಾ, ಈ ನನ್ನ ಮಗುವನ್ನು ಯಾರ ಒಡಲಿಗೂ ಹಾಕಲು ನನಗಿಷ್ಟವಿಲ್ಲ. ಇವಳಿಗೆ ಇರುವುದು ಒಂದೇ ಒಂದು ಜಾಗ, ಅದು ಸಿಕ್ಕಿದರೆ ಇವಳ ಅದೃಷ್ಟ, ಇಲ್ಲದಿದ್ದರೆ ಇವಳು ನತದೃಷ್ಟಳು. ಇವಳಿಗೆ ತಾಯಿಯಾಗಿ, ತಂದೆಯಾಗಿ, ಪೋಷಕಿಯಾಗಿ, ಬೆಳೆಸಿ ಒಂದು ದಡ ಸೇರಿಸುವುದು ನಿಮಗೆ ದೇವರು ಕೊಟ್ಟ ಅಭಿಲಾಷೆಗಳಲ್ಲಿ ಒಂದು ಎಂದು ನಂಬಿದ್ದೇನೆ. ಹೆಚ್ಚು ದಿನ ಮಗುವಿನ ಜೊತೆ ಇದ್ದರೆ, ಈ ಬಂಧನ ಮುರಿಯುವುದು ನನಗಷ್ಟೇ ಅಲ್ಲಾ, ನಿಮಗೂ ಬಂಧನ ಬೆಳೆಸುವುದು ಅಷ್ಟೇ ಕಷ್ಟವಾಗುತ್ತೆ. ನನಗಾದಾಗಲೆಲ್ಲ ಬಂದು ನೋಡುತ್ತೇನೆ, ನನ್ನನ್ನು ಮಾತ್ರ ಹುಡುಕಬೇಡಿ. ನಮ್ರತನಿಗೆ ಈ ವಿಷಯ ತಿಳಿಸಬೇಕೋ, ಬೇಡವೋ, ಯಾವಾಗ ತಿಳಿಸಬೇಕು ಎನ್ನುವ ವಿಷಯದಲ್ಲಿ ನಿಮಗೆ ಸಂಪೂರ್ಣ ಹಕ್ಕುಂಟು ಎಂದಿದ್ದು ಕಣ್ಣಿಗೆ ಕಟ್ಟಿದಂತಿದೆ.

ಇಂದಿಗೆ ಇದಾಗಿ ಮತ್ತು ನಮ್ರತಳಿಗೆ ೨೧ ವರ್ಷಗಳಾಗಿ ಹೋಗಿವೆ. ನಮ್ರತಳನ್ನು ಕಟ್ಟಿಕೊಂಡು, ತನ್ನ ಮಿಡ್ ವೈಫ್ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಬೇರೊಂದು ಊರಿಗೆ ಬಂದು ಶಿಕ್ಷಕಿ ತರಬೇತಿ ಪಡೆದು ಟೀಚರ್ ಆಗಿದ್ದೇ ಇದಕ್ಕಲ್ಲವೇ? ಒಂದುವೇಳೆ ಇನ್ನೂ ಮಿಡ್ ವೈಫ್ ಆಗಿ ಕೆಲಸ ಮಾಡುತ್ತಲೇ ಇದ್ದಿದ್ದರೆ, ಇಷ್ಟು ಹೊತ್ತಿಗೆ ಅದೆಷ್ಟು ಮಕ್ಕಳಿಗೆ ತಾಯಿಯಾಗಬೇಕಿತ್ತೋ? ಏನೋ ಎಲ್ಲಾ ಆ ದೇವರ ಕೃಪೆ. ನನ್ನ ಮದುವೆಯಾಗಿ ೫-ವರ್ಷಗಳಲ್ಲಿ ಮಗುವಾಗದೆ ಆ ದುರಂತದಲ್ಲಿ ಗಂಡನನ್ನು ಕಳೆದುಕೊಂಡು ಜೀವನೋಪಾಯಕ್ಕೆ ನರ್ಸಿಂಗ್ ಮಾಡಿ, ಮಿಡ್ ವೈಫ್ ಆಗಿ, ಮಗುವಿನ ಲಭ್ಯ ಈ ರೀತಿಯಲ್ಲಿ ಹಣೆಯಲ್ಲಿ ಬರೆದಿತ್ತಲ್ಲವೆ? ನಮ್ರತಾ ಅಪ್ರತಿಮ ಸುಂದರಿ, ಎಲ್ಲಾ ಅವಳಮ್ಮನ ಸೌಂದರ್ಯವೇ ಧಾರೆ ಎರೆದು ಕೊಟ್ಟಿದ್ದಾಳೆ. ಆದರೆ, ನನ್ನ ಬಡತನ ಯಾವಾಗ



ಎಲ್ಲಿ ತಲೆ ಹಾಕುವುದೋ ಅವಳ ಬಾಳಿನ ನಿರ್ಧಾರದಲ್ಲಿ? ಈ ಊರಲ್ಲಿ ಪ್ರತಿಮಾಳಂತಹ ಒಳ್ಳೇ ಸಹೋದ್ಯೋಗಿಯ ಪರಿಚಯವಾಗಿದ್ದು ನನ್ನ ಸುಯೋಗ. ನೋಡೋಣ, ನಮ್ರತನ ಹಣೆಯಲ್ಲಿ ಏನು ಬರೆದಿದೆ ಅಂತ. ಪ್ರತಿಮಾ ಅಂತೂ ಇವತ್ತು ಬಂದು ನಮ್ರತಾನ ನೋಡುತ್ತಾರೆ." ಹೀಗೆ ನಿರಂತರವಾಗಿ ಲಹರಿ ಮುಂದುವರೆಯುತ್ತಿದ್ದಂತೆ...

ಮಿಸ್ ಸುಮತಿ ಎದುರಿಗೆ ಬಂದು, "ಏನು, ಚಿತ್ಕಲಾ ಮೇಡಮ್ ತುಂಬಾ ಗಾಢ ಯೋಚನೆಯಲ್ಲಿದ್ದ ಹಾಗಿದೆ?"

ಚಿತ್ಕಲಾ: "ಏನಿಲ್ಲ, ನಿನ್ನೆ ಸ್ವಲ್ಪ ಕೆಲಸ ಜಾಸ್ತಿ ಇದ್ದಿದ್ದರಿಂದ ಸುಸ್ತು ಹೋಗಿಲ್ಲ ಇವತ್ತು ಸ್ವಲ್ಪ ಜಾಸ್ತಿ ಮಲಗಿ ಸುಧಾರಿಸಿಕೊಡರೆ ಸರಿಹೋಗುತ್ತೆ".

ಸುಮತಿ: "ಹೆಡ್ ಮಿಸ್ಟ್ರೆಸ್ ನೀಲ, ಸುನೀಲ್ ಜೊತೆ ಫೋರ್ತ್ ಗ್ರೇಡ್ ಫೀಲ್ಡ್ ಟ್ರಿಪ್ ಗೆ ಹೊರಟಿದ್ದಾರೆ. ನೀವು, ನಾನು ಥರ್ಡ್ ಗ್ರೇಡ್ ಕ್ಲಾಸ್ ತಗೋಬೇಕಂತೆ ಇವತ್ತು. ನೀವು ಸಹಿ ಮಾಡಿ ಬನ್ನಿ, ನಾನು ಕ್ಲಾಸ್ ನಲ್ಲಿ ಕಾಯ್ತೀನಿ."

ಚಿತ್ಕಲಾ: "ಆಯ್ತು ಸುಮತಿ, ಬೇಗ ಸಹಿ ಮಾಡಿ ಬರ್ತೇನೆ" ಎನ್ನುತ್ತಾ ಸ್ಕೂಲ್ ಆಫೀಸ್ ಕಡೆಗೆ ಸಾಗಿದರು.

ನಮ್ರತಾ ತಾಯಿನ ಸ್ಕೂಲ್‌ಗೆ ಕಳಿಸಿ, ಕನ್ನಡಿ ಮುಂದೆ ನಿಂತು ಯಾಕೋ ನನ್ನ ಮುಖ ತುಂಬಾ ಸುಸ್ತಾಗಿರೋ ಹಾಗಿದೆ. ಸಂಜೆ ಪ್ರತಿಮಾ ಬರೋ ಹೊತ್ತಿಗೆ ಸ್ವಲ್ಪ ಸುಧಾರಿಸಿಕೊಂಡು ಚೆನ್ನಾಗಿ ಸಿಂಗರಿಸಿಕೋಬೇಕು" ಎಂದು ಕೊಳ್ಳುತ್ತಾ ಹಾಸಿಗೆ ಮೇಲೆ ಉರುಳಿದಳು. "ಸಣ್ಣ ನಿದ್ದೆ ತೆಗೆಯೋಣ ಎಂದರೆ ಯಾಕೋ ನಿದ್ದೆನೇ ಬರುತ್ತಿಲ್ಲ. ಈ ಹಾಳು ಮನಸ್ಸು ಅದೇ ವಿಷಯಾನೇ ಕೊರೆದೂ ಕೊರೆದೂ ಮೆಲುಕು ಹಾಕುತ್ತಿದೆ. ಅಮ್ಮಾ ಯಾಕೆ ಇಷ್ಟು ದಿನ ಕಾದಿರಿಸಿಕೊಂಡು ಮೊನ್ನೆ ಮೊನ್ನೆ "ನಾನು ಅಮ್ಮನಿಗೆ ಸಾಕು ಮಗಳು" ಅನ್ನೋ ವಿಷಯಾನ ಈಗ ಹೇಳಿದಳು? ಅಮ್ಮಾ ಇಷ್ಟು ದಿನ ನಿಜ ಮುಚ್ಚಿಟ್ಟಿದ್ದರೂ, ನನಗೆ ತೋರಿದ ಪ್ರೀತಿ, ಅಕ್ಕರೆಯಲ್ಲಿ ಯಾವ ಕೊರತೆಯೂ ಇರಲಿಲ್ಲ, ಆದರೂ ಯಾಕೋ ಈ ಕೆಟ್ಟ ಮನಸ್ಸು ಒಪ್ಪುತ್ತಿಲ್ಲ. ನನ್ನ ಹುಟ್ಟಿನ ನಿಜಗುಣ, ಕುಲ, ಗೋತ್ರ ಅದಾಗಿರುವುದು ನನ್ನ ಹಣೆಯ ಬರಹ. ಅದನ್ನು ಯಾವ ಕುಂದೂ ಕೊರತೆಯಿಲ್ಲದೆ ಕ್ರಮವಾಗಿಸಲು ಅನುವಾಗಿರುವ ಅಮ್ಮನ ಮೇಲ್ಯಾಕೆ ಈ ಕೋಪ, ಸಿಟ್ಟೂ, ಸಿಡುಕು? ಮೊದಲೇ ತಿಳಿದಿದ್ದಾದರೆ, ನಾನು ಮಾಡುವುದಾದರೂ ಏನಿತ್ತು? ಇನ್ನೂ ಡಿಗ್ರೀ ಓದೋವಾಗ್ಲೇ ಗೊತ್ತಾಗಿದ್ದರೆ, ಪಾಸಾಗುವುದೂ ಕಷ್ಟವಾಗುತ್ತಿತ್ತು. ಏನೋ, "ಆಗಿದ್ದೆಲ್ಲಾ ಒಳಿತೇ ಆಯಿತು ನಮ್ಮ ಶ್ರೀಧರನ ಸೇವೆಗೆ" ಎಂಬ ದಾಸನುಡಿಯಂತೆ ಆಗಿದ್ದೆಲ್ಲ ಒಳ್ಳೇದಕ್ಕೆ ಅಂತ ಅಂದ್ಕೋಬೇಕೇನೋ?. ಆದರೆ, ನಾನೆಷ್ಟೋ ಸುಂದರ ಕನಸುಗಳನ್ನು ಕಟ್ಟಿದ್ದೇನೆ. ವಿದ್ಯೆ, ರೂಪ, ಸಂಗೀತ ಇರುವ ನನಗೆ ಮದುವೆಯ ವಿಷಯದಲ್ಲಿ ಅನಾಹುತವಾಗಲು ಹೇಗೆ ಸಾಧ್ಯ ಎಂದಂದಿತ್ತಲ್ಲವೇ ನನ್ನ ಮನ?. ಆದರೆ, ಈಗ ಚಿತ್ಕಲಳಿಗೆ ನಾನೊಬ್ಬಳು ಸಾಕು ಮಗಳು ಎಂದು ಸಮಾಜಕ್ಕೆ ಗೊತ್ತಾದರೆ, ಜನ ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಜಾತಿ, ಕುಲ, ಗೋತ್ರ, ಪರಂಪರೆ ಎಲ್ಲವುದನ್ನು ಮತ್ತೊಮ್ಮೆ ಹುಟ್ಟಿಸಲು ಸಾಧ್ಯವೇ? ಅಥವಾ ಹುಟ್ಟಿಸಿದರೆ, ಅದು ಅನರ್ಥವಾಗುವುದಿಲ್ಲವೇ? ನನಗೆ ಜನ್ಮಕೊಟ್ಟ ತಾಯಿ ಯಾಕೆ ಇಷ್ಟು ಕಟು ಹೃದಯಿಯಾದಳು? ನನ್ನ ಬಿಟ್ಟು, ಈ ಕಷ್ಟಕ್ಕೆ ಸಿಲುಕಿಸಿ ಯಾವ ಸರ್ವತ್ವವನ್ನು ಸಾಧಿಸ ಹೋದಳಾದರೂ ನನಗೆ ಅದು ಕ್ಷಮಿಸಲಾರದ ತಪ್ಪು. ಈ ಕ್ಷಣದಲ್ಲಿ ನನ್ನ ಮುಂದೆ ಬಂದರೂ, ನನ್ನ ಹೃದಯ ವೀಣೆಯಲ್ಲಿ ಅನುರಾಗವಿರಲಿ, ಯಾವ ರಾಗವೂ ಪಾಡುವುದಿಲ್ಲ, ಜಡ ವೀಣೆಯಂತೆ. ನನ್ನ ಸಾಕು ತಾಯಿಯ ಪ್ರೀತಿ ಅಪರಿಮಿತವಾಗಿದ್ದರೂ ಈ ಹೃದಯ ಏಕೆ

ಒಂದೇ ಸಮನೆ ಒಡಂಬಡಿಸುತ್ತಿರುವುದು ೨೧ ವರ್ಷಗಳ ಹಿಂದೆ ಕಳೆದು ಹೋದ ಪ್ರೀತಿಗೋ, ಪ್ರೇಮಕ್ಕೋ, ಒಲವಿಗೋ, ಮಮತೆಗೋ, ಅನುರಾಗಕ್ಕೋ, ಅನುಕಂಪಕ್ಕೋ? ಒಂದೂ ಅರಿಯೇ ನಾ? ಅಮ್ಮ ಪ್ರತಿಮಾಗೆ ನನ್ನ ನಿಜಹುಟ್ಟಿನ ಸತ್ಯ ಹೇಳಿಲ್ಲದೇ ಇರಬಹುದು, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಅಂದಹಾಗೆ. ಪ್ರತಿಮಾ ಅವರ ತಮ್ಮನಿಗೆ ಹುಡುಗಿ ಹುಡುಕುತ್ತಿದ್ದಾರೆ, ಬೆಂಗಳೂರಲ್ಲಿ ದೊಡ್ಡ ಕೆಲಸ ಇದೆಯಂತೆ, ನೋಡಲೂ ಸುಂದರವಾಗಿದ್ದಾನಂತೆ, ಜೊತೆಗೆ ಹಿರಿಯ ಮಗನಂತೆ. ಅಮ್ಮ ಹೀಗೆ ಹೇಳಿದಮೇಲೆ ನನ್ನ ಆಸೆಯ ಕನಸುಗಳು ಆಗಸದಿಂದ ಇಳಿಯಲೇ ಇಲ್ಲ. ಇವತ್ತು ಪ್ರತಿಮಾ ಬಂದಾಗ ಏನಾದರೂ ಸಂಚು ನಡೆಸಿ ಅವರಿಗೆ ಈ ವಿಷಯ ಹೇಳಲೇ ಬೇಕು" ಎಂದು ನಿರ್ಧರಿಸಿದಳು. ಏಳಲು ಮನಬಾರದೇ ಸಂಗೀತ ಹಾಕಿ ಕಣ್ಣು ಮುಚ್ಚಿದಳು. " ಒಲವಂತೆ, ಗೆಲುವಂತೆ, ಬಾಳಿನ ಬೆಳಕಂತೆ! ಅನಾಥೆಯಾ ಸದಾಶಯಾ......ಧ್ವನಿ ಸುರುಳಿ ಸುತ್ತುತ್ತಿತ್ತು.

* * * * * *

ಪ್ರತಿಮಾ ಒಬ್ಬರೆ ಹೂವು ಹಣ್ಣುಗಳ ಜೊತೆ ಚಿತ್ಕಲಾ ಮನೆಗೆ ಬಂದಕೂಡಲೇ ಮಾತಿಗೆ ಶುರು ಮಾಡಿದರು. ನಮ್ಮ ಸುಮತಿ, ನೀಲ ಮೇಡಮ್ ಎಲ್ಲಾ ಹೇಳಿದ್ದು ಅಕ್ಷರಶಃ ನಿಜ. ನಮ್ರತಾ ತುಂಬಾ ಚೆನ್ನಾಗಿದಾಳೆ, ನನ್ನ ತಮ್ಮನಿಗೆ ವರಸಾಮ್ಯ ಚೆನ್ನಾಗಿ ಆಗುತ್ತೆ. ನೀವು ತುಂಬಾ ಲಕ್ಕಿ ಚಿತ್ಕಲಾ. ಹೆಸರಿಗೆ ತಕ್ಕಂತೆ ನಯ, ವಿನಯ ಎಲ್ಲಾ ಎದ್ದು ಕಾಣಿಸುತ್ತಿದೆ."

ಚಿತ್ಕಲಾ: "ಏನೋ ಎಲ್ಲಾ ಆ ದೇವರ ಬರವಣಿಗೆ, ನಮ್ಮ, ನಿಮ್ಮ ಕೈಯಲ್ಲೇನಿದೆ ಹೇಳಿ?"

ಪ್ರತಿಮಾ: " ನಮ್ರತನಿಗೆ ನಾನು ಬರುವ ವಿಷಯ ತಿಳಿಸಿದ್ರಾ?"

ಚಿತ್ಕಲಾ: " ಹೌದು, ನೀವು ನಿಮ್ಮ ತಮ್ಮನಿಗೆ ಹುಡುಗಿ ಹುಡುಕೋ ಸಲುವಾಗಿ ನಿನ್ನನ್ನು ನೋಡೋಕ್ಕೆ ಬರ್ತಾರೆ ಅಂತ ಹೇಳಿದ್ದೆ. ಬರೀ ಮಾತಾಡ್ತಾ ಕೂತ್ ಬಿಟ್ವಲ್ಲಾ, ಸ್ವಲ್ಪ ಕಾಫಿ, ತಿಂಡಿ ತರುತ್ತೀನಿ" ಎಂದು ಅಡಿಗೆ ಮನೆಗೆ ನಡೆದರು.

ಪ್ರತಿಮಾ: ಚಿತ್ಕಲಾ ನಿನ್ನ ಬಗ್ಗೆ ಎಲ್ಲ ಹೇಳಿದ್ದಾರೆ, ಲಾಸ್ಟ್ ಇಯರ್ ಗ್ರಾಜುಯೇಟ್ ಆದ್ಯಂತೆ, ಈಗ ಸಂಗೀತ, ಆರ್ಟ್, ಎಲ್ಲಾ ಕಲಿತಿದಿಯಂತೆ. ಹಾಗೆ ಕೆಲಸಾನೂ ಹುಡುಕುತ್ತಿದಿಯಂತೆ.

ನಮ್ರತಾ: ಆಂಟೀ, "ಅಮ್ಮಂಗೆ ನಾನು ಕೆಲಸಕ್ಕೆ ಸೇರುವುದು ಇಷ್ಟ ಇಲ್ಲ. ಇಬ್ಬರೂ ಹೊರಗೆ ಕೆಲಸ ಮಾಡೋಕ್ಕಿಂತ ಒಬ್ಬರು ಮನೇಲಿದ್ದರೆ ಚೆನ್ನಾಗಿರುತ್ತೆ" ಅಂತಾರೆ.

ಪ್ರತಿಮಾ: "ಅಂದಹಾಗೆ ನಾನು ಬಂದಿದ್ದು ನನ್ನ ತಮ್ಮನಿಗೆ ಹುಡುಗಿ ಹುಡುಕ್ಕೊಂಡು. ನಿನಗೆ ಬೆಂಗಳೂರಲ್ಲಿ, ದೊಡ್ಡ ಮನೇಲಿ, ದೊಡ್ಡ ಸೊಸೆಯಾಗಿ ಇರಕ್ಕೆ ಇಷ್ಟ ಇದೆಯೇನಮ್ಮಾ? ನಿನ್ನ ಅಭಿಪ್ರಾಯವೇನು?"

ನಮ್ರತಾ: ಆಂಟೀ..., (ಅಷ್ಟರಲ್ಲಿ, ಚಿತ್ಕಲಾ ತಿಂಡಿ, ಕಾಫಿ ತಂದರು).

ಪ್ರತಿಮಾ ಹೊರಟಾಗ ರಾತ್ರಿ ಒಂಬತ್ತಾಗಿತ್ತು. ಚಿತ್ಕಲಾ, ನಮ್ರತಾ ಜಾಸ್ತಿ ಮಾತನಾಡದೆ ಮಲಗಲು ಸಿದ್ದರಾದರು. ಚಿತ್ಕಲನಿಗೆ ಕೆಲಸ ಜಾಸ್ತಿಯಾದ್ದರಿಂದ ನಿದ್ರಾದೇವಿ ಬೇಗ ಒಲಿದಳು. ನಮ್ರತಾ ಪ್ರತಿಮಾ ಕೊಟ್ಟ ಅವರ ತಮ್ಮ ಪರಾಗ್ ನ ಭಾವಚಿತ್ರವನ್ನು ನೋಡುತ್ತಾ ಮಲಗಿದಳು. ಆದರೆ, ನಿದ್ದೆ ಹತ್ತಲಿಲ್ಲ, ಈಗ ಮನಸ್ಸು ಬೇರೊಂದು ಲಹರಿಯನ್ನು ಶುರು ಮಾಡಿತ್ತು. ಇದು ಭಾವ ಚಿತ್ರವಾ? ಯಾರೋ ಬಿಡಿಸಿದ ಚಿತ್ರದಂತಿದೆಯಲ್ಲ? ಎಲ್ಲ ಮುಖಲಕ್ಷಣಗಳೂ ಹೇಳಿ ಮಾಡಿಸಿದ ಹಾಗಿದೆ, ಕಪ್ಪಿನ ದಟ್ಟವಾದ ಕೂದಲು, ನೀಳ ನಾಸಿಕ, ಗೋದಿ ಮೈಬಣ್ಣ, ನೋಡಲು ಸುಂದರಾಂಗ. ದೊಡ್ಡ



ಕೆಲಸ, ಶ್ರೀಮಂತ ಮನೆ, ವಿದ್ಯಾವಂತ, ಎಲ್ಲವೂ ಸರಿಯಾಗೇ ಇದೆ. ಆದರೆ, ನನ್ನನ್ನ್ಯಾಕೆ ಹುಡುಕ್ಕೊಂಡು ಬಂದಿದ್ದಾರೆ? ಅಮ್ಮ ನನ್ನ ಹುಟ್ಟು ವಿಷಯ ಹೇಳದಿದ್ದರೂ ನನ್ನನ್ನು ಅರಸಿಕೊಂಡು ಬರುವ ಅವಶ್ಯಕತೆ ಇವರಿಗಿರಲಿಲ್ಲ. ನಮ್ಮ ಬಡತನ ಇವರ ಅಂತಸ್ತಿಗೆ ಸರಿಸಾಟಿಯಲ್ಲ. ಏನೋ (ನನ್ನ ತರಹ) ನಮಗೆ ಗೊತ್ತಿರದ ವಿಷಯ ಹಿನ್ನೆಲೆಯಲ್ಲಿರಬೇಕು."

* * * * * *

ಪ್ರತಿಮಾ: "ಏನೋ, ಹುಡುಗಿಯನ್ನ ನೋಡಿದ್ಯಲ್ಲ, ಹೇಗಿದ್ದಾಳೆ? ನಿನಗೆ ಒಪ್ಪಿಗೆ ಆಗಿದ್ಯೇನೋ?, ಅದಿರಲಿ, ಎಲ್ಲ ವಿಷಯ ಅವಳ ಹತ್ತಿರ ಖುದ್ದಾಗಿ ಮಾತಾಡ್ತೀನಿ ಅಂದಿದ್ಯಲ್ಲ, ಮಾತಾಡ್ದ್ಯಾ?"

ಪರಾಗ್: "ಅಕ್ಕಾ, ಎಲ್ಲಾ ಪ್ರಶ್ನೆಗಳನ್ನು ಒಟ್ಟಿಗೆ ಹಾಕಿ ಸುರಿಮಳೆ ಮಾಡ್ತಿದೀಯಲ್ಲಾ? ನಾನು ಮಾತ್ರ ಒಂದೊಂದಾಗಿ ಉತ್ತರ ಕೊಡುತ್ತೀನಿ. ಹುಡುಗಿ ಲಕ್ಷಣವಾಗಿದ್ದಾಳೆ, ಎಲ್ಲದರಲ್ಲೂ ಸರಿಯಾಗಿದೆ. ನನಗೆ ಅವಳನ್ನು ನೋಡಿದಾಗ ಮಾತೇ ಹೊರಡಲಿಲ್ಲ. ನನ್ನ ಊನತೆ ಬಗ್ಗೆ ಹೇಳಲು ಸಂದರ್ಭ ಸರಿಯಾಗಿ ಸಿಗಲಿಲ್ಲ. ನನಗೆ ಹೀಗೆ ಮಾಡುವುದು ಸರಿಯಾಗುತ್ತೆ ಅಂತ ಅನ್ನಿಸುತ್ತಿದೆ, ನೀನು ಹುಡುಗಿಯ ಒಪ್ಪಿಗೆ ಖಚಿತ ಮಾಡಿಕೋ, ನಂತರ ನಾನು ಅವಳಲ್ಲಿ ಮಾತಾಡುತ್ತೇನೆ. ಒಪ್ಪಿಗೆ ಇಲ್ಲದಿದ್ದರೆ, ನಾನು ಮಾತಾಡುವ ಅವಶ್ಯಕತೆಯೇ ಬರುವುದಿಲ್ಲ".

ಪ್ರತಿಮಾ: ನನಗೂ ಅದೇ ಸೂಕ್ತ ಅಂತ ಅನ್ನಿಸ್ತಾ ಇದೆ.

ಪರಾಗ್: "ನಮ್ರತಾ, ನಿಮ್ಮ ತಾಯಿ ಮತ್ತು ನಮ್ಮಕ್ಕ ಪ್ರತಿಮಾ ನಿಮ್ಮ ಬಗ್ಗೆ ಎಲ್ಲಾ ವಿಷಯಗಳನ್ನು ನನಗೆ ತಿಳಿಸಿದ್ದಾರೆ. ಈಗ ನಾನು ನಿಮಗೊಂದು ವಿಷಯ ಹೇಳಬೇಕು."

ನಮ್ರತಾ: "ಹೇಳಿ, ಧೈರ್ಯವಾಗಿ ಹೇಳಿ. ನಾನು ಇದಕ್ಕೆಲ್ಲಾ ಸಿದ್ಧಳಾಗೇ ಬಂದಿದ್ದೀನಿ."

ಪರಾಗ್: "ನಾನು ಹೇಳುವ ವಿಷಯದ ಬಗ್ಗೆ ನಿಮಗೆ ಮೊದಲೇ ಹೇಗೆ ಗೊತ್ತಿತ್ತು? ಸಿದ್ಧಳಾಗಿ ಬರುವುದಕ್ಕೆ?"

ನಮ್ರತಾ: "ನನ್ನ ಎಲ್ಲಾ ವಿಷಯ ಕೇಳಿದ ಮೇಲೆ, ನೀವು ಹೇಳುವುದೇನೆಂದು ಊಹಿಸಲು ಕಷ್ಟವೆನಿಸಲಿಲ್ಲ."

ಪರಾಗ್: "ಈ ವಿಷಯ ನನಗಿರುವ ಒಂದು ಊನತೆ ಕುರಿತು."

ನಮ್ರತಾ: "ನಿಮಗೂ ಒಂದು ಊನತೆ ಇದೆಯಾ!? ನನಗೆ ಎಷ್ಟು ನೋಡಿದರೂ ಏನೂ ಗೋಚರಿಸುತ್ತಿಲ್ಲವಲ್ಲ?"

ಪರಾಗ್: "ಅದು ಹಾಗೇ!, ಹಾಗೇ ಸುಮ್ಮನೆ ನೋಡಲು ಕಾಣಿಸುವುದಿಲ್ಲ."

ನಮ್ರತಾ: "ಹಾಗಾದರೆ, ದೇವರು ಎಲ್ಲರಿಗೂ ಏನಾದರೊಂದು ತೊಂದರೆ ಕೊಟ್ಟಿರುತ್ತಾನಾ (ಇಟ್ಟೇ ಇರುತ್ತಾನಾ)?"

ಪರಾಗ್: "ಅದು ತೊಂದರೆ ಅಂತ ನೀವು ಪರಿಗಣಿಸದಿದ್ದರೆ, ನಾವಿಬ್ಬರು ಹೊಸ ಬಾಳಿನ ಸಂಗಾತಿಗಳಾಗಬಹುದು."

ನಮ್ರತಾ: "ಅರ್ಥಾತ್, ನನ್ನ ಯಾವ ವಿಷಯದಲ್ಲೂ ನಿಮಗೆ ಅಸಮಧಾನವಿಲ್ಲವೆಂದಾಯಿತು?"

ಪರಾಗ್: "ನನ್ನದೇ ನನಗಿರುವಾಗ, ಅನ್ಯರಲ್ಲಿ ತೊಂದರೆ ಹುಡುಕುವುದು ಶುದ್ಧ ತಪ್ಪು. ಹಾಗೂ ಅದನ್ನು ಮಾಡಲು ನಾನು ಅನರ್ಹನು ಎಂದು ನಂಬಿದ್ದೇನೆ."

ನಮ್ರತಾ: (ಭಾವೋದ್ವೇಗದಿಂದ) "ಪರಾಗ್, ನಿಮ್ಮಲ್ಲಿ ಏನೇ ಊನತೆ ಇದ್ದರೂ, ದಯವಿಟ್ಟು ಅದನ್ನು ನನಗೆ ಹೇಳಬೇಡಿ. ಅದರ ಅವಶ್ಯಕತೆ ಈಗ ನನಗಿಲ್ಲ, ಅದೇನೇ ಇದ್ದರೂ ನನ್ನ, ನಿಮ್ಮ ಪ್ರೇಮಪರಾಗದಲ್ಲಿ ಮಧ್ಯ ಬರಲು ಸಾಧ್ಯವೇ ಇಲ್ಲ. ನಾನು ಇಷ್ಟು ದಿನ ಕಂಡ ಕನಸುಗಳು ನನಸಾಗುವ ದಿನವಿದು, ನನ್ನ ಹೃದಯದಿ ಅನುರಾಗ ಅರಳಲು ಇರುವ ಒಂದೇ ಒಂದು ಅವಕಾಶವಿದು. ಎಲ್ಲೋ ಯಾರಿಗೋ ಹುಟ್ಟಿ, ಯಾರದೋ ಮಡಿಲಿಗೆ ಬಿದ್ದು, ಬೆಳೆದು ಹಸಿರಾಗಿ, ನಲಿದು ನವಿರಾಗಿ, ಹೂಬಿಡುವ ಮುನ್ನ ಚಿಗುರನ್ನು ಚಿವುಟಿದ ಹಾಗೆ ಆಗಿದ್ದ ನನ್ನ ಹೃದಯಕ್ಕೆ ನೀವು ನೀಡುತ್ತಿರುವ "ಈ ಪ್ರೇಮ ಪರಾಗ" ಒಂದು ಬಾಳಿನ ಉಸಿರಿನಂತೆ. ನಿಮ್ಮ ಊನತೆ ಏನೇ ಇದ್ದರೂ ನನ್ನ "ಅರಳಿದ ಅನುರಾಗ" ದಿಂದ ನಾನೇ ಹುಡುಕಿ ಆಲಂಗಿಸುತ್ತೇನೆ. ಈ ಅನುರಾಗ ಅರಳಲು ನಿಮ್ಮ ಹೃದಯದಲ್ಲಿ ನನಗೆ ಜಾಗ ಕೊಡಿ" ಎಂದು ನಮ್ರತಾ ಅಗಲಿದ ಬಾಹುಗಳಿಂದ ಅಂಗಲಾಚಿದಳು. ಪರಾಗ್, ನಮ್ರತಳ ಕಣ್ಣೀರೊರೆಸುತ್ತಾ ಅವಳೆದೆಯಲ್ಲಿ ಕರಗಿಹೋದ! ಅವಳ ಹೃದಯ ವೀಣೆ,... ನುಡಿಯಿತೊಂದು ಹೊಸ ರಾಗ!? ಅದುವೇ... ಅನುರಾ...ಗ

## ಅನಿವಾಸಿ ಲೋಕ (ಕಥೆ)

# ಕವಲು ದಾರಿ



**ಡಾ. ಶಿವಶಂಕರ ಎನ್. ಮೇಟಿ**
ಲೇಖಕರು ಹಾಗೂ
ವಿಭಾಗೀಯ ಸಂಪಾದಕರು

ಹಗಲು ಇರುಳನ್ನು ಅಪ್ಪುತ್ತಿದ್ದ ಸಮಯದಲ್ಲಿ ಉದ್ಭವಿತವಾಗಿದ್ದ ಸಂಜೆಯು, ಪಡುವಣಕ್ಕೆ ರಂಗನ್ನು ಎರಚಿತ್ತು. ಸೂರ್ಯನ ಹೊಂಗಿರಣಗಳು ತೇಲುತ್ತಿರುವ ಸಮುದ್ರದ ಅಲೆಗಳಲ್ಲಿ ಪ್ರತಿಫಲಿತವಾಗಿ ಮರಳಿನ ದಡವನ್ನು ಸೇರಿ ಮಾಯವಾಗುತ್ತಲಿದ್ದವು. ಗೋಕರ್ಣದ ಸಮೀಪದ ಕುಡ್ಲೆ ಬೀಚಿನಲ್ಲಿ ಅರಳಿದ್ದ ಆ ಮನಮೋಹಕ ದೃಶ್ಯವನ್ನು, ಕೆಲವರು ತಮ್ಮ ಕಣ್ಣುಗಳಲೆಲ್ಲಾ ತುಂಬಿಕೊಂಡು ಸವಿಯುತ್ತಿದ್ದರೆ, ಇನ್ನು ಕೆಲವರು ತಮ್ಮ ಕ್ಯಾಮರಾದ
ಒಳಗಣ್ಣುಗಳಲ್ಲಿ ಶಾಶ್ವತವಾಗಿ ಸೆರೆ ಹಿಡಿಯಲು ಪ್ರಯತ್ನಿಸುತ್ತಿದ್ದರು. ಜನಜಂಗುಳಿಯನ್ನು ತೊರೆದು, ಪ್ರಶಾಂತತೆಯಲ್ಲಿ ಕುಳಿತು, ಅಪ್ಪಳಿಸುತ್ತಿದ್ದ ಅಲೆಗಳನ್ನು ವೀಕ್ಷಿಸುತ್ತಿದ್ದ ಅವನಿಗೆ, ಅನತಿ ದೂರದಲ್ಲಿ ಜಗವನ್ನೇ ಮರೆತಂತಿದ್ದ

ಪ್ರೇಮಿಗಳು ಅದೇನೋ ಪಿಸುಗುಡಿಸುತ್ತಿದ್ದದ್ದು ಕೇಳಿಸದೇ ಇರಲಿಲ್ಲ. ಅವರ ಮನದಾಳದಿಂದ ಉಕ್ಕುತ್ತಲಿದ್ದ "ಐ ಲವ್ ಯು" ಎಂಬ ಸ್ವರ, ಕಿಲ ಕಿಲವೆಂಬ ನಗೆಯೊಂದಿಗೆ ಮುಸುಕಿದ ಸಂಜೆಯಲ್ಲಿ ಅಲೆ ಅಲೆಯಾಗಿ ತೇಲಿ ಬರುತ್ತಲಿತ್ತು. ಅವನು ತನ್ನಷ್ಟಕ್ಕೆ ತಾನೇ ಅಂದುಕೊಂಡನು, ?ಇದೇ ಸ್ಥಳದಲ್ಲಿ ಕುಳಿತು ಅವಳೆಷ್ಟು ಸಲ ಅಂದಿರಲಿಲ್ಲ ಈ ಮಾತನ್ನು? ...ಐ ಲವ್ ಯು ... ಕ್ಷಣಿಕ ಪ್ರೇಮದಲ್ಲಿ ಉಸುರುವ ಈ ಮಾತು ಅದೆಷ್ಟು ನಿಜ... ಜೀವನದ ಪಯಣದ ಕೊನೆಯ ಹೆಜ್ಜೆಯವರೆಗೂ ಅದನ್ನು ಉಳಿಸಿಕೊಂಡು ನಡೆದವರು ಅದೆಷ್ಟು ಜನ! ... ಸತ್ಯದ ಒರೆಗೆ ಹಚ್ಚಿದಾಗ ಅದಕ್ಕೆಷ್ಟು ಬೆಲೆ? ... ಅಂದು ಅವಳಾಡಿದ ಇಂತಹುದೇ ಮಾತುಗಳಿಗೆ ಜೀವನದಲ್ಲಿ ಕವಡೆಯಷ್ಟೂ ಬೆಲೆ ಕಾಣದಿದ್ದದ್ದು ಮಾತ್ರ ಕಟು ಸತ್ಯವಲ್ಲವೇ? ? ಯಾಕೋ ಅಲ್ಲಿ ಕೂಡ್ರಲು ಮನಸಾಗದೆ ದೂರದಲ್ಲಿದ್ದ ತನ್ನ ಕಾರಿನತ್ತ ಕಾಲುಕಿತ್ತನು.

ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿದ್ದ ಅವನ ತೋಟದ ಮನೆಯನ್ನು ಸೇರಲು, ಆವರಿಸುತ್ತಿದ್ದ ಸಂಜೆಯ ಗರ್ಭದಲ್ಲಿ ಹೊಕ್ಕ ಕಾರು ವೇಗವಾಗಿ ಓಡುತ್ತಲಿತ್ತು. ವಿಶಾಲವಾಗಿದ್ದ ಏಕೈಕ ರಸ್ತೆ ಸ್ವಲ್ಪೇ ದೂರದಲ್ಲಿ ಕವಲೊಡೆದು ಎಡ ಬಲವೆಂಬ ಎರಡು ಇಕ್ಕಟ್ಟಾದ ರಸ್ತೆಗಳಾಗಿ ಮಾರ್ಪಟ್ಟಿತ್ತು. ಎಡಗಡೆಗೆ ತಿರುಗಿದರೆ ತೋಟದ ಮನೆಯ ಹಾದಿ, ಬಲಗಡೆಯ ರಸ್ತೆ ಹಿಡಿದರೆ ಸಿರ್ಸಿ ಎಂಬ ಅರಿವು ಅವನಿಗೆ ಚನ್ನಾಗಿಯೇ ಇತ್ತು. ಅವನ ಕೈಗಳು ಸ್ಟೀಯರಿಂಗ್ ತಿರುಗಿಸುತ್ತಲಿದ್ದರೆ. ಮನಸಲ್ಲಿ ಮಾತ್ರ ಯಾವುದೊ ವಿಚಾರಗಳು ಜೋರಾಗಿ ಸುತ್ತತೊಡಗಿದ್ದವು.

ಅವಳ ಜೊತೆಗೂಡಿ ನಡೆದ ಜೀವನದ ಪಯಣ, ಕೆಲವೇ ವರ್ಷಗಳಲ್ಲಿ ಈ ರಸ್ತೆಯ ಹಾಗೆ ಏಕೆ ಕವಲೊಡೆದು ಇಬ್ಭಾಗವಾಯಿತು? ಅದಕ್ಕೆ ಯಾರು ಕಾರಣರು? ನಾನೆ? ಅಥವಾ ಅವಳೆ? ಅವಳು ತುಳಿಯುತ್ತಿರುವ ದಾರಿ ಸರಿಯೇ? ಅಥವಾ ನಾನು ಆರಿಸಿಕೊಂಡ ಹಾದಿಯೇ? ಅವಳು ನನ್ನ ವಿಚಾರಧಾರೆಯನ್ನು ಅಥವಾ ನಾನು ಅವಳದನ್ನು ಒಪ್ಪಿಕೊಂಡಿದ್ದರೆ ಜೀವನದಲ್ಲಿ ಈ ಕವಲು ದಾರಿ ಹುಟ್ಟುತ್ತಿರಲಿಲ್ಲವೇ?? ಮನಸಿನಲ್ಲಿ ತುಡುಕಾಡುತ್ತಿದ್ದ ಪ್ರಶ್ನೆಗಳಿಗೆಲ್ಲ ಉತ್ತರ ಹುಡುಕುವ ಪ್ರಯತ್ನದಲ್ಲಿಯೇ ತೋಟದ ಮನೆ ಬಂದಾಗಿತ್ತು. ಬಾಗಿಲಿನ ಮುಂದೆಯೊಂದು ಪಾರ್ಸೆಲ್ ಬಿದ್ದಿತ್ತು. ಅದೇನೆಂದು ಬಿಚ್ಚಿ ನೋಡಿದರೆ ಪುಸ್ತಕ. ಆನ್ಲೈನ್ ನಲ್ಲಿ ಖರೀದಿಸಿದ

ಕಥೆಯ ಪುಸ್ತಕ ಸರಿಯಾದ ಸಮಯದಲ್ಲಿ ಬಂದಿದಕ್ಕೆ ಸಂತೋಷಪಟ್ಟು, ಬಾಗಿಲು ತೆರೆದು ಒಳಗೆ ನಡೆದನು. ಈ ಮನೆಯಲ್ಲಿ ಕಥೆಗಳ ಪುಸ್ತಕಗಳನ್ನು ಬಿಟ್ಟರೆ ನನಗಾರು ಸಂಗಾತಿಗಳು? ಅದೆಷ್ಟೋ ಕಥೆಗಳನ್ನು ಓದಿ ಆನಂದಿಸಿಲ್ಲವೇ? ಅವುಗಳಲ್ಲಿ ಅದೆಷ್ಟು ನೋವುಗಳು, ನಲಿವುಗಳು, ತಿರುವುಗಳು, ಏರಿಳತಗಳು, ಪರಾಕಾಷ್ಠೆಗಳು? ನನ್ನ ಜೀವನದ ಪುಟಗಳಲ್ಲೂ ಇವುಗಳೆಲ್ಲ ಆವರಿಸಿದ್ದು ನಿಜವಲ್ಲವೇ? ಹಾಗಾದರೆ ಒಳ್ಳೆಯ ಕಥೆಗಾರನು ಸಿಕ್ಕರೆ ಈ ಪುಟಗಳೆಲ್ಲವನ್ನು ಸೇರಿಸಿ ಒಂದು ಕಥೆಯನ್ನೇ ಹೆಣೆಯಬಹುದಲ್ಲವೇ? ಕಾಣದ ದೈವವು ನಿಗೂಢವಾಗಿ ಬರೆದ ಬರಹಕ್ಕೆ ಇನ್ನೂ ಲೇಪನವನ್ನು ಹಚ್ಚಿ ಚಿತ್ತಾರವಾಗಿಸಬಹುದಲ್ಲವೇ?' ಎಂದು ಕನವರಿಸಿ, ಕೈಯಲ್ಲೊಂದು ಬಿಸಿ ಕಾಫಿಯ ಲೋಟವನ್ನು ಹಿಡಿದುಕೊಂಡು ಹೊಸ ಪುಸ್ತಕವನ್ನು ತೆರೆಯಬೇಕುಂದುಕೊಂಡಾಗ ವಿದ್ಯುತ್ ಕಡಿತವಾಗಿ ಮನೆಯಲೆಲ್ಲ ಕತ್ತಲೆ ಆವರಿಸಿತಾದರೂ, ತೆರೆದ ಕಿಟಕಿಯಿಂದ ಹೊರಗೆ ಚಲ್ಲಿದ್ದ ಬೆಳದಿಂಗಳು ಒಳ ನುಗ್ಗಿ ಸಣ್ಣ ಬೆಳಕನ್ನು ತೋರಿಸಿತು. ಅರೆ! ಈ ದಿನ ಹುಣ್ಣಿಮೆಯಲ್ಲವೇ? ಹೊರಗೆ ಬೀಸುತ್ತಿದ್ದ ತಂಗಾಳಿಯಲ್ಲಿ, ಪೂರ್ಣ ಚಂದ್ರನ ನಗೆಯನ್ನಾದರೂ ಸವಿದರಾಯಿತು ಎಂದು ಕಾಫಿಯ ಲೋಟದೊಂದಿಗೆ ಹೊರಗೆ ಬಂದಾಗ, ನೆನಹು ಎಂಬ ಗಾಳಿ ಬೀಸಿ, ಅವನ ತೆರೆದ ಜೀವನವೆಂಬ ಪುಸ್ತಕದ ಕೆಲವು ಪುಟಗಳು ಪಟ ಪಟನೆ ತೆರೆದುಕೊಂಡ ಹಾಗೆನಿಸಿತು. ನಡೆದು ಹೋದ ಘಟನೆಗಳು ಅವನ ಮನದಲ್ಲೊಮ್ಮೆ ಮರುಕಳಿಸಿ ಬಂದಿದ್ದವು. ಬೆಂಗಳೂರಿನಲ್ಲಿ ತರಬೇತಿ ಮುಗಿಸಿ, ಚಿಕ್ಕ ಮಕ್ಕಳ ತಜ್ಞನಾಗಿ, ಮನ ಮೆಚ್ಚುವ ಹುಡುಗಿಯನ್ನು ಮದುವೆಯಾಗಿ, ಅಪ್ಪ ಕಾಯ್ದಿರಿಸಿದ್ದ ಹಳೆಯ ಕಟ್ಟಡದಲ್ಲಿ ಪ್ರಾಕ್ಟಿಸ್ ಪ್ರಾರಂಭಿಸಬೇಕೆಂದು ನಿರ್ಧರಿಸಿ, ಸಿರ್ಸಿಗೆ ಬಂದಾಗ ತನ್ನ ಜೀವನದಲ್ಲಿಯೂ ಇಂತಹುದೇ ಬೆಳದಿಂಗಳು ಹರಡಿತ್ತಲ್ಲವೇ? ಆ ದಿನದ ಸಂಜೆಯಲ್ಲಿ ಅಪ್ಪನೆಂದಿದ್ದನಲ್ಲಾ,




"ಮಗಾ ವಯಸ್ಸಾಯಿತಲ್ಲಾ! ನಿನ್ನ ಮದ್ವಿಗೊಂದು ಹೆಣ್ಣ ನೋಡಬೇಕು" ಎಂದು.

"ಅವನೇನ್ ಕೇಳ್ತೀರಿ, ಹಾಂಗ ಬಿಟ್ಟರ ಇನ್ನ ಓದ್ಕೊಂತ ಇರ್ತಾನ್. ಛಲೋ ಡಾಕ್ಟರ್ ಹುಡ್ಗಿನ್ ನೋಡಿ ಗಂಟ ಕಟ್ಟಿ ಬಿಡೂನ್" ಅಂತ ಅವ್ವ ತನ್ನ ಉತ್ತರಕ್ಕೆ ಕೂಡ ಕಾಯದೆ ತನ್ನ ಅಭಿಪ್ರಾಯವನ್ನು ತಿಳಿಸಿ ಬಿಟ್ಟಿದ್ದಳಲ್ಲವೆ?

"ಆಯ್ತಪ್ಪಾ, ಹುಡುಗಿನೇನೋ ನೋಡೂನು ಆದ್ರ, ಅವ್ವ ಹೇಳಿದಾಂಗ ನನಗ ಡಾಕ್ಟರ್ ಹುಡುಗಿ ಮಾತ್ರ ಬ್ಯಾಡಾ! ಇಬ್ಬರೂ ಕೆಲಸದಾಗ ಇದ್ರ ಸಂಸಾರ ನೋಡ್ಕೊಳ್ಳೋರು ಯಾರು?" ಎಂದು ನನ್ನ ಅನಿಸಿಕೆಯನ್ನು ಉಸುರಿದಾಗ,

"ನಿನ್ನ ಅವ್ವ ಹೇಳುದೂನು ಖರೇ ಐತಿ. ಈ ಕಾಲದಾಗ ಇಬ್ಬರೂ ಕೆಲಸಾ ಮಾಡಿದ್ರನ ಭೇಷ್. ರೊಕ್ಕ ಇದ್ರ ಸಂಸಾರ
ನೋಡ್ಕೊಳ್ಳಾಕ ಆಳು ಕಾಳುಗಳಿಗೇನ್ ಕಡಿಮಿ?" ಅಂತ ಅಪ್ಪ ಅವ್ವನ ಬಲ ಕಟ್ಟಿದ್ದು ಸತ್ಯವಲ್ಲವೇ?

"ನನ್ನದ ಆಸ್ಪತ್ರಿ ಕಟ್ಟಿಸಿ, ಛಲೋ ಸಂಸಾರ ನಡಸಾಕ ಬೇಕಾಗುವಷ್ಟು ರೊಕ್ಕಾಗಳಿಸುವ ತಾಕತ್ತ ನನ್ನ ಕಡೆ ಐತಿ ಬಿಡಪ್ಪಾ. ಅವಳ್ಯಾಕ ದುಡೀಬೇಕು?" ಅಂತ ನಾನು ಆತ್ಮಸ್ಥೈರ್ಯದಿಂದ, ಆ ದಿನ ಅವರಿಬ್ಬರ ಬಾಯಿ ಮುಚ್ಚಿಸಿದ್ದು ನಿಜ. ಅದಕ್ಕೆ, "ನಿನ್ನ ಮನಸ ತಿಳದಾಂಗ ಆಗ್ಲಿ ಬಿಡು, ಆದ್ರ ಮನೆತನಾ ಮಾತ್ರ ಭೇಷ್ ಇರಬೇಕ" ಅಂತ ಅವ್ವ ಒಪ್ಪಿಗೆ ಸೂಸಿದ್ದಳಲ್ಲವೇ? ಹಲವಾರು ಕುಟುಂಬದವರು ಹೆಣ್ಣು ಕೊಡಲು ಮುಂದೆ ಬಂದರೂ, ನೋಡಿದ ಹುಡುಗಿಯರು ಇಷ್ಟವಾಗದೇ ಹಾಗೆಯೇ ನಾನು ನಿರಾಕರಿಸಿ ಬಿಟ್ಟಾಗ, ಕೈ ತಪ್ಪಿದ ಶ್ರೀಮಂತ ಸಂಬಂಧಗಳನ್ನು ನೆನಪಿಸಿಕೊಂಡು ಹತಾಶೆಯಿಂದ ಅದೊಂದು ದಿನ ಅವ್ವ,

"ನೀನೇನು ದೊಡ್ಡ ಮನ್ಮಥ ಸುಂದರಾ? ನಾವೇನು ದೊಡ್ಡ ಶ್ರೀಮಂತ್ರು? ಯಾವ ಹುಡಿಗೀನೂ ಒಪ್ಪಾಕತ್ತಿಲ್ಲ,

ಮೊನ್ನೆ ನೋಡಿದ ಹುಡುಗಿ ಅವರಪ್ಪನಿಗೆ ಒಬ್ಬಳ ಮಗಳು, ಕಪ್ಪಿದ್ದರೂ ಲಕ್ಷಣವಾಗಿದ್ದಳು, ಅಷ್ಟೊಂದ್ ಆಸ್ತಿ ಪಾಸ್ತಿ! ಇನ್ನ ಮ್ಯಾಲ ನಮಗ ನಿನ್ನ ಕೂಡ ತಿರಗಾಕ್ ಆಗೂದಿಲ್ಲಾ. ನೀನ ಹುಡಿಕಿಕೊಂಡ ಬಾ. ನಮಗೂ ಸಾಕಾಗಿ ಬಿಟ್ಟೈತಿ. ನೀ ಹೂ... ಅಂದವಳನ್ನ ಕಟ್ಟಿ ಮದವಿ ಮಾಡ್ತೀವಿ" ಅಂತ ಹೇಳಿ ನಿಟ್ಟುಸಿರು ಬಿಟ್ಟಾಗ, ಅಪ್ಪನೂ ಅವಳ ಮಾತಿಗೆ ಜೊತೆಯಾಗಿ ರಾಗ ಎಳೆದಿದ್ದು ಎಷ್ಟು ಸತ್ಯ?

"ದೇವರು ನನಗ ವಿದ್ಯಾ ಕೊಟ್ಟಾನ, ಹೆಣಾಸ್ತಿ ತಗೊಂಡು ಶ್ರೀಮಂತರ ಹಂಗಿನಾಗ ನಾನ್ಯಾಕ ಇರಬೇಕು? ಕಟ್ಟಿಕೊಂಡವಳ ಕೂಡ ಸಾಯುತನಕ ಸಂಸಾರ ಮಾಡಾವ್ನು ನಾನು! ನೀವಲ್ಲಾ? ನನಗ ಆಸ್ತಿ ಮುಖ್ಯ ಅಲ್ಲಾ , ಹುಡ್ಗಿಯ ರೂಪಾ, ಗುಣಾ ಮುಖ್ಯ" ಅಂತ ಹೇಳಿ ಅವರಿಬ್ಬರ ವಾಗ್ವಾದಕ್ಕೆ ನಾನು ತೆರೆ ಎಳೆದಿದ್ದು ಈಗಲೂ ಎಷ್ಟು ಸಮಂಜಸ?

"ಹಂಗಾದ್ರ ಒಂದ ಕೆಲ್ಸಾ ಮಾಡು, ಹುಬ್ಬಳ್ಳಿಯಾಗ ನಮ್ಮ ಪಕ್ಕದ ಮನಿ ಶೆಟ್ಟರ ಸಂಬಂಧಿಕರೊಬ್ಬರು ಮಗಳಿಗೆ ವರಾ ನೋಡಾಕತ್ತಾರಂತ, ಹುಡುಗಿ ಏನೋ ಡಿಗ್ರೀ ಮುಗಿಸಿದಾಳಂತ, ನಮ್ಮಂಗ ಮಧ್ಯಮ ವರ್ಗದವರಂತ ಆದರ, ಹುಡುಗಿ ನೋಡಾಕ ಭಾಳ ಚಂದ ಅದಾಳಂತ, ನೀನೊಬ್ಬನ ಹೋಗಿ ನೋಡ್ಕೊಂಡ ಬಾ" ಅಂತ ಅಪ್ಪ ನನ್ನ ಮನದ ಇಂಗಿತವನ್ನು ಅರ್ಥ ಮಾಡಿಕೊಂಡು, ಅಪ್ಪಣೆ ಕೊಟ್ಟಿದ್ದಕ್ಕೆ ಎಷ್ಟೊಂದು ಕೃತಜ್ಞತೆಯನ್ನು ಹೇಳಿದರೂ ಸಾಲದಲ್ಲವೇ?

ಮೊದಲನೆಯ ನೋಟದಲ್ಲಿಯೇ ಅವಳ ರೂಪಕ್ಕೆ ಮರಳಾಗಿ, ಇವಳೇ ನನ್ನ ಬಾಳ ಸಂಗಾತಿಯೆಂದು ನಿರ್ಧರಿಸಿದ್ದು, ನೋಡಲು ಸಾಧಾರಣವಾಗಿರುವ ತನ್ನನ್ನು ಅವಳೊಪ್ಪಬಹುದೇ ಎಂಬ ಸಣ್ಣ ಭಯವೂ ಮನಸಿನಲ್ಲಿ ಮೂಡಿ ಮಾಯವಾಗಿದ್ದು 'ಎಷ್ಟಾದರೂ ಒಳ್ಳೆಯ ಹುದ್ದೆಯಲ್ಲಿರುವ ಗಂಡು ತಾನೇ? ಹೇಗಿದ್ದರೂ ನಡೆಯುತ್ತೆ ಬಿಡು' ಎಂದು ತಾನೇ ಸಮಾಧಾನವನ್ನು ಮಾಡಿಕೊಂಡಿದ್ದು ಪ್ರತ್ಯೇಕವಾಗಿ ಮಾತನಾಡಲು ಅದೊಮ್ಮೆ ಅವಕಾಶ ಸಿಕ್ಕಾಗ ಅವಳನ್ನು, "ಈ ಮದುವೆಗೆ ನಿನ್ನ ಒಪ್ಪಿಗೆ ಇದೆಯೇ?" ಎಂದು ಕೇಳಿಯೇ ಬಿಟ್ಟಿದ್ದು ಓರೇ ನೋಟದಲ್ಲೊಮ್ಮೆ ಅವಳು ಕಿರು ನಗೆ ಸೂಸಿ, ಬೇರೆ ಏನನ್ನೂ ಹೇಳದೆ, "ಐ ಲವ್ ಯು" ಎಂದು

ಕಿವಿಯಲ್ಲಿ ಪಿಸುಗುಟ್ಟಿ ಮಾಯವಾಗಿದ್ದು ? ಕ್ಷಣಗಳಲ್ಲಿಯೇ ಅವಳಿಂದ ಬಂದ ಪ್ರತಿಕ್ರಿಯೆಯನ್ನು ಕಂಡು ಹೃದಯ ಪುಳಕಿತಗೊಂಡು, ತಮ್ಮಿಬ್ಬರ ಮದುವೆಯ ಗಂಟಿಗೆ ಮೊಹರು ಬಿದ್ದು, ಮದುವೆಗೆ ಬಂದ ಗೆಳೆಯರು ಸೂಪರ್ ಸೆಲೆಕ್ಷನ್ ಕಣೋ ಅಂತ ಬೆನ್ನು ಚಪ್ಪರಿಸಿದ್ದು ? ಆ ನೆನಪುಗಳೆಲ್ಲಾ, ಈ ಹುಚ್ಚು ಮನಸಲ್ಲಿ ಇನ್ನೂ ಹಚ್ಚು ಹಸಿರಲ್ಲವೇ? ಎಂದೆಂದು ಕೊಂಡು ಕಾಫಿಯ ಒಂದು ಗುಟುಕನ್ನು ಹೀರಿದನು.

ಪ್ರೇಮ ಕಾಮಗಳ ಸಂಗಮವಾಗಿ, ಓಡುತ್ತಿದ್ದ ಆ ದಿನಗಳಲ್ಲಿ ಸಮೀಪದ ಕುಡ್ಲೆ ಬೀಚ್ ಇಬ್ಬರಿಗೂ ನೆಚ್ಚಿನ ತಾಣವಾಗಿತ್ತು. ಅಪ್ಪನ ಹಳೆಯ ಫಿಯಟ್ ಕಾರು ತಮ್ಮಿಬ್ಬರನ್ನು ಅದೆಷ್ಟೋ ಸಲ ಬೀಚಿಗೆ ಕರೆದೊಯ್ದು, ಸಮುದ್ರದ ದಂಡೆಯಲ್ಲಿ ಕುಳ್ಳಿರಿಸಿ, ರಂಗೇರುತ್ತಿದ್ದ ಸೂರ್ಯಾಸ್ತಮಾನದ ಸವಿ ಉಣಿಸಿ, ಮರಳಿ ಮನೆಗೆ ಕರೆ ತಂದದ್ದನ್ನು ನೆನೆದರೆ, ಈಗಲೂ ಒಂದು ಕ್ಷಣ ದಣಿದ ಮನದಲ್ಲಿ ರೋಮಾಂಚನದ ನವಿರೇಳುವುದು ಸಹಜವಲ್ಲವೇ? ಹಳೆಯ ನೆನಪುಗಳು ಸುಳಿ ಸುಳಿಯಾಗಿ ಮನದಲ್ಲಿ ಸುತ್ತುತ್ತಿರುವಾಗಲೇ, ಯಾಕೋ ಒಮ್ಮೆಲೇ ಕತ್ತಲೆಯಾದಂತೆ ಅನಿಸಿತು. ಆಕಾಶದತ್ತ ತಲೆ ಎತ್ತಿದರೆ, ಮಿನುಗುತ್ತಿದ್ದ ತಾರೆಗಳ ಗುಂಪಿನಲ್ಲಿ, ನಗುತ್ತಿದ್ದ ಚಂದ್ರನ ಅರ್ಧ ಮುಖ ಕಪ್ಪಾಗಿತ್ತು. ಅರೆ! ಈ ರಾತ್ರಿ ಚಂದ್ರಗ್ರಹಣವಲ್ಲವೇ? ಅಪ್ಪ ಅವ್ವ ಜೀವಂತ ಇದ್ದಿದ್ದರೆ ಆಗಲೇ ಎಚ್ಚರಿಕೆ ಕೊಟ್ಟಿರುವರಲ್ಲವೇ.

ಇನ್ನು, ಚಂದ್ರ ಎಷ್ಟೇ ಒದ್ದಾಡಿದರೂ ರಾಹುವಿನ ಕರಾಳ ಬಾಯಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಮನೆಯ ಒಳಗೆ ಬಂದು ಆವರಿಸಿದ್ದ ಕತ್ತಲೆಯನ್ನು ಓಡಿಸಲು ಕಂದೀಲನ್ನು ಬೆಳಗಿಸಿದನು.

ಲೋಟದಲ್ಲಿದ್ದ ಕಾಫಿ ಖಾಲಿಯಾಗಿತ್ತು. ಈಗ ತಾನೇ ಅವನ ಮನದಲ್ಲಿ ಮೂಡಿ ಹೋದ ಸವಿ ನೆನಪುಗಳ ಬೆನ್ನಲ್ಲೇ, ಕಹಿ ನೆನಪುಗಳೂ ಸಹ ಸಾಲು ಸಾಲಾಗಿ ಭಿತ್ತರಿಸತೊಡಗಿದ್ದವು. ಅವನು ಮನದಲ್ಲಿಯೇ ಗುಣ ಗುಣಿಸತೊಡಗಿದ್ದನು.

ನನ್ನ ಬಾಳಿನ ಅಂಗಳದಲ್ಲಿ ಹರಡಿದ್ದ ಬೆಳದಿಂಗಳೂ ಕೂಡಾ, ಅವಳ ಮತ್ತು ನನ್ನ ನಡುವೆ ಮೂಡಿದ ಭಿನ್ನಾಭಿಪ್ರಾಯ, ಆಶೆ, ಅಸಹನೆ ಎಂಬ ರಾಹುವಿನ ಪಾಲಾಗಿ ಹೋಗಿದ್ದು ಎಷ್ಟು ದುಃಖಕರ! ಅವಳು ಹಾಗೆ ಮಾಡಬಹುದಿತ್ತೇ?'

ಅವಳ ಉದರದಲ್ಲಿ ಬೆಳೆಯುತ್ತಿದ್ದ ನನ್ನ ವರಶದ ಕುಡಿಯ ಚೊಚ್ಚಲು ಹೆರಿಗೆಗಾಗಿ ತವರಿಗೆ ಹೋಗುವಾಗ,
"ರೀ, ಮಗೂನ ಕರಕೊಂಡ ಬರಾಕ ಹೊಸಾ ಕಾರ್ ತಗೊಂಡ್ ಬರ್ರಿ, ನನ್ನ ಮಗು ನಿಮ್ಮ ಹಳೇ ಕಾರಿನಾಗ ಕುಂಡ್ರುದಿಲ್ಲ" ಎಂದು ಅಪ್ಪನ ಎದುರೇ ಅವಳೆಂದಿದ್ದು ತಪ್ಪಲ್ಲವೇ? ಅಪ್ಪನ ಹಳೆಯ ಕಾರಿಗೂ ನನಗೂ ಬಾಲ್ಯದಿಂದಲೂ ಇದ್ದ ಗಂಟನ್ನು ಕಿತ್ತುಕೊಳ್ಳಲು ನಾನು ಒದ್ದಾಡುತ್ತಿದ್ದನ್ನು ಕಂಡು ಅಪ್ಪ,
"ಇರಲಿ ಬಿಡಪ್ಪಾ ವಯಸಾದ ನಮಗ ಹಳೆ ಕಾರ ಇರಲಿ, ನೀವೊಂದು ಹೊಸಾ ಕಾರ್ ತಗೊಂಡುಬಿಡ್ರಿ, ಹಳೇದಾದ ಮ್ಯಾಲೆ ಹೊಸಾದನ್ನ ಕೇಳುದು ಮನಸ್ಯಾನ ಸ್ವಭಾವಾ, ಅವಳು ಹೇಳುದು ಖರೇ ಐತಿ" ಅಂತ ಅಂದಿದ್ದು ಸರಿ ಇತ್ತೇನೋ! ಆದರೆ, ಅವಳ ಆಶೆಯಂತೆ ಹೊಸ ಕಾರನ್ನು ಖರೀದಿಸಿ ಮಗುವನ್ನು ಕರೆತರಲು ಹೋದಾಗ,
"ಇದೇನ್ರಿ! ನನ್ನ ಗೆಳತಿ ಗಂಡನಂಗ, ಲಗ್ಜುರಿ ಕಾರ ತಗೋತ್ತೀರಿ ಅಂತ ಅಂದಕೊಂಡಿದ್ನಿ, ಇದಕ್ಕಿಂತ ಆ ಹಳೆಯ ಫಿಯೆಟ್ಟ ಛಲೋ ಇತ್ತು" ಎಂದು ಅವಳು ಅಸಮಾಧಾನ ತೋರಿಸಿದಾಗ, ಮುದ್ದು ಮಗುವಿನ ಮುಖ ನೋಡಿ ಬಂದ ಕೋಪವನ್ನು ನುಂಗಿಕೊಂಡೆ.
ನಾನು,
"ಲೇ, ಯಾವ ಕಾರು ಆದ್ರೇನು ಓಡಾಡಲಿಕ್ಕ ಇರುವ ನಮ್ಮ ಅವಶ್ಯಕತೆಯನ್ನು ತೀರಿಸಿದರ ಸಾಕಲ್ಲ" ಎಂದು ಮಾತು ಮುಗಿಸಿದ್ದು ಈಗಲೂ ನನಗೆ ಸರಿ ಅನ್ನಿಸುತ್ತದಲ್ಲವೇ!
ಆ ದಿನ ಹೊಸ ಆಸ್ಪತ್ರೆಯನ್ನು ಕಟ್ಟುವ ವಿಚಾರವನ್ನು ಅವಳ ಮುಂದೆ ಇಟ್ಟಾಗ,
"ರೀ ಮೊದಲು ಒಂದು ದೊಡ್ಡ ಹೊಸಾ ಮನಿ ಕಟ್ಟಿಸರಿ. ಎಷ್ಟು ದಿನ ಅಂತ ಈ ಹಳೇ ಮನ್ಯಾಗ ಇರುದು? ವಯಸಿದ್ದಾಗ ಮನಿ ಸುಖಾ ಅನುಭವಿಸದಿದ್ದರ ಆಮ್ಯಾಲ ತಗೊಂಡು ಏನು ನೆಕ್ಕುದು! ಪಕ್ಕದ ಓಣ್ಯಾಗಿನ ನಿಮ್ಮ ಗೆಳೆಯಾನ್ ನೋಡಿ ಕಲೀರಿ. ಅವರ ಮೂರ ಅಂತಸ್ತಿನ ಮನಿ ಎಷ್ಟ್ ಲಗ್ಜುರಿ ಆಗ್ಯೆತಿ" ಅಂತ ಗೋಳು ಹೊಯ್ದುಕೊಂಡಾಗ,
"ಬ್ಯಾರೆಯವರ ಬದುಕನ್ನ ಕಂಡು ನಿನ್ನ ನೆಮ್ಮದಿಯಾನ್ನ್ಯಾಕ ಹಾಳ ಮಾಡಕೋತಿ. ನಮ್ಮ ಅವಶ್ಯಕತೆ ಏನೈತಿ ಅಂತ
ತಿಳಕೊಂಡು ಬದಕಲಿಕ್ಕ ಕಲಿ. ಊರಾಗ ಹೊಸಾ ಆಸ್ಪತ್ರಿ ಬರಾಕತ್ತಾವ, ಕಾಂಪಿಟೇಷನ್ ಜಾಸ್ತಿ ಆಗಾತ್ಯೆತಿ. ನನಗ ಈಗ ಹೊಸಾ ಆಸ್ಪತ್ರಿ ಅವಶ್ಯಕತೆ ಐತಿ, ಆಮ್ಯಾಲ ಮನಿ ಬಗ್ಗೆ ಯೋಚನೆ ಮಾಡೂನು" ಅಂತ ಖಡಕ್ಕಾಗಿ ಹೇಳಿ, ಅವಳ ಕನಸಿನ ಮನೆಯನ್ನು ಗಾಳಿಯಲ್ಲಿ ತೂರಿ, ಹೊಸ ಆಸ್ಪತ್ರೆಯ ನಿರ್ಮಾಣಕ್ಕೆ ಕೈ ಹಾಕಿದ್ದು ನನ್ನ ತಪ್ಪೇನಲ್ಲವೇ?
ಪ್ರಾಣ ಬಿಟ್ಟ ಮಗುವನ್ನು ಆಸ್ಪತ್ರೆಗೆ ತಂದು, ನಾನು ಅದರ ಜೀವವನ್ನು ಉಳಿಸಲಿಲ್ಲವೆಂದು ನನ್ನನ್ನು ದೋಷಿಷಿ, ಆ ಹುಚ್ಚ ಜನರ ಗುಂಪು, ಆಸ್ಪತ್ರೆಯ ಮೇಲೆ ಕಲ್ಲೆಸೆದು ಮಾಡಿದ ಗಲಾಟೆಯನ್ನು ಸಹಿಸಿಕೊಂಡು, ಅವಮಾನ, ಆಕ್ರೋಶದಿಂದ ನಾನು ಮನೆಗೆ ಬಂದಾಗ,
"ನಿಮಗ ಪ್ರಾಕ್ಟೀಸ್ ಮಾಡಾಕ ಬರುದಿಲ್ರಿ, ನಿಯತ್ತಿನಿಂದ ಕೆಲಸಾ ಮಾಡಿದರ ಈಗಿನ ಜನಾ ಒಪ್ಪುದಿಲ್ಲ. ನಿಮ್ಮ ಜೂನಿಯರ್ನ ನೋಡ್ರಿ, ಎರಡ ವರ್ಷದಾಗ ಎಷ್ಟ ರೊಕ್ಕಾ ಮಾಡ್ಯಾನ, ಎಷ್ಟ ದೊಡ್ಡ ಆಸ್ಪತ್ರಿ, ಮನಿ ಕಟ್ಟಿಸ್ಯಾನ. ರಾಜಕೀಯ ಜನಾ ಅವನ ಕೈಯ್ಯಾಗ ಗೊಂಬಿಯಂಗ ಕುಣೀತಾರ". ಸಾಂತ್ವನ ಹೇಳುವ ಬದಲು, ಅವಳು ನನ್ನ ಮನಸಿನ ಗಾಯದ ಮೇಲೆ ಉಪ್ಪನ್ನು ಎರಚಿದ್ದು ಯಾವ ನ್ಯಾಯ? ಪ್ರತಿಯೊಂದು ವಿಷಯದಲ್ಲಿಯೂ ಬೇರೆಯವರೊಡನೆ ನನ್ನನ್ನು ಹೋಲಿಸಿ ನನ್ನ ಮನಃಸಾಕ್ಷಿಗೆ ತಣ್ಣೀರೆರಚಿದ ಅವಳ ರೀತಿ ಎಷ್ಟು ಕ್ರೂರ?
?ಪ್ರತಿಷ್ಠೆ, ಅಂತಸ್ತು, ಘನತೆ ಐಷಾರಾಮಗಳ ಬೆನ್ನು ಹತ್ತಿದ್ದ ಅವಳ ಜೀವನದ ಶೈಲಿಯ ಮುಂದೆ ನನ್ನ ವಯಕ್ತಿಕ ವಿಚಾರಧಾರೆಗಳು ಮುರಿದು ಬಿದ್ದದ್ದು ಮಾತ್ರ ನಿಜ. ವರುಷಗಂಟಲೇ ಮುಂದುವರೆದ ನಮ್ಮಿಬ್ಬರ ನಡುವಿನ ವಾಗ್ಧಾನ ಜೀವನದಲ್ಲಿನ ನೆಮ್ಮದಿಯನ್ನೇ ಕಿತ್ತುಕೊಂಡು, ನಿದ್ರೆಯಿಲ್ಲದ ರಾತ್ರಿಗಳಿಗೆ ಎಡೆಮಾಡಿಕೊಟ್ಟಾಗ, ನೊಂದ ಬೆಂದ ನನ್ನ ಮನಸು ತನ್ನ ನಿರ್ಧಾರವನ್ನು ಅವಳಿಗೆ ಮಂಡಿಸಿದ್ದು ಈಗಲೂ ಸರಿ ಎಂದೇ ನನ್ನ ಭಾವನೆಯಲ್ಲವೇ??
"ನನ್ನ ನಿನ್ನ ನಡಕ ಸಹಬಾಳ್ವೆ ಸಾಧ್ಯನ ಇಲ್ಲಾ ಅಂತಾ ಅನಸಾಕತ್ತೈತಿ. ಸಾಯುತನಕಾ ಹಿಂಗ್ ಒದ್ದಾಡಕೊಂಡು

ಬದಕಾಕ ನನಗ ಮನಸ್ಸಿಲ್ಲಾ. ಈಗ ಉಳಿದಿರುದು ಎರಡು ಹಾದಿ. ಬೇರೆಯವರಂಗ ವಿವಾಹ ವಿಚ್ಛೇದನ ಪಡದು ಬೇರೆಯಾಗುವುದು ... ಯಾಕೋ ಇಷ್ಟು ವರ್ಷಗಳಾದ ಮ್ಯಾಲ ಅದಕ್ಕ ಮನಸು ಒಪ್ಪತಾ ಇಲ್ಲಾ ... ಹಾಂಗ, ನಾ ಕನಸ ಕಂಡಂಗ ಈ ಸಮಾಜದಾಗ ಡಾಕ್ಟರಿಕಿ ಮಾಡಾಕ ನನಗ ಆಗಲಿಲ್ಲ ... ಅದಕ್ಕ ಅಪ್ಪನ ಅಡಕಿ ತೋಟದ ಮನ್ಯಾಗ ನಾನೊಬ್ಬನ ಇದ್ದು, ತೋಟಾ ಬೆಳೆಸಿ, ನೆಮ್ಮದಿಯಿಂದ ಉಳಿದ ಜೀವನಾ ಕಳೀಬೇಕಂತ ನಿರ್ಧಾರ ಮಾಡೀನಿ. ರೊಕ್ಕಾ ಕೊಟ್ಟು ಆಸ್ಪತ್ರಿ ನಡಸಾಕ ಬ್ಯಾರೆಯವರು ಒಪ್ಪಿಕೊಂಡಾರ, ಊರಾಗಿನ ಉಳಿದ ಕಟ್ಟಡಗಳ
ಭಾಡಿಗಿ ಬರತೈತಿ. ಹಾಂಗ ಮಗನ್ ಮಂಗಳೂರಿನ ಸ್ಕೂಲಿನಾಗ ಬಿಟ್ಟು ಬಿಡೂನು. ನಿನ್ನ ಜೀವನಕ ಏನೂ ತೊಂದರಿ ಆಗುದಿಲ್ಲಾ. ಮಾತು ಮಾತ್ರ ನಿಲ್ಲಿಸಬ್ಯಾಡಾ, ಮನಸ ತಿಳದಾಗ ಫೋನ್ ಮಾಡು" ಅಂತ ಹೇಳಿ, ಮೌನದಲ್ಲಿಯೇ ಸಮ್ಮತಿಸಿದ ಅವಳನ್ನು ಬಿಟ್ಟು ಬಂದಿರುವುದರಲ್ಲಿ ನನ್ನದು ಯಾವುದು ತಪ್ಪಿಲ್ಲ ಎಂದು ಅವಳಿಗೆ ಅನ್ನಿಸಿರಬೇಕಲ್ಲವೇ!

?ಹಾಗಾದರೆ ಈ ಪರಿಸ್ಥಿತಿ ಉದ್ಭವಿಸಲು ಮೂಲ ಕಾರಣವೇನು? ಮೊದಲು ಸಲ ಅವಳನ್ನು ನೋಡಲು ಹೋದಾಗ ನಾನು ಕಂಡದ್ದು ಅವಳ ಬಹಿರಂಗದ ಸೌಂದರ್ಯವನ್ನು ಮಾತ್ರ. ನನ್ನ ಒಳಗಣ್ಣುಗಳಿಂದ ಅವಳ ಅಂತರಂಗದ ರೂಪವನ್ನು ನೋಡಲು ಪ್ರಯತ್ನ ಪಡಲೇ ಇರದಿದ್ದು ನನ್ನ ತಪ್ಪು, ನನ್ನ ಯೌವ್ವನದ ತಪ್ಪು. ಅವಳದು ಅಷ್ಟೇ ತಾನೇ? ಅವಳು ಬಹಿರಂಗದಲ್ಲಿ ನೋಡಿದ್ದು ನಾನು ಒಬ್ಬ ವೈದ್ಯನೆಂದು, ನನ್ನ ಅಂತರಂಗದಲ್ಲಿ ಅಡಗಿದ್ದ ಭಾವನೆಗಳನ್ನು ಅರಿಯಲು ಅವಳೆಂದೂ ಪ್ರಯತ್ನಿಸಲೇ ಇಲ್ಲ. ಹಾಗಾದರೆ, ನಾನು ಮೋಹಗೊಂಡಿದ್ದು ಅವಳ ರೂಪಿಗಾಗಿ ಅವಳಿಗಾಗಿ ಅಲ್ಲ, ಅವಳು ಆಕರ್ಷಿತವಾಗಿದ್ದು ನನ್ನಲ್ಲಿರುವ ವೈದ್ಯನಿಗಾಗಿ, ನನಗಾಗಿ ಅಲ್ಲ ಎಂಬುವುದು ಕಟು ಸತ್ಯ. ನಾವು ಮದುವೆಯಾಗಿದ್ದು ಬಹಿರಂಗದ ಪರಿಕಲ್ಪನೆಯನ್ನು ಮಾತ್ರ ಅಂತರಂಗದಲ್ಲಿ ಅಡಗಿದ್ದ ವ್ಯಕ್ತಿತ್ವವನ್ನಲ್ಲ, ಭಾವನೆಗಳನ್ನಲ್ಲ. ಹಾಗಿದ್ದರೆ ಮದುವೆಯ ಮುಂಚೆ ನಮಗೆ ದೊರೆತ ಅಲ್ಪ ಸಮಯದಲ್ಲಿ ಅದನ್ನು ಅರಿಯಲು ಸಾಧ್ಯವಿತ್ತೇ? ಅರಿಯದ ಇಬ್ಬರೂ ಒಂದು ಕ್ಷಣ ಭೇಟಿಯಾಗಿ ಜೀವನ ಪರ್ಯಂತ ಕೂಡಿ ಬದುಕುವ ಬದ್ಧತೆಗೆ ಒಪ್ಪಿಗೆ ಸೂಸುವ ಈ ನಿಶ್ಚಿತಾರ್ಥದ ಮದುವೆ ಎಂಬ ಪದ್ಧತಿ ಎಷ್ಟು ಸಮಂಜಸ? ಹಾಗಿದ್ದರೆ ಪ್ರೇಮ ವಿಹಾಹ ಸರಿಯೇ?

ಇತ್ತಿತ್ತಲಾಗಿ ಸುದ್ದಿಯಾಗುತ್ತಿರುವ ಲಿವಿಂಗ್ ಇನ್ ರಿಲೇಷನ್ಶಿಪ್ ಸರಿಯೇ? ಪ್ರೇಮ ವಿವಾಹ ಮಾಡಿಕೊಂಡ ನನ್ನ ಎಷ್ಟೋ ಗೆಳೆಯರ ಬದುಕು ಮುರಿದು ಬಿದ್ದಿಲ್ಲವೇ? ಲಿವಿಂಗ್ ಇನ್ ರಿಲೇಷನ್ಶಿಪ್‌ನಲ್ಲಿ ಇದ್ದ ಅದೆಷ್ಟೋ ಸಂಗಾತಿಗಳು ನಡು ನೀರಿನಲ್ಲಿ ಒಬ್ಬರಿಗೊಬ್ಬರು ಕೈ ಕೊಟ್ಟು ಬೇರೆಯಾಗಿ, ಪರಿತಪಿಸಿದ್ದನ್ನು ಪತ್ರಿಕೆಗಳಲ್ಲಿ ಓದಿಲ್ಲವೇ? ಹಾಗಾದರೆ ಯಾವ ಪದ್ಧತಿಗಳು ಪರಿಪೂರ್ಣ? ಇದಕ್ಕೆ ತಕ್ಕ ಉತ್ತರವಿಲ್ಲದ್ದು ಸತ್ಯವಲ್ಲವೇ? ಇವುಗಳೆಲ್ಲವೂ, ಒಂದು ಹೆಣ್ಣು ಗಂಡು ಸೇರಿ ಸಂಸಾರ ಎಂಬ ಬಂಡಿಯನ್ನು ಎಳೆಯಲು ಕೊಟ್ಟ ಬೇರೆ ಬೇರೆ ಹೆಸರುಗಳಲ್ಲವೆ? ಈ ಬದುಕಿನ ಪಯಣದಲ್ಲಿ ಹೊಂದಾಣಿಕೆ, ನಂಬಿಕೆ, ಸಹನೆ ಇರದಿದ್ದರೆ ಸಹಬಾಳ್ವೆಗೆ ಯಾವ ಹೆಸರನ್ನು ಕೊಟ್ಟರೂ ಫಲಿತಾಂಶ ಮಾತ್ರ ಒಂದೇ ತಾನೇ? ಹೀಗೆಯೇ ಹಳೆಯ ನೆನಪು, ವಿಚಾರಗಳ ಸಾಗರದಲ್ಲಿ ಮುಳುಗಿ ಹೋಗಿದ್ದ ಅವನನ್ನು ಕಂದೀಲಿನಿಂದ ಬಂದ ಚಟಪಟ ಎಂಬ ಸಪ್ಪಳ ಮತ್ತೆ ವಾಸ್ತವಕ್ಕೆ ಕರೆತಂದಿತ್ತು. ಏನೆಂದು ನೋಡಿದರೆ, ಕಂದೀಲಿನ ಬೆಳಕಿಗೆ ಆಕರ್ಷಿತವಾದ ಪತಂಗಗಳು ಅದರಲ್ಲಿದ್ದ ಜ್ವಾಲೆಯನ್ನು ಅಪ್ಪಿ, ಸುಟ್ಟು, ಕೆಳಗೆ ಬಿಳುತ್ತಲಿದ್ದವು. ಯಾವ ಜೀವಿಗಳಾದರೇನು ಆಕರ್ಷಣೆ ಎಂಬ ಜ್ವಾಲೆಗೆ ಯಾರೂ ಹೊರತಾಗಿಲ್ಲವೇ? ಪ್ಯಾರ ದೀವಾನಾ ಹೋತಾ ಹೈ .... ಎಂಬ ಹಳೆಯ ಹಿಂದಿ ಹಾಡನ್ನು ಗುಣುಗುಣಿಸುತ್ತ ಕುರ್ಚಿಯಿಂದ ಎದ್ದು ಕಿಟಕಿಯತ್ತ ನಡೆದನು.

ರಾಹುವಿನ ಕಪಿ ಮುಷ್ಟಿಯಿಂದ ಹೊರಗೆ ಬಂದ ಚಂದ್ರನು ಮತ್ತೆ ಭೂಮಿಯ ಮೇಲೆ ಬೆಳದಿಂಗಳಿನ ಹಾಲನ್ನು ಚೆಲ್ಲಿದ್ದನು. ಮರಳಿ ಬಂದ ವಿದ್ಯುತ್, ಬತ್ತಿದ್ದ ದೀಪಗಳಲ್ಲಿ ಹರಿದು ಮನೆಯ ತುಂಬ ಬೆಳಕು ಹರಡಿತ್ತು. ಫ್ರಿಜ್ನಲ್ಲಿದ್ದ ಮೀನಿನ ಕರಿಯನ್ನು ಬಿಸಿ ಮಾಡಿ ತಿಂದು, ಮಗನ ಕ್ಷೇಮ ಸಮಾಚಾರವನ್ನು ಫೋನಿನಲ್ಲಿ ವಿಚಾರಿಸಿ, ಅವನು ಹಾಸಿಗೆಗೆ ಒರಗಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಬೆಳಿಗ್ಗೆ ಆರು ಗಂಟೆಗೇನೆ ಅವನ ಮೊಬೈಲ್ ಫೋನು ಚೀರುತ್ತಲಿತ್ತು. ಕಣ್ಣು ಉಜ್ಜಿಕೊಳ್ಳುತ್ತಾ ಫೋನನ್ನು ನೋಡಿದರೆ ಅವಳಿಂದ ಕರೆ ಬಂದಿತ್ತು.



ಕಳೆದ ಆರು ತಿಂಗಳಲ್ಲಿ ಅವಳ ಜೊತೆಗೆ ಫೋನಿನಲ್ಲಿ ಮಾತನಾಡಿದ್ದು ಕೇವಲ ಮೂರ್ನಾಲ್ಕು ಸಾರಿ ಮಾತ್ರ. ಇಷ್ಟು ಹೊತ್ತಿನಲ್ಲಿ ಅವಳೇಕೆ ಕರೆ ಮಾಡಿರಬಹುದೆಂದು ಯೋಚಿಸುತ್ತ ಫೋನು ಎತ್ತಿಕೊಂಡನು. ಅವಳ ಧ್ವನಿಯಲ್ಲಿ ವೇದನೆ ಇತ್ತು.

"ರೀ ಮೆಟ್ಟಿಲು ಇಳಿಯುವ ಹೊತ್ತ್ನ್ಯಾಗ ಕಾಲು ಜಾರಿ ಬಿದ್ದು ನಡ್ಯಾಕ ಆಗ್ತಿಲ್ಲ, ಭಾಳ ತ್ರಾಸ ಆಗೈತಿ, ಕಾಲು ಊದಕೊಂಡೈತಿ, ಜಲ್ದಿ ಬರ್ರಿ" ಅವಳ ಮಾತುಗಳನ್ನು ಕೇಳಿ ಯಾಕೋ ಮನಸಿಗೆ ಚುರ್ರೆಂದಿತು. ಎಷ್ಟಾದರೂ ಕಟ್ಟಿಕೊಂಡ ಹೆಂಡತಿಯಲ್ಲವೇ?

"ಆಗ್ಲಿ, ನಾ ಈಗ ಬಂದ ಬಿಡ್ತೀನಿ" ಅಂತ ಫೋನಿಟ್ಟು, ಲಗುಬಗೆಯಿಂದ ಕಾರನ್ನು ಏರಿದನು. ಅರ್ಥೋಪೆಡಿಕ್ ಗೆಳೆಯ ಎಕ್ಸರೇ ಮಾಡಿ, "ಪಾದದ ಮೂಳೆಯಲ್ಲಿ ಸಣ್ಣ ಫ್ರ್ಯಾಕ್ಚರ್ ಆಗಿದೆ, ಶಸ್ತ್ರ ಚಿಕಿತ್ಸೆ ಏನೂ ಬೇಕಾಗಿಲ್ಲ, ಪ್ಲಾಸ್ಟರ್ ಹಾಕುತ್ತೇನೆ, ಕೆಲವು ದಿನ ವಿಶ್ರಾಂತಿ ತೆಗೆದುಕೊಂಡರೆ ಸಾಕು" ಎಂದು ಇಬ್ಬರನ್ನೇ ಬಿಟ್ಟು ಹೊರಟು ಹೋದನು. ಅವಳು ಅವನನ್ನೇ ದಿಟ್ಟಿಸಿ ನೋಡುತ್ತಾ,

"ರೀ ಆರು ತಿಂಗಳಲ್ಲಿ ಏನೆಲ್ಲಾ ಅನುಭವಿಸಿದೆ. ಒಂದೊಂದು ದಿನಾನೂ ಹದಿನೇಳು ವರ್ಷದ ನಮ್ಮ ದಾಂಪತ್ಯ ಜೀವನದಾಗ ನಡದ ಘಟನೆಗಳನ್ನ ಮೆಲಕು ಹಾಕಿದ್ನಿ. ಒಂದೊಂದು ಘಟನೆಯಲ್ಲಿ, ಸಿಟ್ಟಿನೊಳಗನು ಪ್ರೀತಿ ತೋರುಸುತ್ತಿದ್ದ ನಿಮ್ಮ ಮುಖದ ಚಹರೆಯನ್ನ ನೋಡಿದ್ನಿ. ಐಷಾರಾಮಕ್ಕಿಂತ ಆರಾಮ್ ಮುಖ್ಯ ಅಂತ ತಿಳಕೊಂಡಿದ್ದೀನಿ. ದಯವಿಟ್ಟು ನನ್ನನ್ನ ಒಮ್ಮೆ ಕ್ಷಮಿಸಿ ಬಿಡ್ರಿ" ಎಂದು ಅವನ ಬಿಸಿ ಅಪ್ಪಿಗೆಗಾಗಿ ತನ್ನೆರಡು ಕೈಗಳನ್ನು ಚಾಚಿದಳು.

ಚಾಚಿದ ಆ ಕೈಗಳ ತುಂಬಾ ಅಳಲು, ಪಶ್ಚಾತಾಪ, ಪರಿತಾಪ, ಸಾಕ್ಷಾತ್ಕಾರ ಎಲ್ಲ ಅಡಗಿವೆ ಎಂದೆನಿಸಿ, ಅವನು ಅವಳನ್ನೊಮ್ಮೆ ತನ್ನ ಒಳಗಣ್ಣುಗಳೊಂದಿಗೆ ದಿಟ್ಟಿಸಿ ನೋಡಿದ. ಅವಳ ಬಾಹ್ಯ ಸೌಂದರ್ಯ ಮಾಸಿದೆ ಎಂದೆನಿಸಿತಾದರೂ, ಅವಳ ಅಂತರಂಗದಲ್ಲಿನ ಸೌಂದರ್ಯ ಮಾತ್ರ ಕಣ್ಣು ಕುಕ್ಕುತ್ತಲಿತ್ತು.

"ಐ ಲವ್ ಯು" ಎಂದು ಗಟ್ಟಿಯಾಗಿ ಅವಳನ್ನು ತಬ್ಬಿಕೊಂಡನು. ಕವಲು ದಾರಿ ಒಂದಾದಾಗ ಕಾಣುವ ವಿಶಾಲ ರಸ್ತೆಯಂತೆ, ಗಟ್ಟಿಯಾಗಿ ಬೆಸೆದಿದ್ದ ಆ ಎರಡು ದೇಹಗಳು ಒಂದೇ ದೇಹದಂತೆ ಕಂಗೊಳಿಸತೊಡಗಿದ್ದವು. ಪಿಸು ಮಾತಿನಲ್ಲಿ, ಅವನು ಅವಳ ಕಿವಿಯಲ್ಲಿ ಉಸುರಿದ "ಕುಡ್ಲೆ ಬೀಚು ಈಗ ಭಾಳ ಛಲೋ ಆಗೈತಿ"

## ಕಾವ್ಯ ಸಂಪದ



**ಡಾ. ಮೃದುಲಾ ಎ. ಎಮ್.**
ವಿಭಾಗಿಯ ಸಂಪಾದಕರು



**ಡಾ. ನಿತ್ಯಾನಂದ ಸುಂಡವಾಳು**
ಮುಖ್ಯಸ್ಥರು, ಮಕ್ಕಳ ವಿಭಾಗ,
ಶ್ರೀ ಸಿದ್ಧಾರ್ಥ ವೈದ್ಯಕೀಯ
ಮಹಾವಿದ್ಯಾಲಯ, ನೆಲಮಂಗಲ

# ಬದುಕು–ಪ್ರಶ್ನೆ

ಬೇಸರವಾದರು
ಹೋಗುವುದೆಲ್ಲಿಗೇ
ಗೆಳತಿ ಗೆಳೆಯರ
ಮರೆಯುವುದೇ

ಕಷ್ಟವಾದರೂ
ಮಾಡಲೆಬೇಕು
ವೃತ್ತಿ ಬದುಕನು
ತೊರೆಯುವುದೇ

ಅನಿವಾರ್ಯವು
ಪ್ರೀತಿಸಬೇಕು
ಹೆಂಡತಿ ಮಕ್ಕಳ
ಬಿಡಬಹುದೇ

ಅಪ್ಪ ಅಮ್ಮ
ಜನ್ಮಕೆ ಕಾರಣ
ಮುಪ್ಪಾದಲ್ಲಿ
ತ್ಯಜಿಸುವುದೇ

ಬದುಕೆಂಬುದೆ
ಸಾವಿರ ಪ್ರಶ್ನೆ
ಜಟಿಲ ಸಂಕೀರ್ಣ
ಎನಬಹುದೇ

ಸ್ನೇಹ ಪ್ರೀತಿ
ಬದುಕಿನ ರೀತಿ
ಶೇಷಾಯುಷ್ಯವ
ಬೆಳಗಿಸದೇ



**ಡಾ. ಶಶಿಕಲಾ ಪುಟ್ಟಸ್ವಾಮಿ**
ನೇತ್ರ ತಜ್ಞೆ, ಕಾರಾಭೀ ನಿಗಮ
ಆಸ್ಪತ್ರೆ, ಪೀಣ್ಯ, ಬೆಂಗಳೂರು

# "ವಲಸೆ ಹೋಯಿತೆ....??!!'

ವಲಸೆ ಹೋಯಿತೆ ಚಿತ್ತ...?
ಚಿಂತೆಗಳ ಸಂತೆಯಲಿ ಅಲೆದಾಡುತ
ಚಿಂತನವಾಗಲು....
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು.

ವಲಸೆ ಹೋಯಿತೆ ಭಾವ...?
ಜಗದ ಜಂಜಾಟದಲಿ ಜೋಲಾಡುತ
ಸಜೀವವಾಗಲು.....
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು.

ವಲಸೆ ಹೋಯಿತೆ ಆಲೋಚನೆ...?
ಸಂಸಾರದ ಅಪಸ್ವರದಲಿ ಏರಿಳಿಯುತ
ಸುಸ್ವರವಾಗಲು.....
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು.

ವಲಸೆ ಹೋಯಿತೆ ಸಮಯ...?
ಬಿಡುವಿರದ ಬದುಕಿನ ಬಯಲಲಿ
ಬಡಿದಾಡಲು.......
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು.

ಚಿತ್ತಶಾಂತವಾಗಿ ಭಾವ ಲಹರಿಯಾಗಿ
ಆಲೋಚನೆ ನಿರಾಳವಾಗಲು...
ಸಮಯದ ಹಂಗು ತೊರೆದು ಕವಿತೆ
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು,
ಮರಳಿ ಬರುವವರೆಗೂ ಸ್ವಲ್ಪ ಕಾದುಬಿಡು.

## ವಿದ್ಯಾರ್ಥಿ ಲೋಕ

# ಮುಗಿಲ ಕನಸು



**ಡಾ. ವಿನಯ ಶ್ರೀನಿವಾಸ**
ವಿಭಾಗೀಯ ಸಂಪಾದಕರು



**ವರ್ಷಿತಾ ಎಂ ಎಂ**
ಅಂತಿಮ ವರ್ಷದ ಎಂ ಬಿ ಬಿ ಎಸ್, ಬಸವೇಶ್ವರ ವೈದ್ಯಕೀಯ ವಿಜ್ಞಾನ ಸಂಸ್ಥೆ ಚಿತ್ರದುರ್ಗ

ದೀಪೂ.... ಟೈಮ್ ಆಯ್ತು ಬೇಗ ಬಾ.... ಪರೀಕ್ಷೆ ಬರಿಯೇಕೆ ಶಕ್ತಿ ಬೇಕು ಅಲ್ವಾ ? ತಿಂಡಿ ತಿನ್ನು ಬಾ....

ದೀಪು : ಬಂದೆ ಅಮ್ಮ.... ಕೊನೇ ಪ್ರಶ್ನೆ ಇದೆ.... ಎರಡು ನಿಮಿಷ ಬಂದೆ ಬಿಟ್ಟೆ

ಅಮ್ಮ : ನಾನು ಬಂದೆ ನೋಡು.... ತಗೋ ಈ ಜ್ಯೂಸ್ ಕುಡಿ.... ಸ್ವಲ್ಪ ಆದ್ರು ಶಕ್ತಿ ಬರುತ್ತೆ

ದೀಪು : ಸರಿ ಅಮ್ಮ, ಸಮಯ ಆಯ್ತು.... ನಾನು ಹೊರಡುತ್ತೇನೆ... ಬೈ ಬೈ....

ಅಮ್ಮ : ಆಲ್ ದಿ ಬೆಸ್ಟ್ ಪರೀಕ್ಷೆ ಚೆನ್ನಾಗಿ ಬರಿ, ಏನು ಹೆದರಬೇಡ.... ಸರಿನಾ ? ಬೈ....

ನೋಡುದ್ರಲ, ಇದರು ದೀಪು ಮತ್ತು ಅಮ್ಮ... ಎಸ್.ಎಸ್.ಎಲ್.ಸಿ. ಪರೀಕ್ಷೆ ಬರಿಯೋಕೆ ಹೋಗ್ತಿರೋ ದೀಪುಗಿಂತ ಅವ್ರ ಅಮ್ಮಂಗೆ ಭಯ ಜಾಸ್ತಿ. ಇನ್ನು ಅಪ್ಪ ಅಂತು ಬೆಳಿಗ್ಗೆ ಬೇಗ ಎದ್ದು ಅವಳ ಶಾಲೆಯ ಸಮವಸ್ತ್ರ ಇಸ್ತ್ರಿ ಮಾಡಿ ಮಾಡ್ಸಿ, ಸ್ಕೂಟರ್ ಚಾಲು ಮಾಡಿ ನನ್ನನ್ನು ಕಾಯ್ತಾಯಿದ್ರು, ಐದನೇ, ಆರನೇ ಕ್ಲಾಸಲ್ಲಿ, ಹೈಸ್ಕೂಲಿಗೆ ಬಾ.. ಜೀವನದ ಒಂದು ಮುಖ್ಯ ಗಟ್ಟ ಅಂತ ಹೇಳ್ತಿದ್ರು.... ಆಮೇಲೆ ಎಸ್.ಎಸ್.ಎಲ್.ಸಿ. ಆಮೇಲೆ ಪಿ.ಯು.ಸಿ.... ಹೀಗೆ ಪ್ರತಿ ವರ್ಷ ಒಂದೊಂದು ಕೇಳಿ ಕೇಳಿ ಸುಸ್ತಾದ ದೀಪುವಿನ ಅಂಕಗಳಂತು.... ಅಬ್ಬಾ.... ಹುಬ್ಬೇರಿಸುವಂತಹದ್ದೇ ಇದ್ದವು. ಶ್ರಮಪಟ್ಟು ಹಗಲು ರಾತ್ರಿ ಬೆವರು ಸುರಿಸುವ ಅಪ್ಪ, ಅಪ್ಪನಿಗೆ ಹೆಗಲಿಗೆ ಹೆಗಲಂತೆ ನಡೆಯುತ್ತಾ ಬಂದ ಅಮ್ಮ ಒಂದು ಮದ್ಯಮ ವರ್ಗದ ಚಿಕ್ಕ ಕುಟುಂಬವಿರುವ ದೀಪು ಅಪ್ಪ ಅಮ್ಮನ ಅಚ್ಚುಮೆಚ್ಚು ಆ ಗೊಂಬೆ ಬೇಕು, ಈ ಕಾರು ಬೇಕು.... ಎಂದು ಹಟ ಮಾಡೋ ವಯಸ್ಸಲ್ಲಿ ಅಮ್ಮನೊಂದಿಗೆ ಒಂದು ದವಾಖಾನೆಗೆ ಹೋದಾಗ, ಅಲ್ಲಿ ಕಂಡಿದ್ದು ಒಂದು ಹೃದಯದ ಚಿತ್ರ... ಯಾರಿಗೂ ಗೊತ್ತಿರಲಿಲ್ಲ ಆ ದಿನ ಆ ಕ್ಷಣ ಅವಳ ಜೀವನವನ್ನೇ ಬದಲಿಸುತ್ತದೆ ಎಂದು..

ಇಜಿ ಯುಗ ಅದು ತನ್ನ ಪುಟ್ಟ ಕೈಯಿಂದ “ಹಾರ್ಟ್ ಡಾಕ್ಟರ್” ಎಂದು ಅಮ್ಮನ ಪೋನಿನ ಅಂತರ್ಜಾಲದಲ್ಲಿ ಹುಡುಕಿದ ದೀಪುವಿಗೆ ಕಂಡಿದ್ದು ಕಾರ್ಡಿಯಾಲಜಿಸ್ಟ್ ಎಂಬ ಪದ ಹೇಳಲು ಬರದಿದ್ದರು ಅವಳ ಮನಸ್ಸಿನಲ್ಲಿ ಅಚ್ಚು ಆಗೆ ಬಿಡ್ತು. ಅಂದಿನಿಂದ ಇಂದಿನವರೆಗೂ ತನ್ನ ಗುರಿಯ ಆಚೆ ಇಚೆಗೆ ಕಣ್ಣು ಹಾಯಿಸಲೇ ಇಲ್ಲ. ಹೆಣ್ಣು ಮಗು ಆಗಿದ್ದಕ್ಕೆ ಇಡೀ ಆಸ್ಪತ್ರೆಗೆ ಸಿಹಿ ಹಂಚಿದ್ದ ಅಪ್ಪನಿಗೆ, ಅವಳು ಲಕ್ಷ್ಮಿಯ ರೂಪ. “ನೀನೇನಾದರು ಮಾಡು ಮಗಳೆ, ನಾವು ಸದಾ ನಿನ್ನ ಜೊತೆ ಇರುತ್ತೇವೆ” ಎಂದು ಬೆನ್ನು ತಟ್ಟಿ ಸುಖವನ್ನೆಲ್ಲಾ ಅವಳಿಗೆಂದೇ ಮುಡಿಪಾಗಿಟ್ಟರು. ಅಷ್ಟೇ ಶ್ರದ್ಧೆ, ಗೌರವದಿಂದ ತನ್ನ ಕನಸು, ತನ್ನ



ತಂದೆ – ತಾಯಿಯ ಕನಸ್ಸನ್ನು ಈಡೇರಿಸಲು ಪಣ ತೊಟ್ಟಳು ನಮ್ಮ ದೀಪು.

ದ್ವಿತಿಯ ಪಿ.ಯು.ಸಿ. ಪರೀಕ್ಷೆ ಇನ್ನೇನು ಮುಗಿಯಬೇಕು, ಒಂದೆರಡು ತಿಂಗಳಲ್ಲಿ ನೀಟ್ ಪರೀಕ್ಷೆಯ ಹುಮ್ಮಸ್ಸಿನಲ್ಲಿದ್ದರು ಎಲ್ಲರೂ. ಎಲ್ಲಿಂದ ವಕ್ಕರಿಸಿತೋ, ಏನೋ... ಬಂತೊಂದು ಮಾರಿ.... ಕೊರೋನಾ, ಲಾಕ್ ಡೌನ್.... ಮನುಜ ಕುಲದ ಮೇಲೆ ತನ್ನ ಕೆಟ್ಟ ಛಾಯೆಯನ್ನು ಭೇದ ಭಾವವಿಲ್ಲದೆ ತೊರಿ ಬಿಡ್ತು. "ಸರ್ಕಾರಿ ಕಾಲೇಜಿನಲ್ಲಿ ಸೀಟ್ ಸಿಕ್ಕೆ ಸಿಗುತ್ತೆ" ಅನ್ನೊ ಅಷ್ಟು ವಿಶ್ವಾಸವಿದ್ದ ದೀಪುವಿಗೆ ಸಿಕ್ಕಿದ್ದು ಖಾಸಗಿ ವೈದ್ಯಕೀಯ ಕಾಲೇಜಿನ ಸರ್ಕಾರಿ ಸೀಟು, ಮುಗಿಲೆತ್ತರದ ಕನಸೇನೋ ನೆನಸಾಯ್ತು ಅನ್ನುವ ಖುಷಿ ಒಂದ್ಕಡೆ ಆದ್ರೆ, ಮದ್ಯಮ ವರ್ಗದ ಪರಿಸ್ಥಿತಿ ಇನ್ನೊಂದು ಕಡೆ. ಆದರೆ, ಇದು ನಮ್ಮ ದೀಪು.. ಇಂತ ತಂದೆ ತಾಯಿಯನ್ನು ಪಡೆಯಲು ನೂರಾರು ಜನ್ಮದ ಪುಣ್ಯ ಮಾಡಿರುವೆ ಎಂಬ ಅವಳ ನಂಬಿಕೆ ಸುಳ್ಳಾಗಲು ಅವರೆಂದು ಬಿಡುವುದಿಲ್ಲ. ತಮ್ಮ ೩೫ – ೪೦ ವರ್ಷಗಳ ಶ್ರಮ ಹನಿ – ಹನಿಯಂತೆ ಕೂಡಿಟ್ಟ ಎಲ್ಲಾ ಹಣವನ್ನು "ನಮ್ಮ ಮಗಳೇ ನಮ್ಮ ಆಸ್ತಿ" ಎಂದು ಕಾಲೇಜಿಗೆ ಸೇರಿಸಿದರು.

ಅಪ್ಪ, ಸಿಹಿ ಹಂಚುವ ಅವಕಾಶವನ್ನು ಎಂದೂ ಬಿಡುವುದಿಲ್ಲ... ಅಲ್ಲವೇ? "ನನ್ನ ಮಗಳು ಡಾಕ್ಟರ್ ಓದ್ತಿದ್ದಾಳೆ" ಎಂದು ಪ್ರತಿಬಾರಿ ಹೇಳುವಾಗ, ಮೊದಲ ದಿನ ದೀಪುವನ್ನು ಬಿಳಿ ಕೋಟ್‌ನಲ್ಲಿ ನೋಡಿದಾಗ ಇದ್ದ ಹೆಮ್ಮೆಯೇ ಕಾಣುತ್ತದೆ. ಇನ್ನೇನು ಕೆಲ ವರ್ಷಗಳಲ್ಲಿ ದೀಪು ಡಾಕ್ಟರ್ ಆಗ್ತಾಳೆ. ಕಾರ್ಡಿಯಾಲಜಿಸ್ಟ್ ಆಗ್ತಾಳೋ ಇಲ್ವೋ ಕಾದು ನೊಡ್ಬೇಕು. "ವೈದ್ಯೋ ನಾರಾಯಣೋ ಹರಿಃ " ಎಂಬಂತೆ ವೈದ್ಯ ದೇವರಿಗೆ ಸಮಾನವೆಂದು ಹೇಳುತ್ತಾರೆ. ಎಷ್ಟೆಲ್ಲಾ ಆಸೆ ಕನಸು ಹೊತ್ತು ಬಂದಂತ ವೈದ್ಯರ ಮೇಲಿನ ಹಲ್ಲೆ, ಧೋರಣೆ, ಅತ್ಯಾಚಾರ, ಮಾನವ ಕುಲಕ್ಕೆ ಅವಮಾನ. ಒಂದು ಅಳಿಸದಂತಹ ಕಪ್ಪು ಚುಕ್ಕೆ. ಸಾವಿನ ಅಂಚಿಗೆ ಹೋಗುವ ಹಲವಾರು ರೋಗಿಗಳನ್ನು ರಕ್ಷಿಸುವ ವೈದ್ಯನಿಗೆ ರಕ್ಷಣೆಯ ಅವಶ್ಯಕತೆಯಿದೆಯೆಂದರೆ ನಮ್ಮ ಸಮಾಜದ ಹಾದಿಯನ್ನು ನಾವೇ ಊಹಿಸುಕೊಳ್ಳಬಹುದು. ಶ್ರೇಷ್ಠವಾದ ವೃತ್ತಿಗಳಲ್ಲೊಂದಾದ ವೈದ್ಯ ಧರ್ಮಕ್ಕೆ ಅದರದೆ ಆದಂತಹ ಗೌರವ ಸುರಕ್ಷತೆ ಬೆಲೆ ಉಳಿಯಬೇಕಾದುದು ಅತ್ಯಗತ್ಯವಾಗಿದೆ. •

---

# ಓ ಮಾನವ ಎತ್ತ ಸಾಗುತ್ತಿರುವುದು ನಿನ್ನ ಚಿತ್ತ



**ಸೃಜನ ಆರ್.**
ಅಂತಿಮ
ಎಂ.ಬಿ.ಬಿ.ಎಸ್.
ವಿದ್ಯಾರ್ಥಿನಿ
ಬಸವೇಶ್ವರ
ವೈದ್ಯಕೀಯ
ವಿಜ್ಞಾನಗಳ ಸಂಸ್ಥೆ
ಚಿತ್ರದುರ್ಗ

ಓ ಮಾನವ ಎತ್ತ ಸಾಗುತ್ತಿರುವುದು ನಿನ್ನ ಚಿತ್ತ
ಎಲ್ಲದಕ್ಕೂ ತಲೆದೂಗುವೆ ಅತ್ತ ಇತ್ತ

ಹೊರಗೆ ಶೃಂಗಾರದ ಮುಖ ತೋರುವೆ
ಮನದೊಳಗಿನ ರಣರಂಗವ ಮರೆತೇ ಬಿಡುವೆ

ಮೂರು ಹೊತ್ತಿನ ಅನ್ನಕ್ಕಾಗಿ ದುಡಿಯಬೇಕೆನ್ನುವೆ
ಎಷ್ಟು ದುಡಿದರೂ ನಿನಗೆ ನೆಮ್ಮದಿಯೇ ಸಿಗಲಿಲ್ಲವೇ?

ಆಸ್ತಿ ಅಂತಸ್ತಿನ ಹಿಂದೆ ಓಡುವೆ
ಜನ್ಮವಿತ್ತವರ ಅಂತಸ್ತೇ ನೀನೆಂದು ಮರೆತು ಬಿಡುವೆ

ಬಾಹ್ಯಾಕಾಶದಲ್ಲಿ ಹೊಕ್ಕು ಅಲ್ಲೇನಿದೆ ಎಂದು ತಿಳದುಕೊಳ್ಳುವ ಕುತೂಹಲ
ನಿನ್ನವರ ಮನದೊಳಗೇನಿರುವುದೆಂದು ತಿಳಿಯುವಾಗ ಏಕಿರುವುದಿಲ್ಲ?

ಕ್ಷೀಣಿಸಿದೆ ನಿನ್ನ ಮನುಜತ್ವ
ಕರುಣೆ, ಪ್ರೀತಿ, ವಾತ್ಸಲ್ಯವ ನೀನೇ ಮರೆತವ
ಮೈಲುಗಟ್ಟಲೆ ಸಾಗಿ ಏನನ್ನೋ ಹುಡುಕುವ ನೀನು
ಹುಡುಕಿಕೋ ನಿನ್ನೊಳಗೆ ಕಳೆದುಹೋದ ನಿನ್ನ ತನವನ್ನು

ಬಾಳೆಂಬ ದೋಣಿಯಲ್ಲಿ ನಾವಿಕನೂ ನೀನೇ
ಎತ್ತ ಸಾಗಬೇಕೆಂಬ ಚಿತ್ತವೂ ನಿನ್ನಲ್ಲೇ.



**ಡಾ. ಕಿರಣ ಪೇಟಕರ್**
ಸುರೂಪ ಶಸ್ತ್ರಚಿಕಿತ್ಸಕರು
ಬೆಂಗಳೂರು

## ಶಬ್ದ ಸಂಪದ

# ಜಳಕ = ಸ್ನಾನ



**ಡಾ. ಸುಮಾ ಗುಡಿ**
ವಿಭಾಗೀಯ ಸಂಪಾದಕರು

"..ಲಕ್ಸು ಸೋಪು ಹಾಕಿ ಜಳಕಾ ಮಾಡಿ ಜಸ್ಟ್ ಬಂದೇನಿ.." ಎಂಬ ಪೋಲಿತನದ, ಆಂಗ್ಲಮಿಶ್ರಿತ ಸಿನೆಮಾ ಹಾಡಿನಲ್ಲೂ ಕೂಡ ಅಪ್ಯಾಯವೆನಿಸಿದ ಪದ 'ಜಳಕ ಮಾಡುವುದು'. ಕಾರಣ, ಇದು ಗ್ರಾಮೀಣ ಪರಿಸರದಲ್ಲಿಯೇ ಹೆಚ್ಚು ಉಪಯೋಗದಲ್ಲಿದ್ದ/ ಇರುವ ಶಬ್ದ. ಅದೇ ಕಾರಣಕ್ಕೇ ಗೀತರಚನಾಕಾರನು ಹಳ್ಳಿ ಹುಡುಗಿಯ ಬಾಯಲ್ಲಿ ಈ ಪದವನ್ನು ಹೇಳಿಸಿರಲಿಕ್ಕೂ ಸಾಕು.

ಶಬ್ದವ್ಯುತ್ಪತ್ತಿ: ಅಧಿಕೃತ ಮೂಲಗಳಿಂದ ಶಬ್ದಮೂಲ ಸಿಗದೇ ಹೋದರೂ, ಚರ್ಚೆಗಳೂ, ತರ್ಕಗಳೂ ಸಾಕಷ್ಟಿವೆ. ಗ್ರಾಮ್ಯ ಪ್ರಯೋಗ ಮತ್ತು ಭೌಗೋಳಿಕ ಮಿತಿಯೊಳಗೇ ಪ್ರಚಲಿತವಾಗಿರುವುದನ್ನು ಗಮನಿಸಿದರೆ, ಇದು ಪಕ್ಕಾ ಈ ನೆಲದ ಪದವೇ ಆಗಿರಬೇಕು. ಕನ್ನಡದಲ್ಲಿ ಪ್ರಚಲಿತವಿರುವ 'ಜಳಜಳ' ಶಬ್ದದ ಜೊತೆಗೆ 'ಜಳಕ'ವೂ ಮೈದಳೆದಿರಬಹುದು. 'ಕನಕನ ಅಂಗಿ ಝಳಝಳ; ಕಮಲಳ ಲಂಗ ಥಳಥಳ' ನೆನಪಾಯಿತೇ? ಅದಕೆಂದೇ ಇದೇ ರೀತಿಯ ಪ್ರಯೋಗವಿರುವ ತೆಲುಗಿನಲ್ಲಿಯೂ 'ಜಳಕ' ಪದವು ಯಥಾವತ್ತಾಗಿಯೇ ಇದೆ.

ಅಲ್ಲದೇ, 'ಳ' ಅಕ್ಷರವು ಮಹಾರಾಷ್ಟ್ರದಿಂದ ಉತ್ತರಕ್ಕೆ ಪ್ರಯೋಗದಲ್ಲಿಯೇ ಇರದ ಕಾರಣ, ಅಲ್ಲಿಂದ ಬಂದಿರಲಾರದು.

ಕೆಲವರು ಸಂಸ್ಕೃತದ 'ಜಲ' ಶಬ್ದದಿಂದ ಜಳಕ ಹುಟ್ಟಿರಬಹುದು ಎನ್ನುತ್ತಾರೆ. ಹಾಗಿದ್ದಲ್ಲಿ ಇದು ಕೇವಲ ದಕ್ಷಿಣ ಭಾರತೀಯ ಭಾಷೆಗಳಲ್ಲಿ ಮಾತ್ರ ಏಕೆ ಇರುತ್ತಿತ್ತು? ಅನ್ಯತ್ರ ಶುದ್ಧ ಸಂಸ್ಕೃತದ 'ಸ್ನಾನ'ವೋ, ಉತ್ತರ ಭಾರತದ ಗ್ರಾಮೀಣ ಉಪಯೋಗವಾದ 'ಅಸನಾನಾ' (..ಪ್ರಾತ ಕರೇ ಅಸನಾನಾ. ಕಬೀರದಾಸ) ಅಥವಾ ಹಿಂದಿಯ 'ನಹಾನಾ' ಹೀಗೆಲ್ಲ ಉಪಯೋಗದಲ್ಲಿವೆ. ಅರಬಿಕ್ ಸಂಪರ್ಕವಿದ್ದಲ್ಲಿ 'ಹಮ್ಮಾಮ್' ಪದ ಬಳಕೆಯಲ್ಲಿದೆ. –ಈ ಶಬ್ದಗಳಿಗೆ 'ಜಳಕ' ದ ಹೋಲಿಕೆಯಿಲ್ಲ. ಅಷ್ಟೇ ಅಲ್ಲದೇ ನಮ್ಮಲ್ಲಿ ಕೂಡ ಗ್ರಾಂಥಿಕವಾಗಿ ಮಾತನಾಡುವಾಗ ನಾವೂ 'ಸ್ನಾನ' ಶಬ್ದವನ್ನೇ ಉಪಯೋಗಿಸುವವರು. ಅದಕ್ಕೇ 'ಜಳಕ'ವು ಗ್ರಾಮೀಣ ಪ್ರಯೋಗಮಾತ್ರವಾಗುಳಿದು ಅಪ್ಯಾಯಮಾನವಾಗಿರುವುದು.

ಸಮಾನಾಂತರ ಪದಗಳು: ಪಟ್ಟಣದವರಿಗೆ ಸ್ನಾನ, ಷವರು ಇತ್ಯಾದಿ. ಅರೆ–ಗ್ರಾಮ್ಯ ಉಪಯೋಗದಲ್ಲಿ ಮೈತೊಳೆಯುವುದು. ಅದರಲ್ಲೂ, ಮನುಷ್ಯರದಾ ಅಥವಾ ಜಾನುವಾರುಗಳದಾ ಎಂಬುವ ವ್ಯತ್ಯಾಸ ಮಾಡದ ಸಂದರ್ಭಗಳಲ್ಲಿ. ಏಕೆಂದರೆ "ಕಾಳಿಂಗ–ಮಾನಿಂಗರಿಗೆ ಇವತ್ತು ಕೆರಿವೊಳಗ 'ಸ್ನಾನ' ಮಾಡಿಸಿಕೊಂಡು ಹೊಡಕಂಬತ್ತೀನಿ" ಅನ್ನುವುದು ಸ್ವಲ್ಪ ಅತಿ ಆಗುವುದಲ್ಲವೇ?

ಕರಾವಳಿಯ ಕಡೆ 'ಮೀಯುವುದು', 'ಹುಯ್ಯುವುದು/ಹುಯ್ದುಕೊಳ್ಳುವುದು' ಅಂತಾರೆ. ಅದು ಅಪ್ಪಟ ಬಯಲುಸೀಮೆಗೆ ಬರುವಷ್ಟರಲ್ಲಿ 'ಹುಯ್ಕೊಳ್ಳೋದು/ಹೊಯ್ಕೊಳ್ಳೋದು' ಆಗಿ ಮೈಸೂರಿಂದ ಬಂದ ಅಳಿಯನಿಗೆ ಕಲಬುರಗಿಯಲ್ಲಿ ಆದ ಫಜೀತಿಯ ಹಾಸ್ಯವನ್ನು ಗಂಗಾವತಿಯ ಪ್ರಾಣೇಶರ ಮಾತಲ್ಲೇ ಕೇಳುವಂಥದ್ದು.

ಏನೇ ಇರಲಿ, ಚುಮುಗುಟ್ಟುವ ಚಳಿಗಾಲದಲ್ಲಿ 'ಜಳಕ'ದ ಚರ್ಚೆ ಮಾಡಿದರೆ ಸಾಕು, ಅವತ್ತು 'ಜಳಕಾ' ಮಾಡಲೇಬೇಕಿಲ್ಲ ಎಂಬ ವಾದ ಮಾತ್ರ ಆಧಾರರಹಿತ ಎಂದೆನಿಸುತ್ತದೆ.

ಪದಬಂಧ


# ಪದಬಂಧ – ೧೯



ಡಾ. ರಮೇಶ್ ಬಾಬು
ನಿವೃತ್ತ ಪ್ರಾಧ್ಯಾಪಕರು
ಹುಬ್ಬಳ್ಳಿ



ಡಾ. ಸುಮಾ ಗುಡಿ
ವಿಭಾಗೀಯ
ಸಂಪಾದಕರು




**ಸುಳಿವುಗಳು:**

ಎಡದಿಂದ ಬಲಕ್ಕೆ:

೧. _ _ _ _ ಕಾರಂತ, ಶ್ರೇಷ್ಠ ಕಾದಂಬರಿಕಾರರು (೪)

೩. ಸೋದರಿ (೩)

೫. ಅವನು ಈ ದೇಶದಲ್ಲಿ ವಾಸಿಸುವುದಿಲ್ಲ (೪)

೭. ಕೆಂಪು ಬಣ್ಣ, ಒಂದು ಸಂವತ್ಸರದ ಹೆಸರು (೩)

೮. ಹಿರಿಮೆ (೩)

೯. ಒಡೆಯ (೪)

ಮೇಲಿನಿಂದ ಕೆಳಕ್ಕೆ:

೧.ಈಶ್ವರನ ದೇಗುಲ (೪)

೨. ನಾಳೆ (೪) ೩. ಪೂರ್ತಿಯಾಗಿ (೪)

೪. ನಿರ್ಧಾರಿತ (೪)

೫. ಈ ದೇಶದ ರಾಜಧಾನಿ ವಾಷಿಂಗ್ಟನ್ (೪)

೬. ಈ ಪ್ರಸಂಗ ನಾಟಕೀಯವಾಗಿದೆ ಎನ್ನಬಹುದು ಇಲ್ಲವೇ _ _ _ _ ವಾಗಿದೆ ಎನ್ನಬಹುದು(೪)

೧೧. ಬೆಳ್ಳಿಯ (೩)
೧೩. ಕಲಾವಂತಿಕೆಯಿಂದ ಕೂಡಿದ (೪)
೧೫. ನುರಿತ (೪)
೧೭. ಮಗನಿಂದ ಹಣ _ _ _ ಎಂದು ಪತ್ರ ಬಂದಿದೆ (೩)
೧೯. ಸಾಮಾಗ್ರಿ (೪)
೨೧. ಚಿಕ್ಕ ಮಕ್ಕಳ ಲೇಖನಿ (೩)
೨೨. ವಾಯು (೩)
೨೩. ಮರುಕ (೪)
೨೫. ಗಂಡು ಮೇಕೆ (೩)
೨೭. ತಾಜಾಬೆಣ್ಣೆ (೪)
೨೯. ನೂರುವರ್ಷದ ಅವಧಿ (೪)
೩೧. ಹೇಗೆ ನೋಡಿದರೂ ಬಂಗಾರವೇ (೩)
೩೩. ಈಗಿನ ಮಾನವರ _ _ _ _ ಆಯುರ್ಮಾನ (೪)
೩೫. ಇದೊಂದು ಒಳ್ಳೆಯ _ _ _ (೩)
೩೬. ಮಂಕುಬುದ್ಧಿಯವ (೩)
೩೭. ತೆಂಗಿನಕಾಯಿಗೆ ಹೆಸರಾದ ಊರು (೪)
೩೮. ಆರತಿ ಮಾಡಲು ಇದನ್ನು ಬಳಕೆ ಮಾಡುತ್ತಾರೆ (೩)
೩೯. ಮನ್ಮಥನನ್ನು ಹೀಗೂ ಕರೆಯಬಹುದು (೪)

೧೦. ಕೃತಕ ತಳಿಯಲ್ಲ (೩)
೧೨. ಬಟ್ಟೆಬರೆ (೩)
೧೪. ವಯಸ್ಸಿಗೆ ಬಂದ ಎಮ್ಮೆ ಅಥವಾ ಹಸು (೩)
೧೫. ಪಾರಿತೋಷಕವಾಗಿ ನೀಡುವ ಬಿಲ್ಲೆ (೩)
೧೬. _ _ _ ನ ಕಥೆ, ತೇಜಸ್ವಿಯವರ ಕತೆ (೩)
೧೭. ಮೋಸ (೩)
೧೮. ಅಂದಾಜು (೩)
೧೯. ಕೆಳಕ್ಕೆ ಬೀಳುವುದು (೩)
೨೦. ಕೊರತೆ (೩)
೨೪. ಶೂನ್ಯ ಸ್ಥಿತಿ, ಗಾಳಿಯಿಲ್ಲದಿರುವುದು (೩)
೨೬. ಕ್ಲಿಷ್ಟವಾದ (೩)
೨೮. ಆಸಕ್ತಿ ಮೂಡಿಸದಂತಹ (೩)
೨೯. ಜೋಗದ ಜಲಪಾತದ ನದಿ (೪)
೩೦. ಈ ಊರಿನಲ್ಲಿ ಬರೀ ನವಿಲುಗಳಿವೆಯೆ? (೪)
೩೧. ದಮನಕನ ಮಿತ್ರ (೪)
೩೨. ಕತೆ ಕಟ್ಟುವವನು (೪)
೩೩. ನಮ್ಮನ್ನಾಳುವ ವ್ಯವಸ್ಥೆ (೪)
೩೪. ಸೋಡಿ ಎಂದೂ ಹೇಳುತ್ತಾರೆ (೪)

**ಕಳೆದ ಪದಬಂಧ ೧೮ರ ಸರಿಯುತ್ತರಗಳು:**

ಎಡದಿಂದ ಬಲಕ್ಕೆ: ೧. ದಿಗ್ಬಂದನ ೩. ದಾನವ ೫. ಅಲಂಕೃತೆ ೭. ರೋದನ ೮. ರಕ್ಕಸಿ ೯. ರಘೋತ್ತಮ ೧೧. ರಸನ ೧೩. ರೆಪ್ಪೆತೆರೆ ೧೫. ಮಣೆಹಾಕು ೧೭. ಶಕುನಿ ೧೯. ಸದಾರಮೆ ೨೧. ವಜೀರ ೨೨. ರಜಕ ೨೩. ಗುರುತರ ೨೫. ಭರತ ೨೭. ಲಗ್ಗೆಹಾಕು ೨೯. ಕಾಲುಭಾಗ ೩೧. ಹಾಸನ ೩೩. ವಿಶಾಲತೆ ೩೫. ಮಹಲು ೩೬. ವಕ್ತಾರ ೩೭. ಕಮಾಯಿಸು ೩೮. ನುರಿತ ೩೯. ಸುಮ್ಮನಿರು

ಮೇಲಿನಿಂದ ಕೆಳಕ್ಕೆ: ೧.ದಿನಕರ ೨. ನರೋತ್ತಮ ೩. ದಾನಶೂರ ೪. ವರಮಾನ ೫. ಅಸಿಧಾರೆ ೬. ತೆರೆಮರೆ ೧೦. ಘೋಷಣೆ ೧೨. ಸರಕು ೧೪. ತೆಪರ ೧೫. ಮರುಗು ೧೬. ಕುವರ ೧೭. ಶರಭ ೧೮. ನಿರತ ೧೯. ಸಕಲ ೨೦. ಮೆಲುಕು ೨೪. ರುಮಾಲು ೨೬. ರಭಸ ೨೮. ಹಾಗಲ ೨೯. ಕಾರಣಿಕ ೩೦. ಗಮನಿಸು ೩೧. ಹಾಲುಜೇನು ೩೨. ನವಜಾತ ೩೩. ವಿರಮಿಸು ೩೪. ತೆಪ್ಪಗಿರು

---

೫ನೇ ಪುಟದಿಂದ...

ಕನ್ನಡ ಬಳಗವನ್ನ ಸೃಜಿಸುವತ್ತ ಯೋಚನೆ ಮಾಡಲಾಗಿದೆ. ಹಾಗೆಯೇ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ವತಿಯಿಂದ ಎಲ್ಲಾ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಕನ್ನಡ ಸಂಘಗಳನ್ನು ಸ್ಥಾಪಿಸಿ, ಸಕ್ರಿಯಗೊಳಿಸುವತ್ತ ಆಲೋಚನೆ ಹಾಗು ಕ್ರಿಯೆ ಪ್ರಾರಂಭವಾಗಿದೆ. ಇನ್ನು ಯಾವುದಾದರೂ ಆರೋಗ್ಯ ಹಾಗು ಅರ್ಥಪೂರ್ಣ ಆಲೋಚನೆ ಇದ್ದಲ್ಲಿ ಬಳಗದಲ್ಲಿ ಹಂಚಿಕೊಳ್ಳಲು ತಮ್ಮಲ್ಲಿ ಕಳಕಳಿಯ ಮನವಿ.

"ಆರಂಭಮ್ ಉತ್ತಮ ಜನಾಃ ನ ಪರಿತ್ಯಜಂತಿ"

ಸಂಸ್ಕೃತದ ಈ ನಾಣ್ಣುಡಿಯಂತೆ ಉತ್ತಮರಾದ ಜನರು ಆರಂಭಿಸಿದ ಕೆಲಸವನ್ನು ಮಧ್ಯದಲ್ಲಿಯೇ ಕೈ ಬಿಡಬಾರದು. ಕನ್ನಡಕ್ಕಾಗಿ ಆರಂಭವಾದ ಈ ಬಳಗ ಏಕತಾನತೆಯಿಂದ ನಿಂತ ನೀರಂತೆ ಆಗದೆ ಹೊಸ ಆಲೋಚನೆಗಳು ಹಾಗು ಹೊಸ ಪ್ರತಿಭೆಗಳಿಂದ ಬಳಗದ ಕಾರ್ಯವ್ಯಾಪ್ತಿ ವಿಸ್ತಾರವಾಗುವಂತೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಉಳಿಸಿ ಎನ್ನುವುದು ಕ್ಲೀಷೆಯಾಗದೆ ಅಸ್ಮಿತೆಯಾಗಬೇಕೆನ್ನುವುದೇ ನಮ್ಮೆಲ್ಲರ ಆಶಯವಾಗಿರಲಿ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ... ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ.... ●

ವರದಿ

# ಕನ್ನಡ ಚಟುವಟಿಕೆಗಳ ವರದಿ



**ಡಾ.ಶುಭ್ರತಾ ಕೆ. ಎಸ್.**
ಲೇಖಕರು ಹಾಗೂ
ವಿಭಾಗೀಯ ಸಂಪಾದಕರು

- ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಶಾಖೆಯು ದಿನಾಂಕ ೨೪-೧೧-೨೦೨೪ ರಂದು ಮಕ್ಕಳ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸುಬ್ಬಯ್ಯ ವೈದ್ಯಕೀಯ ಕಾಲೇಜಿನ ಡೀನ್ ಡಾ. ವಿನಾಯಕ ಜಿ ಪೋಷಕರು ಮಕ್ಕಳೊಡನೆ ಗುಣಮಟ್ಟದ ಸಮಯವನ್ನು ಕಳೆಯುವುದು ಬಹಳ ಮುಖ್ಯ ಎಂದರು. ಶ್ರೀಮತಿ ಶ್ರೀರಂಜಿನಿ ದತ್ತಾತ್ರಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ವೈದ್ಯರ ಮಕ್ಕಳನ್ನು ವಿವಿಧ ಆಟೋಟ ಹಾಗೂ ಚಟುವಟಿಕೆಗಳಲ್ಲಿ ತೊಡಗಿಸಿದರು. ಕಾರ್ಯಕ್ರಮದಲ್ಲಿ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಶ್ರೀಧರ ಎಸ್, ಕಾರ್ಯದರ್ಶಿ ಡಾ. ವಿನಯ ಶ್ರೀನಿವಾಸ್, ಮಹಿಳಾ ಘಟಕದ ಅಧ್ಯಕ್ಷೆ ಡಾ. ವಿಶಾಲಾಕ್ಷಿ ಮೂಗಿ ಉಪಸ್ಥಿತರಿದ್ದರು.
- ದಿನಾಂಕ ೨೨-೧೧-೨೪ ರಂದು ಶಿವಮೊಗ್ಗದ ಮಿತ್ರೆ ಮಹಿಳಾ ಸಂಘ ಆಯೋಜಿಸಿದ್ದ ಮಹಿಳೆ; ಚಿಂತನ ಮಂಥನ ಕಾರ್ಯಕ್ರಮದಲ್ಲಿ ಡಾ. ವಿನಯ ಶ್ರೀನಿವಾಸ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ "ಮಹಿಳೆ ಮತ್ತು ಆರೋಗ್ಯ" ವಿಷಯದ ಕುರಿತಾಗಿ ಉಪನ್ಯಾಸ ಮಾಡಿದರು.
- ನವೆಂಬರ್ ೨೮ರಂದು ಡಾ. ಮಧುಸೂದನ ಕಾರಿಗನೂರು ಅವರ ಅಧ್ಯಕ್ಷತೆಯಲ್ಲಿ, ಕಸಾಪ, ಸಿರಿಗುಪ್ಪ ಶಾಖೆ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ "ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಸುಮಾರು ೨೫ ವಿದ್ಯಾರ್ಥಿಗಳು ಭಾಗವಹಿಸಿ ಉತ್ತಮವಾಗಿ ಆರೋಗ್ಯ ಕಾಳಜಿಯ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಿರಗುಪ್ಪ ಘಟಕದ ಅಧ್ಯಕ್ಷರಾದ ಡಾ. ಮದುಸೂದನ ಕಾರಿಗನೂರು ವಿದ್ಯಾರ್ಥಿ ಜೀವನ ದೆಸೆಯಿಂದಲೇ ಒಳ್ಳೆಯ ಆರೋಗ್ಯ ಪಡೆಯಲು ಉತ್ತಮ ಆಹಾರ ಸೇವಿಸುವ, ನಿಯಮಿತ ವ್ಯಾಯಾಮ ಮಾಡುವ ಹಾಗೂ ಹಾನಿಕಾರಕ ರಸಾಯನಿಕಗಳನ್ನು ಬಳಸಿ ಮಾಡುವ ಆಹಾರ ಪದಾರ್ಥಗಳನ್ನು ತಿನ್ನುವ ಪರಿಪಾಠದಿಂದ ಹಾಗೂ ದುರಭ್ಯಾಸಗಳಿಂದ ದೂರವಿರುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕಿತ್ತೂರು ರಾಣಿಚೆನ್ನಮ್ಮನ ಕುರಿತಾದ ಕಿರುನಾಟಕವನ್ನು ಶಾಲಾ ಮಕ್ಕಳು ಪ್ರದರ್ಶಿಸಿದರು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕನ್ನಡ ಪುಸ್ತಕಗಳ ಬಹುಮಾನ ನೀಡಲಾಯಿತು.



- ದಿನಾಂಕ ೦೯-೧೧-೨೦೨೪ ರಂದು ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಶಾಖೆಯಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಬೆಳಿಗ್ಗೆ ಕರ್ನಾಟಕ ಧ್ವಜಾರೋಹಣದ ನಂತರ ಕನ್ನಡ ನಾಡು ನಡೆದು ಬಂದ ಹಾದಿಯ ಬಗ್ಗೆ ಡಾ. ಕೆ ಆರ್ ಶ್ರೀಧರ್ ಹಾಗೂ ಕನ್ನಡ ಸಾಹಿತ್ಯದ ಹಿರಿಮೆಯ ಕುರಿತು ಡಾ. ಕೆ ಎನ್ ಗುರುದತ್ತ್ ಕಿರು ಉಪನ್ಯಾಸ ಮಾಡಿದರು. ಸಂಜೆಯ ಸಭಾ ಕಾರ್ಯಕ್ರಮದಲ್ಲಿ ವಿದ್ವಾನ್ ಜಿ ಎಸ್ ನಟೇಶ್ ರವರು "ಕಗ್ಗದ ಸೊಗಸು" ಕುರಿತಾಗಿ ಮಾತನಾಡಿದರು. ಗೌರವ ಅತಿಥಿಯಾಗಿ




ಆಗಮಿಸಿದ್ದ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮಾನ್ಯ ಡಾ. ಧನಂಜಯ ಸರ್ಜಿಯವರು ವೈದ್ಯಕೀಯ ಕ್ಷೇತ್ರಕ್ಕೆ ಪೂರಕವಾಗುವ, ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಬದಲಾವಣೆಗಳನ್ನು ತರಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದರು. ಇದೇ ಸಂದರ್ಭದಲ್ಲಿ ಅವರು ಸಂಘದ ಅಮೃತ ಮಹೋತ್ಸವದ ಲಾಂಛನವನ್ನು ಅನಾವರಣ ಮಾಡಿದರು. ಕನ್ನಡ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮತ್ತು ಕನ್ನಡ ನಾಡು ನುಡಿಯನ್ನು ಪ್ರತಿಬಿಂಬಿಸುವ ವಸ್ತ್ರಧಾರಿಗಳಿಗೆ ಬಹುಮಾನವನ್ನು ಕೊಡಲಾಯಿತು. ಅಧ್ಯಕ್ಷರಾದ ಡಾ. ಶ್ರೀಧರ ಎಸ್ ಮಾತನಾಡಿ ಈ ಬಾರಿ ಸಂಘವು ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಿದೆ ಎಂದರು. ಕೃತಜ್ಞ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಕಾರ್ಯದರ್ಶಿ ಡಾ. ವಿನಯ ಶ್ರೀನಿವಾಸ್ ಸ್ವಾಗತಿಸಿದರು. ಖಜಾಂಚಿ ಡಾ. ರಾಜಾರಾಮ್ ಯು ಎಚ್ ವಂದನಾರ್ಪಣೆ ಮಾಡಿದರು. ಡಾ. ಕೆ ಎಸ್ ಶುಭ್ರತ ಕಾರ್ಯಕ್ರಮದ ನಿರೂಪಣೆ ಮಾಡಿದರು.

◆ ಅಖಿಲ ಭಾರತ ಮಹಿಳಾ ಕವಯತ್ರಿಯರ ಸಮ್ಮೇಳನ ಶಿವಮೊಗ್ಗೆಯಲ್ಲಿ ನವೆಂಬರ್ ೨೩ರಂದು ಶಿವಮೊಗ್ಗೆಯಲ್ಲಿ ನಡೆಯಿತು. ಇದರಲ್ಲಿ ನಡೆದ ನವರತ್ ನಾರಿ ಸಾಹಿತ್ಯ ಸಮ್ಮಾನ್ ಪುರಸ್ಕೃತರಲ್ಲಿ ವೈದ್ಯ ಸಾಹಿತ್ಯಕ್ಕಾಗಿ ಡಾ. ವೀಣಾ ಭಟ್ ಅವರಿಗೆ ಸನ್ಮಾನಿಸಲಾಯಿತು.




◆ ೨೦೨೨ನೇ ಸಾಲಿನ ಡಾ.. ಡಿ ಎಸ್ ಕರ್ಕಿ ಕಾವ್ಯ ಸಾಹಿತ್ಯ ಪ್ರಶಸ್ತಿಗೆ ಡಾ. ಶಿವಾನಂದ ಕುಬಸದ ಭಾಜನರಾಗಿದ್ದಾರೆ.

◆ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಸ್ಟಾಫ್ ಕ್ಲಬ್ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಣೆ ಪ್ರತೀ ವರ್ಷದಂತೆ ಈ ಬಾರಿ ನಡೆಯಿತು. ರಾಜ್ಯದ ವಿವಿಧಭಾಗಗಳ ಹಾಗೂ ಅನ್ಯ ರಾಜ್ಯಗಳ ಉದ್ಯೋಗಿಗಳು ಭಾಗವಹಿಸಿದ ಕಾರ್ಯಕ್ರಮದಲ್ಲಿ ಕನ್ನಡಕಟ್ಟೆ ಮಂಗಳೂರು ಇದರ ಸ್ಥಾಪಕ ಅಧ್ಯಕ್ಷ, ವೈದ್ಯ ಸಾಹಿತಿ ಹಿರಿಯ ಸಂಘಟಕ ಸಮಾಜವಿಜ್ಞಾನಿ ಡಾ. ಎಂ ಅಣ್ಣಯ್ಯ ಕುಲಾಲ್ ಉಳ್ತೂರು ಭಾಗವಹಿಸಿ ನಾಡು ನುಡಿಯ ಔಚಿತ್ಯವನ್ನ ಕನ್ನಡದ ಹಿರಿಮೆಯನ್ನು ತಿಳಿಸಿದರು. ಎಂಸಿಎಫ್ ಕಂಪನಿಯ ೨೦೦ ಕ್ಕೂ ಅಧಿಕ ಉದ್ಯೋಗಿಗಳು ಭಾಗವಹಿಸಿದ್ದರು. ಕೊನೆಯಲ್ಲಿ ವಿಜೃಂಭಣೆಯ ಕನ್ನಡ ರಸಮಂಜರಿ ಕಾರ್ಯಕ್ರಮ ನಡೆಯಿತು.

◆ ವೈದ್ಯಕೀಯ ಸೇವೆ ಜೊತೆಗೆ ನಾಡು ನುಡಿ ನೆಲ ಜಲ ಪರಿಸರ ಪ್ರಕೃತಿಯ ಉಳಿವಿಗಾಗಿ ಸಾಹಿತ್ಯ ಸಂಘಟನೆ ಹಾಗೂ ಜನಜಾಗೃತಿಯ ಮೂಲಕ ಮಾಡಿದ ಜೀವಮಾನದ ಸಾಧನೆಗಾಗಿ ಭಾರತೀಯ ವೈದ್ಯಕೀಯ ಸಂಘ, ಮಂಗಳೂರು ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಯನ್ನು ಡಾ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ನೀಡಿ ಗೌರವಿಸಲಾಯಿತು.

◆ ಭಾರತೀಯ ವೈದ್ಯಕೀಯ ಸಂಘ ಯಲಹಂಕ ಶಾಖೆಯು ದಿನಾಂಕ ೨೯-೧೧-೨೪ ರಂದು ಯಲಹಂಕದ ರಾಯಲ್ ಆರ್ಕಿಡ್ ನಲ್ಲಿ ೬೯ ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ನಿಯೋಜಿತ ಅಧ್ಯಕ್ಷರಾದ ಡಾ. ವೀರಭದ್ರಯ್ಯನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ವೀರಭದ್ರಯ್ಯನವರು ಮಾತನಾಡಿ ವೈದ್ಯರ ಸದಸ್ಯತ್ವವನ್ನು ಹೆಚ್ಚು ಮಾಡಿಸಬೇಕು ಹಾಗೂ ಬಿಕ್ಕಟಿನ ಸಂದರ್ಭದಲ್ಲಿ ವೈದ್ಯರು ಒಬ್ಬರಿಗೆ ಒಬ್ಬರು ಸಹಕರಿಸಬೇಕೆಂದು ತಿಳಿಸಿದರು. ನಾಡಗೀತೆಯೊಂದಿಗೆ ನಮ್ಮ ಕನ್ನಡ ರಾಜ್ಯೋತ್ಸವದ ಚಟುವಟಿಕೆಗಳು ಪ್ರಾರಂಭವಾದವು. ಕರ್ನಾಟಕದ ನೆಲ-ಜಲ, ನಾಡು-ನುಡಿ ಸಂಸ್ಕೃತಿ ಗಳ ಪ್ರತಿಬಿಂಬ ನಾವೆಲ್ಲ ಎನ್ನುವಂತೆ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಿದೆವು. ಸಮೂಹದ ಗೀತೆ ,ಏಕವ್ಯಕ್ತಿ ಗೀತೆ, ಜನಪದ ನೃತ್ಯ, ಸಾಮೂಹಿಕ ನೃತ್ಯ,ಹುಲಿ ಕುಣಿತ, ವೀರಗಾಸೆ ಕುಣಿತ ದಂತಹ ವೈಭವದ ಕಾರ್ಯಕ್ರಮಗಳೊಂದಿಗೆ ನಾವೆಲ್ಲರೂ



ಒಂದೇ ಎಂಬ ಭಾವನೆಯಲ್ಲಿ ಮಿಂದೆದ್ದೆವು. ಅಲಂಕಾರಿಕ ಉಡುಗೆಯಲ್ಲಿ ನಮ್ಮ ಶಾಖೆಯ ವೈದ್ಯರು ತಮ್ಮ ಮಕ್ಕಳೊಂದಿಗೆ ಕಿತ್ತೂರು ರಾಣಿ ಚೆನ್ನಮ್ಮ, ಅಬ್ಬಕ್ಕ, ರಾಷ್ಟ್ರಕವಿ ಕುವೆಂಪು,ಒನಕೆ ಓಬವ್ವ ,ಸುಧಾ ಮೂರ್ತಿ,ಸೂಲಗಿತ್ತಿ ನರಸಮ್ಮ ಕಿತ್ತೂರು ರಾಣಿ ಚೆನ್ನಮ್ಮ ನವರ ಪಾತ್ರಗಳಲ್ಲಿ ಮಿಂಚಿನ ಸಂಚಲನ ಉಂಟು ಮಾಡಿ ಸಭಿಕರ ಮನಗೆದ್ದರು. ಕನ್ನಡ ಎನ್ನುವುದು ಕೇವಲ ಒಂದು ಭಾಷೆಯಲ್ಲ, ಅದೊಂದು ಭಾವನೆ,ಕರ್ನಾಟಕ ಎನ್ನುವುದು ಕೇವಲ ನಾಡಲ್ಲ, ಅದೊಂದು ಸಂಸ್ಕೃತಿ, ಇಲ್ಲಿ ಇರುವುದು ಕೇವಲ ಮಣ್ಣಲ್ಲ, ಅದೊಂದು ಹೊನ್ನು, ಇಲ್ಲಿ ಹರಿಯುವುದು ಕೇವಲ ನದಿಗಳಲ್ಲ, ಅವು ಪ್ರತಿಯೊಬ್ಬ ಕನ್ನಡಿಗನ ಜೀವನಾಡಿ. ಇಲ್ಲಿ ನೆರೆದಿರುವ ನಾವೆಲ್ಲರೂ ಕನ್ನಡವನ್ನು ಕಲಿಸೋಣ, ಕನ್ನಡವನ್ನು ಬಳಸೋಣ, ಕನ್ನಡವನ್ನು ಉಳಿಸೋಣ, ಎಂಬ ವಾಕ್ಯದೊಂದಿಗೆ ಡಾ.. ಪದ್ಮ ಪ್ರಕಾಶ ತಿಳಿಸಿದರು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ಖಾದ್ಯಗಳನ್ನು ಬಾಳೆ ಎಲೆಯಲ್ಲಿ ಸವಿಯುವಾಗ ಎಲ್ಲರ ಮುಖದಲ್ಲಿ ಮಂದಹಾಸ ಮೂಡಿ ಬಂತು.

◆ ಕನ್ನಡ ಬಳಗ ಸಂಸ್ಥೆಯ ವತಿಯಿಂದ ನವೆಂಬರ್ ೧೪ ರಂದು ದಿನಾಂಕದಂದು ಗದಗನಲ್ಲಿ ನಡೆದ ಹಾಸ್ಯ ಸಂಜೆ ಕಾರ್ಯಕ್ರಮದಲ್ಲಿ ಗಂಗಾವತಿಯ ಶ್ರೀ ಪ್ರಾಣೇಶ, ಶ್ರೀ ನರಸಿಂಹ ಜೋಶಿ, ಶ್ರೀ ಬಸವರಾಜ ಮಹಾಮನಿ ರವರು ಅತಿಥಿಗಳಾಗಿ/ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ನೆರೆದಿದ್ದ ಜನಸ್ತೋಮವನ್ನು ನಗೆಗಡಲಲ್ಲಿ ತೇಲಿಸಿದರು.




◆ ದಿನಾಂಕ ೨೯-೧೧-೨೦೨೪ರಂದು ಭಾ. ವೈ. ಸಂ., ಮೈಸೂರು ಶಾಖೆ ಕನ್ನಡ ರಾಜ್ಯೋತ್ಸವವನ್ನು ಡಾ. ಎಸ್. ಪಿ. ಯೋಗಣ್ಣ ಮತ್ತು ಡಾ. ವೀಣಾ ಎನ್. ಸುಳ್ಯ ಅವರಿಗೆ ಸತ್ಕರಿಸುವುದರೊಂದಿಗೆ ಆಚರಿಸಿದರು. ಡಾ. ಪರಮೇಶ್ವರ್ ನಾಯಕ್ ಅಧ್ಯಕ್ಷತೆ ವಹಿಸಿದರು. ಶಾಖೆಯ ಸದಸ್ಯರಿಂದ ಕನ್ನಡ ಚಲನಚಿತ್ರ ಗೀತಗಾಯನ ನಡೆಯಿತು.

◆ ದಿನಾಂಕ ೦೬-೧೨-೨೦೨೪ ರಂದು ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಶಾಖೆಯು ನಗರದ ಸರ್ವೋದಯ ಶಾಲೆಯಲ್ಲಿ “ಚಿಣ್ಣರೊಂದಿಗೆ ಚಂದದ ಸಮಯ” ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಮಕ್ಕಳಿಗೆ ಕನ್ನಡ ದುಂಡಾಕ್ಷರ, ಕವನ ವಾಚನ, ಕಾಗದದಲ್ಲಿ ಕೌಶಲ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಿತ್ತು. “ವಿದ್ಯಾರ್ಥಿ ಜೀವನದಲ್ಲಿ ಒತ್ತಡ ನಿರ್ವಹಣೆ” ಮತ್ತು “ಮಕ್ಕಳ ಜೀವನ ಶೈಲಿ ಹಾಗೂ ಆರೋಗ್ಯ” ವಿಷಯಗಳ ಕುರಿತು ಡಾ. ಶಶಿಧರ್ ಎಚ್ ಎಲ್ ಹಾಗೂ ಡಾ. ರಾಜಾರಾಮ್ ಯು ಎಚ್ ಮಾತನಾಡಿದರು. ಸ್ಪರ್ಧೆಯಲ್ಲಿ ಗೆದ್ದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ. ಶ್ರೀಧರ ಎಸ್ ಮತ್ತು ಕಾರ್ಯದರ್ಶಿ ಡಾ. ವಿನಯ ಶ್ರೀನಿವಾಸ್ ಉಪಸ್ಥಿತರಿದ್ದರು.



◆ ಏಡ್ಸ್ ಜಾಗೃತಿ ಜಾಥಾವನ್ನು ಸೈನ್ಸ್ ಪಾಲ್ಸ್ ಫಾರ್ಮಸಿ ಕಾಲೇಜು , ಗಂಗಾವತಿ ಯಲ್ಲಿ

ಆಯೋಜಿಸಲಾಗಿತ್ತು . ವೈದ್ಯರಾದ ಡಾ .ಸುಲೋಚನಾ ಚಿನಿವಾಲರ ಡಾ. ಶಿವಕುಮಾರ ಮಾಲಿಪಾಟೀಲ ಮತ್ತು ಮಾಜಿ ಶಾಸಕರಾದ ಮುನಳ್ಳಿ ಪರಣ್ಣ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಸರ್ವೇಶ ವಸ್ತ್ರದ ಪಾಲ್ಗೊಂಡು ಸಾರ್ವಜನಿಕರಿಗೆ ಅರಿವು ಮೂಡಿಸುವ ವಿಷಯದ ಬಗ್ಗೆ ಮಾತನಾಡಿ ತಡೆಗಟ್ಟುವ ಮತ್ತು ಬಾರದಂತಿರಲು ಏನು ಎಚ್ಚರಿಕೆ ಕ್ರಮವಹಿಸಬೇಕು, ಬಂದರೂ ಅದರೊಂದಿಗೆ ಆರೋಗ್ಯವಂತ ಬದುಕು ನಡೆಸುವ ಬಗ್ಗೆ ಮಾಹಿತಿ ನೀಡಿ ಜಾಥಾಕೆ ಚಾಲನೆ ನೀಡಲಾಯಿತು.

- ಬಾಗಲಕೋಟೆಯ ತೋಟಗಾರಿಕಾ ಇಲಾಖೆಯ ವತಿಯಿಂದ ಶ್ರೇಷ್ಠ ತೋಟಗಾರಿಕಾ ರೈತ ಪ್ರಶಸ್ತಿಯನ್ನು ಡಾ. ಎಸ್. ಪಿ. ಯೋಗಣ್ಣ ಅವರಿಗೆ ನೀಡಿ ಗೌರವಿಸಲಾಯಿತು.
- ಭಾರತೀಯ ಕ್ಷಕಿರಣ ಹಾಗೂ ಬಿಂಬ ಚಿತ್ರಣ ಸಂಘ, ಕರ್ನಾಟಕ ಶಾಖೆ, ಡಾ. ಸರೋಜ ಆರ್. ಕೆ. ಅವರಿಗೆ ಜೀವಮಾನ ಸಾಧನೆಗಾಗಿ ಪ್ರಶಸ್ತಿಯನ್ನು ನೀಡಿ ಗೌರವಿಸಿತು
- ಸ್ಪರ್ಶ್ ಹಾಸ್ಪಿಟಲ್ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರೊ. ಡಾ. ಪವನ್ ಕುಮಾರ್, ಹಂ. ಪ. ನಾ., ಮತ್ತು ಪೂಜಾ ಗಾಂಧಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರೊ ಡಾ. ಪವನ್ ಕುಮಾರ್ ಅವರು ಕನ್ನಡ ಸಂಸ್ಕೃತಿ ಮತ್ತು ಏಕೀಕರಣ ಕುರಿತು ಮಾತನಾಡಿದರು. ಎಲ್ಲರನ್ನೂ ಸನ್ಮಾನಿಸಲಾಯಿತು.




- ನವೆಂಬರ್ ತಿಂಗಳಿನಲ್ಲಿ ಡಾ. ಕೆ. ಎಸ್. ಪವಿತ್ರ ಅವರಿಂದ ಕಮಲಾ ನೆಹರೂ ಕಾಲೇಜು-ಆನಂದ ಆರೋಗ್ಯ ಮಾಲಿಕೆಯಡಿ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಆಧರಿಸಿ ನೃತ್ಯ ಪ್ರಾತ್ಯಕ್ಷಿಕೆ. ೩೫೦ ವಿದ್ಯಾರ್ಥಿನಿಯರು ಪಾಲ್ಗೊಂಡರು.
- ಡಿಸೆಂಬರ್ ೭ ರಂದು ಧಾರವಾಡದಲ್ಲಿ ಎರಡು ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ನೃತ್ಯ ಪ್ರಾತ್ಯಕ್ಷಿಕೆ ಮೂಲಕ 'ಅಪೂರ್ವ ಅರಿವು' ಎಂಬ ಮಾನಸಿಕ ಆರೋಗ್ಯ ಅರಿವಿನ ಕಾರ್ಯಕ್ರಮ ಡಾ. ಪವಿತ್ರಾರಿಂದ ನಡೆದವು.
- ಡಿಸೆಂಬರ್ ೧೫ ರಂದು ಮೈಸೂರಿನ ಗಾನಭಾರತಿಯಲ್ಲಿ ಡಾ. ಪವಿತ್ರಾರಿಂದ ರಾಮಾಯಣ ದರ್ಶನಂನ ಮನೋವೈಜ್ಞಾನಿಕ ವಿಶ್ಲೇಷಣೆ ಯನ್ನು ನೃತ್ಯ ಮುಖೇನ ಮಾಡುವ ಪ್ರಯೋಗ ನಡೆಯಿತು.

**ದತ್ತಿ ಉಪನ್ಯಾಸ**

- ಶ್ರೀ ವೀರಪ್ಪ ನೂಲಿ ಮತ್ತು ಕಮಲಮ್ಮ ನೂಲಿ ಸ್ಮರಣಾರ್ಥ ಡಾ. ದಯಾನಂದ ನೂಲಿ ಅವರು ಪ್ರಾಯೋಜಿಸಿದ ದತ್ತಿ ಉಪನ್ಯಾಸವನ್ನು ನಂದಿನಿ ಶಿಕ್ಷಣ ಮಹಾವಿದ್ಯಾಲಯ ರಾಯಚೂರಿನಲ್ಲಿ ಭಾ.ವೈ ಸಂ ರಾಯಚೂರು ಶಾಖೆಯ ಸಹಯೋಗದಲ್ಲಿ ೨೪-೧೧-೨೪ ರಂದು ಆಯೋಜಿಸಲಾಗಿತ್ತು. ಡಾ.ಶಿವರಾಜ್ ಪಾಟೀಲ್ ಅವರು ಆಹಾರ ಮತ್ತು ಆರೋಗ್ಯ ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಡಾ ಸುರೇಶ ಸಗರದ. ಅವರು ಉಪಸ್ಥಿತರಿದ್ದರು.





- ಶ್ರೀಮತಿ ಸುಶೀಲ ಮತ್ತು ವಾಸುದೇವರಾವ್ ದತ್ತಿ ಉಪನ್ಯಾಸ, ಡಾ. ದೀಪಕ ಹಳದಿಪುರ ಪ್ರಾಯೋಜಿಸಿದ ದತ್ತಿ ಉಪನ್ಯಾಸವನ್ನು ಭಾ. ವೈ. ಸಂ. ಸುಳ್ಯ ಶಾಖೆಯ ಸಹಯೋಗದೊಂದಿಗೆ, ಸರಕಾರಿ ಪ.

ಪ್ರೂ. ಕಾಲೇಜು ಸುಳ್ಯ ೩೦–೧೧–೨೦೨೪ರಂದು ಆಯೋಜಿಸಲಾಗಿತ್ತು. ‘ರಕ್ತಹೀನತೆ ಅರಿವು ಮತ್ತು ಜಾಗೃತಿ’ ಎನ್ನುವ ವಿಷಯದಲ್ಲಿ ಡಾ. ವೀಣಾ ಎನ್. ಸುಳ್ಯ ಉಪನ್ಯಾಸ ನೀಡಿದರು.





**ಆನ್‌ಲೈನ್ ಕಾರ್ಯಕ್ರಮ**

- “ಕನ್ನಡ ರಾಜ್ಯೋತ್ಸವ. ಕವಿಸಂಭ್ರಮ” ನವೆಂಬರ್ ೨೯ನೇ ತಾರೀಖು ಝೂಮ್ ವೇದಿಕೆಯಲ್ಲಿ ನಡೆಯಿತು ಐ. ಎಂ. ಎ ಕನ್ನಡ ವೈದ್ಯ ಬರಹಗಾರರ ಸಮಿತಿಯ ವತಿಯಿಂದ ವೈದ್ಯ ಕವಿಗಳ ಕವಿತಾ ಗೋಷ್ಠಿಯನ್ನು ಮುನ್ನಡೆಸಿದವರು ಖ್ಯಾತರಾದ ಶ್ರೀ ಸತ್ಯೇಶ್ ಬೆಳ್ಳೂರ್ ಅವರು. ೨೦ ಕವಿಗಳು ತಮ್ಮ ಕವನ ವಾಚಿಸಿದರು ಹೊಸಬರೂ ತೊಡಗಿಕೊಂಡದ್ದು ಒಳ್ಳೆಯ ಬೆಳವಣಿಗೆ. ಪ್ರತಿಯೊಬ್ಬರ ಕವನ–ವಾಚನ ಕುರಿತು ಮೌಲಿಕ ಸಲಹೆ ನೀಡಿದ ಸತ್ಯೇಶ್ ಕವಿಗಳಿಗೆ ಕವಿತೆಗಳ–ಹಂದರ–ರಚನೆ–ಅಭ್ಯಸನ–ಅಧ್ಯಯನಗಳ ಅಗತ್ಯತೆ ಕುರಿತು ಮನದಟ್ಟು ಮಾಡಿದರು. ಇಂದಿರಾ ದೊಡ್ಡಬಳ್ಳಾಪುರ ಉಸ್ತುವಾರಿ ವಹಿಸಿದ್ದರು.
- ಕನ್ನಡ ವೈದ್ಯ ಬರಹಗಾರರ ಸಮಿತಿ ಮತ್ತು ವಾಸವಿ ಸಾಹಿತ್ಯ ಕಲಾವಿದರಿಗೆ ಸುಳ್ಯ ಸಹಯೋಗದಲ್ಲಿ ನಡೆಸಿಕೊಂಡು ಬರುವ ಸಾಹಿತಿಗಳೊಂದಿಗೆ ಒಂದು ಸಂಜೆ ಕಾರ್ಯಕ್ರಮದ ೦೩–೧೧–೨೦೨೪ ಮತ್ತು ೨೪–೧೧–೨೦೨೪ರಂದು ‘ಕರ್ಣಾಟ ಕತೆ’ ಎಂಬ ವಿಷಯದಲ್ಲಿ ಕರ್ನಾಟಕ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಬೆಳೆದು ಬಂದ ಬಗೆಯನ್ನು ವಿವರಿಸಿದರು. ವೃತ್ತಿಯಲ್ಲಿ ಇಂಜಿನಿಯರ್ ಆದರೂ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಚೇತನ್ ಅವರ ಕನ್ನಡ ಪ್ರೀತಿ ಇತಿಹಾಸದ ಬಗ್ಗೆ ಇರುವ ಆಳವಾದ ಜ್ಞಾನ ಕಾರ್ಯಕ್ರಮದ ವಿಶೇಷತೆಯನ್ನು ಹೆಚ್ಚಿಸಿತ್ತು
- ೦೧–೧೨–೨೦೨೪ ರಂದು ಶ್ರೀಮತಿ ಸುಧಾ ಆಡುಕಳ ಅವರು ಕನ್ನಡಕ್ಕೆ ಅನುವಾದ ಮಾಡಿದ ಒರಿಯಾನ ಫಿಲಾಚಿ ಅವರ ‘ಎಂದೂ ಹುಟ್ಟದ ಮಗುವಿಗೆ ಪತ್ರ’ ಎನ್ನುವ ಪುಸ್ತಕದ ಬಗ್ಗೆ ಉಪನ್ಯಾಸ ನಡೆಸಿಕೊಟ್ಟರು ಹುಟ್ಟಿನ ಆಯ್ಕೆ ಮಗುವನ್ನು ಸಾಕುವ ಪ್ರಕ್ರಿಯೆ ತಾಯಿಯ ಜವಾಬ್ದಾರಿಯೇ ಹಕ್ಕೆ? ಎನ್ನುವ ವಿಚಾರಗಳ ಬಗ್ಗೆ ಚಿಂತನೆಗೆ ಹಚ್ಚುವ ಕಾರ್ಯಕ್ರಮವಾಗಿ ಮೂಡಿ ಬಂತು
- ೮–೧೨–೨೦೨೪ ರಂದು ಅಮೆರಿಕದಲ್ಲಿ ನೆಲೆಸಿರುವ ಕಾದಂಬರಿಕಾರರಾದ ಡಾ. ಗುರುಪ್ರಸಾದ್ ಕಾಗಿನೆಲೆ ಅವರ ಇತ್ತೀಚಿಗಿನ ಕಾದಂಬರಿ ಸತ್ಕುಲ ಪ್ರಸೂತರು ಬಗ್ಗೆ ಪರಿಚಯಾತ್ಮಕ ಉಪನ್ಯಾಸ ನಡೆಯಿತು. ದೇಶಾತೀತ ಕಾಲಾತೀತವಾದ ಜಾತಿ ಧರ್ಮ ಸಂಪ್ರದಾಯ ಇವುಗಳ ನಡುವಿನ ಮೂರು ತಲೆಮಾರುಗಳ ಸಂಘರ್ಷವನ್ನು ಈ ಕಾದಂಬರಿಯಲ್ಲಿ ಚರ್ಚಿಸಲಾಗಿದೆ.
- ೧೬–೧೨–೨೦೨೪ರಂದು ಬ್ಯಾಂಕ್ ಉದ್ಯೋಗಿಯಾಗಿ ನಿವೃತ್ತರಾಗಿರುವ ಶ್ರೀ ರಂಗನಾಥ ಕಟ್ಟಾಯ ಅವರು ಕುಮಾರವ್ಯಾಸ ಭಾರತದಲ್ಲಿ ಬಿರುನುಡಿಗಳನ್ನು ಬಗ್ಗೆ ಉಪನ್ಯಾಸ ನಡೆಸಿಕೊಟ್ಟರು. ಸನ್ನಿವೇಶಕ್ಕೆ ಸರಿಯಾಗಿ ಕನ್ನಡದ ಪದಗಳ ಆಯ್ಕೆ ಮತ್ತು ಅದನ್ನು ಬಳಸುವ ರೀತಿ ಸೊಬಗನ್ನು ತೋರಿಸಿಕೊಟ್ಟರು
- ೨೨–೧೨–೨೦೨೪ರಂದು ಅಣಕು ರಾಮನಾಥ ಎಂಬ ಹೆಸರಿನಿಂದ ಪ್ರಸಿದ್ಧರಾದ ನ. ನರಸಿಂಹಮೂರ್ತಿ ರಾಮನಾಥ್ ವೀಕೆಂಡ್ ವಿನೋದ ಎಂಬ ಕಾರ್ಯಕ್ರಮ ನಡೆಸಿಕೊಟ್ಟರು. ಸುಧಾ ವಾರಪತ್ರಿಕೆಯಲ್ಲಿ ೧೬ ವರ್ಷಗಳಿಂದ ‘ನೀವು ಕೇಳಿದಿರಿ’ ಎಂದು ಅಂಕಣವನ್ನು ನಡೆಸಿಕೊಂಡು ಬಂದವರು. ಮಾಸ್ಟರ್ ಹಿರಣ್ಣಯ್ಯ, ಆರಾಮಿತ್ರ ನಾ. ಕಸ್ತೂರಿ ಅವರ ಜೊತೆಗಿನ ವಿಶೇಷ ಸಂದರ್ಭಗಳನ್ನು ಹಂಚಿಕೊಂಡರು
- ೨೯–೧೨–೨೦೨೪ ರಂದು ಹಾಸನದ ಡಾ. ವಾಗೀಶ್ ಭಟ್ ಅವರು ‘ನಿತ್ಯ ಜೀವನದಲ್ಲಿ ಅಧ್ಯಾತ್ಮ’ ಎಂಬ ವಿಷಯದಲ್ಲಿ ಉಪನ್ಯಾಸ ನಡೆಸಿಕೊಟ್ಟರು. ಪ್ರಸ್ತುತ ದೆಲ್ಲಿಯ ಬಿ. ಜಿ. ಪಂತ್ ಆಸ್ಪತ್ರೆಯಲ್ಲಿ ಗ್ಯಾಸ್ಟ್ರೋಎಂಟ್ರಾಲಜಿಸ್ಟ್ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಜ್ಞಾನ ಹೊಂದಿರುವುದೇ ಅಲ್ಲದೆ ವಚನಗಳಲ್ಲಿಯೂ ಅಧ್ಯಾತ್ಮದ ಬಗ್ಗೆ ಹೇಳಿರುವ ವಿಚಾರಗಳನ್ನು ಹಂಚಿಕೊಂಡರು.

೫ನೇ ಪುಟದಿಂದ...

ಸರ್ಕಾರದ ಮಟ್ಟದಲ್ಲಿ ಪರಿಹಾರ ನೀಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಅಶೋಕನ್ ಅವರು ವಾಸ್ತವ ಚಿತ್ರಣವನ್ನು ವಿವರಿಸಿ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದರು. ಸಮ್ಮೇಳನದಲ್ಲಿ ಪ್ರಶಸ್ತಿಗೆ ಭಾಜನರಾದ ಕರ್ನಾಟಕದ ಎಲ್ಲಾ ವೈದ್ಯರಿಗೆ ಅಭಿನಂದನೆಗಳು.

ಕರ್ನಾಟಕದಲ್ಲಿ ಸಂಭವಿಸಿದ ಬಾಣಂತಿ ಸಾವಿನ ಕುರಿತು ಸುವರ್ಣ ಸೌಧದಲ್ಲಿ ಚರ್ಚೆ ನಡೆದಿದೆ. ಈ ಕುರಿತು ಯಾವುದೇ ಪಕ್ಷಪಾತ ಇಲ್ಲದೆ ತನಿಖೆ ನಡೆಯಲಿ. ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು. ಸಿಜೇರಿಯನ್ ಶಸ್ತ್ರಚಿಕಿತ್ಸೆಯ ಹೆಚ್ಚಳ ಕುರಿತು ಆರೋಗ್ಯ ಮಂತ್ರಿಗಳು ಸದನದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ತಾಯಿ ಮತ್ತು ಮಗುವಿನ ಆರೋಗ್ಯದ ದೃಷ್ಟಿಯಿಂದ ಸಿಜೇರಿಯನ್ ಸಂಖ್ಯೆ ಹೆಚ್ಚುತ್ತಿದೆ ಎಂಬುದು ಒಂದು ಪ್ರಮುಖ ಕಾರಣ. ಅಮೂಲ್ಯ ಗರ್ಭಾವಸ್ಥೆ ಮತ್ತು ಹೆಚ್ಚಿನ ಗಂಡಾಂತರವುಳ್ಳ ಗರ್ಭಾವಸ್ಥೆ ಇತ್ತೀಚೆಗೆ ಹೆಚ್ಚಾಗುತ್ತಿರುವುದು ಸಿಜೇರಿಯನ್ ಶಸ್ತ್ರ ಚಿಕಿತ್ಸೆ ಹೆಚ್ಚಲು ಕಾರಣವಾಗಿದೆ. ಪ್ರಸೂತಿ ತಜ್ಞರ ಸಂಘ ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಚರ್ಚಿಸಿ ರಚನಾತ್ಮಕ ನಿರ್ಧಾರ ಕೈಗೊಳ್ಳಬೇಕು.

ಭಾರತದ ಅರ್ಥವ್ಯವಸ್ಥೆಯ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರು ಇತ್ತೀಚೆಗೆ ನಿಧನರಾದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸೋಣ. ಉದಾರವಾದ ಆರ್ಥಿಕ ನೀತಿ ಮೂಲಕ ಆರ್ಥಿಕ ಸುಭದ್ರತೆಗೆ ನಾಂದಿ ಹಾಡಿದ ಡಾ. ಸಿಂಗ್ ಅವರು ವಿಶ್ವ ಅನುಭವಿಸಿದ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಭಾರತವನ್ನು ಸಶಕ್ತವಾಗಿ ಮುನ್ನಡೆಸಿದ್ದು ಇತಿಹಾಸ. ವಿತ್ತ ಮಂತ್ರಿ ಡಾ. ನಿರ್ಮಲಾ ಸೀತಾರಾಮನ್ ಅವರು ಆಯವ್ಯಯ ಪೂರ್ವಸಭೆಗಳನ್ನು ಆಯೋಜಿಸಿ ಪ್ರಮುಖ ವಿಚಾರಗಳ ಕುರಿತು ಅಭಿಪ್ರಾಯ ಪಡೆಯುತ್ತಿದ್ದಾರೆ. ಭಾರತೀಯ ವೈದ್ಯಕೀಯ ಸಂಘ ಈ ಸಮಯದಲ್ಲಿ ವಿತ್ತ ಸಚಿವರನ್ನು ಭೇಟಿ ಮಾಡಿ ಭಾರತೀಯ ವೈದ್ಯಕೀಯ ಸಂಘದ ವಿಚಾರಗಳನ್ನು ಹಂಚಿಕೊಳ್ಳಬೇಕು. ಮತ್ತೊಮ್ಮೆ ಹೊಸ ವರುಷದ ಹಾರ್ದಿಕ ಶುಭಾಶಯಗಳು...

ನಿಮ್ಮ ಅಭಿಪ್ರಾಯಕ್ಕೆ ಕಾಯುತ್ತಿರುವ...

**ಡಾ. ಸುರೇಶ ಸಗರದ**
ಪ್ರಧಾನ ಸಂಪಾದಕರು


**ಕನ್ನಡ ಬಳಸಿ... ವೈದ್ಯ ಸಾಹಿತ್ಯ ಬೆಳೆಸಿ...**
**ವೈದ್ಯ ಸಂಪದ ಪತ್ರಿಕೆಯ ಚಂದಾದಾರರಾಗಿ ಪ್ರೋತ್ಸಾಹಿ**

ರೂ. ೧೫೦೦ ಪಾವತಿಸಿ
ಎರಡು ವರುಷ
ಪುಸ್ತಕ ಪಡೆಯಿರಿ
ಇಂದೇ ಚಂದಾದಾರರಾಗಿ
ಪ್ರೋತ್ಸಾಹಿಸಿ

ಈ ಕೋಡ್ ಬಳಸಿ
ನಿಮ್ಮ ಹೆಸರು ವಿಳಾಸ
ದಾಖಲಿಸಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಡಾ. ಸುರೇಶ ಸಗರದ ೯೪೪೮೧೫೯೫೫೯, ಡಾ. ವೀಣಾ ಎನ್. ಸುಳ್ಯ ೯೪೪೮೨೧೫೯೪೦



**ಸಂದರ್ಶನ**

# ಬಹುಮುಖ ವ್ಯಕ್ತಿತ್ವದ ವೈದ್ಯ, ಕನ್ನಡದ ಕಟ್ಟಾಳು ಡಾ. ಹೆಚ್. ಬಿ. ರಾಜಶೇಖರ ಅವರೊಂದಿಗೆ...

**ಡಾ. ಅವಿನಾಶ್ ಕವಿ**
ವಿಭಾಗಿಯ ಸಂಪಾದಕರು ಹಾಗು ಲೇಖಕರು
ಸಹಪ್ರಾಧ್ಯಾಪಕರು, ಸಮುದಾಯ ವೈದ್ಯಕೀಯ ವಿಭಾಗ, ಕೆ.ಎಲ್.ಇ. ವಿಶ್ವವಿದ್ಯಾಲಯ, ಬೆಳಗಾವಿ



**ಡಾ.** ಹೆಚ್. ಬಿ. ರಾಜಶೇಖರ, ಎಂದರೆ ಕೇವಲ ಬೆಳಗಾವಿ ಮಾತ್ರವಲ್ಲ ಇಡೀ ಉತ್ತರ ಕರ್ನಾಟಕದಲ್ಲಿ ಚಿರಪರಿಚಿತವಾದ ಹೆಸರು. ದೇಶ–ವಿದೇಶಗಳಲ್ಲಿ ಹರಡಿರುವ ಅವರ ವಿದ್ಯಾರ್ಥಿಗಳು ಇಂದಿಗೂ ಅವರನ್ನು ಅತ್ಯಂತ ಭಕ್ತಿ–ಗೌರವದಿಂದ ನಮಿಸುತ್ತಾರೆ. ಮಧ್ಯ ಕರ್ನಾಟಕದ ಒಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದ ಇವರು, ಸ್ವಂತ ಪರಿಶ್ರಮದಿಂದ, ವೈದ್ಯ ವಿಜ್ಞಾನವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿ, ಬೆಳಗಾವಿಯ ಕೆ. ಎಲ್. ಇ. ಸಂಸ್ಥೆಯ ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ, ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ, ಪ್ರಾಂಶುಪಾಲರಾಗಿ ಕಳೆದ ಆರು ದಶಕಗಳಿಂದ ನಿರಂತರವಾಗಿ ಸೇವೆ ಸಲಿಸುತ್ತಿದ್ದಾರೆ. ಜೆ. ಎನ್. ಎಂ. ಸಿ. ಯಲ್ಲಿ ಸುಮಾರು ೧೮ ವರ್ಷ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ನಂತರವೂ ಕಳೆದ ೧೫ ವರ್ಷಗಳಿಂದ ಯು. ಎಸ್. ಎಮ್. ಕೆ. ಎಲ್. ಇ. ಅಂತರಾಷ್ಟ್ರೀಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಿರ್ದೇಶಕರಾಗಿ ಸೇವೆಸಲ್ಲಿಸುತ್ತಿರುವ ೮೬ ವರ್ಷ ಹರೆಯದ ಅಪರೂಪದ ವೈದ್ಯರಿವರು. ತಜ್ಞ ವೈದ್ಯರಾಗಿ, ಸಮರ್ಥ ಆಡಳಿತಗಾರರಾಗಿ, ವೈದ್ಯಕೀಯ ಮಹಾವಿದ್ಯಾಲಯದ ಮುಖ್ಯಸ್ಥರಾಗಿ, ಕನ್ನಡ ಸಂಸ್ಕೃತಿಯ ಆರಾಧಕರಾಗಿ, ಅವರು ಸಲ್ಲಿಸಿರುವ ಕೊಡುಗೆ ಅಪಾರವಾದದ್ದು. ವೈದ್ಯಕೀಯ ವೃತ್ತಿಯೊಡನೆ ಕನ್ನಡ ನಾಡು–ನುಡಿ–ಸಂಸ್ಕೃತಿಯ ಪ್ರಸರಣಕ್ಕಾಗಿ ಕಳೆದ ೬೦ ವರ್ಷಗಳಿಂದಲೂ ನಿರಂತರ ಸೇವೆಗೆಯ್ಯುತ್ತಿರುವ “ಗಡಿಭಾಗದ ಕನ್ನಡದ ಕಟ್ಟಾಳು” ಆಗಿದ್ದಾರೆ. ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿಯೇ ಅಪರೂಪವೆನಿಸಿರುವ “ಕನ್ನಡ ಬಳಗ”ದ ಭೀಷ್ಮ ಪಿತಾಮಹರೆನಿಸಿ, ಇಂದಿಗೂ ಕಾರ್ಯಪ್ರವೃತ್ತವಾಗಿರುವುದು ಅವರ ವೈಶಿಷ್ಟ್ಯ. ಬಹುಮುಖ ವ್ಯಕ್ತಿತ್ವವುಳ್ಳ ಡಾ. ರಾಜಶೇಖರ ಅವರಿಗೆ, ವೈದ್ಯರಿಗಾಗಿ ರಾಷ್ಟ್ರಮಟ್ಟದಲ್ಲಿ ನೀಡಲಾಗುವ ಅತ್ಯುನ್ನತ ಪ್ರಶಸ್ತಿಯಾದ “ಡಾ. ಬಿ. ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ”ಯನ್ನು ೧೯೮೯ರಲ್ಲಿ ಅಲ್ಲದೆ ರಾಜ್ಯ ಮತ್ತು ಅಂತರಾಷ್ಟ್ರೀಯ ಮಟ್ಟದ ಅನೇಕ ಪ್ರಶಸ್ತಿ–ಸಮ್ಮಾನಗಳು ಇವರನ್ನರಸಿ ಬಂದಿವೆ. ಕಲಿಯುವ–ಕಲಿಸುವ ಹಂಬಲವಿದ್ದರೆ ಅದಕ್ಕೆ ವಯಸ್ಸು ಎಂದು ಅಡ್ಡಿಯಾಗಲಾರದು; ವಯಸ್ಸು ಕೇವಲ ಒಂದು ಸಂಖ್ಯೆ ಮಾತ್ರ ಎಂದು ನಂಬಿರುವ ಡಾ. ರಾಜಶೇಖರ ಕನ್ನಡ ವೈದ್ಯಲೋಕದ ವಿಸ್ಮಯವೆನಿಸಿದ್ದಾರೆ.


**ಸಂದರ್ಶಕ:** ತಮ್ಮ ಹುಟ್ಟೂರು ಬಾಲ್ಯ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಮೂಡಿದ ಆಸಕ್ತಿಯ ಬಗ್ಗೆ ವಿವರಿಸಿ.



**ಡಾ. ರಾಜಶೇಖರ:** ನನ್ನ ಹುಟ್ಟೂರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ, ಹೂವಿನಹೊಳೆ ಗ್ರಾಮ. ಪ್ರಾಥಮಿಕ ಶಿಕ್ಷಣ ಹೂವಿನಹೊಳೆಯಲ್ಲಿ, ಮಾಧ್ಯಮಿಕ ಶಿಕ್ಷಣ ಪಕ್ಕದ ಅಬ್ಬಿಹೊಳೆಯಲ್ಲಿ. ನಂತರ ಹೈಸ್ಕೂಲ್ ಶಿಕ್ಷಣ, ಸರ್ಕಾರಿ ಪ್ರೌಢಶಾಲೆ ಚಿತ್ರದುರ್ಗ. ಹೈಸ್ಕೂಲ್ ಓದುವಾಗ ನಮ್ಮ ತಂದೆ ಮತ್ತು ತಾಯಿಯವ ನಾನು ವೈದ್ಯನಾಗಬೇಕೆಂದು ಬಯಸಿದ್ದರು. ಮೆಟ್ರಿಕ್ಯುಲೇಶನಲ್ಲಿ ನಮ್ಮ ಸಮಾಜದಲ್ಲಿಯೇ ಅತಿ ಹೆಚ್ಚು ಅಂಕಗಳನ್ನು ಪಡೆದಿದ್ದ ನಾನು, ನಮ್ಮ ಹೈಸ್ಕೂಲ್ ಶಿಕ್ಷಕರ ಸಲಹೆ ಮೇರೆಗೆ, ಆಗಿನ ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯದ ಅಡಿಯಲ್ಲಿರುವ ಬೆಂಗಳೂರಿನ ಮೆಡಿಕಲ್ ಸ್ಕೂಲ್‌ನಲ್ಲಿ ಎಲ್. ಎಂ. ಪಿ. ಕೋರ್ಸಗೆ ನಾನು ಅರ್ಜಿಯನ್ನು ಹಾಕಿದ್ದೆ. ಸಂದರ್ಶನದಲ್ಲಿ, ಜಿಲ್ಲಾವಾರು ಹಾಗೂ ಸಮುದಾಯವಾರು ಮೆರಿಟ್ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿದ್ದರು. ನನ್ನನ್ನು ಸಂದರ್ಶಿಸಿದಾಗ, ನಾನು ನೋಡಲು ತುಂಬಾ ತೆಳ್ಳಗಿದ್ದ ಕಾರಣ, ಇವನು ಹೇಗೆ ಡಾಕ್ಟರಾಗ ಬಲ್ಲ ಎಂದು ಶಂಕಿಸಿದರು. ಆ ಮೆಡಿಕಲ್ ಸ್ಕೂಲಿನ ಪ್ರಾಂಶುಪಾಲರಾದ ಡಾ. ಬಾಲಸುಬ್ರಮಣ್ಯಂ ಅವರು ಒತ್ತಾಯ ಮಾಡಿ, ಅತಿ ಹೆಚ್ಚು ಅಂಕವನ್ನು ಪಡೆದಿರುವ ವಿದ್ಯಾರ್ಥಿಯನ್ನು ಬಿಡಲಾಗುವುದಿಲ್ಲ ಎಂದು ನನಗೆ ಸೀಟನ್ನು ನೀಡಲಾಯಿತು. ಹೀಗೆ ನಾನು ವೈದ್ಯಕೀಯ ರಂಗವನ್ನು ಪ್ರವೇಶಿಸಿದೆ. ಹಾಗೆಯೇ ನಾಲ್ಕು ವರ್ಷಗಳ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಪೂರೈಸಿ, ಒಂಬತ್ತು ತಿಂಗಳು ಇಂಟರ್ನ್ಶಿಪ್ ಅನ್ನು ಕೊಡಗಿನಲ್ಲಿ ಪೂರೈಸಿದೆ. ನನಗೆ ನನ್ನ ಪ್ರತಿಭೆಯೇ ನನಗೆ ಬೆಂಬಲ. ಆನಂತರ ನಾನು ಎಂಬಿಬಿಎಸ್ ಪದವಿ ಪಡೆಯಲಿಕ್ಕೆ ನಾಗ್ಪುರದ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶ ಪಡೆದೆ. ನಾಗ್ಪುರದ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎರಡು ವರ್ಷದ ಕಂಸಾಲಿಡೇಟೆಡ್ ಎಂಬಿಬಿಎಸ್ ಕೋರ್ಸ್ ಪೂರೈಸಿದ ನಂತರ, ೧೯೬೨ ರಲ್ಲಿ ಎಂ. ಡಿ. ಜನರಲ್ ಮೆಡಿಸಿನ್‌ನಲ್ಲಿಯೂ ಪ್ರವೇಶವನ್ನು ಪಡೆದೆ. ೧೯೬೫ರಲ್ಲಿ ಪದವಿಯನ್ನು ಪೂರೈಸಿ ಅಲ್ಲಿಯೆ ಉಪನ್ಯಾಸಕನಾಗಿ ನಾಲ್ಕು ತಿಂಗಳು ಸೇವೆ ಸಲ್ಲಿಸಿದೆ.

**ಸಂದರ್ಶಕ:** ತಾವು ೧೯೬೬ರಲ್ಲಿ ಬೆಳಗಾವಿಗೆ ಬಂದಾಗ ಇಲ್ಲಿನ ಕನ್ನಡ ವಾತಾವರಣ ಹೇಗಿತ್ತು?

**ಡಾ. ರಾಜಶೇಖರ:** ೧೯೬೬ರಲ್ಲಿ ನಾನು ಮೆಡಿಸಿನ್ ವಿಭಾಗ ಸೇರಿದಾಗ ಜಿಲ್ಲಾ ಆಸ್ಪತ್ರೆಯಲ್ಲಿ ಬೋಧನೆಗಾಗಿ ಕೊಲ್ಲಾಟರೆಲ್ ಅಪಾಯಿಂಟ್ಮೆಂಟ್ ಕೂಡ ಆಯ್ತು. ಆ ಕಾಲದಲ್ಲಿ ಬೆಳಗಾವಿಯಲ್ಲಿ ಮರಾಠಿಗರ ಪ್ರಭಾವ ಅತಿ ಹೆಚ್ಚಾಗಿತ್ತು. ಬೆಳಗಾವಿಯಲ್ಲಿ ಅಂದು ಕನ್ನಡ ಮಾತನಾಡುವುದೇ ಕಷ್ಟವಾಗಿತ್ತು. ಹಳೆ ಮೈಸೂರು ಭಾಗದ ವಿದ್ಯಾರ್ಥಿಗಳು ಅಚ್ಚಕನ್ನಡ ಮಾತನಾಡುವವರು. ಬೆಳಗಾವಿಯ ಮಾರುತಿ ಗಲ್ಲಿ ಮುಂತಾದ ಕಡೆ ಸಾಮಾನು ಕೊಳ್ಳಲು ಹೋದಾಗ ಕನ್ನಡ ಮಾತನಾಡಿದ್ದಕ್ಕಾಗಿ ವಿದ್ಯಾರ್ಥಿಗಳನ್ನು ಬಡಿದಿದ್ದರು. ಭಾಷಾವಾರು ಪ್ರಾಂತ್ಯ ರಚನೆ ಸಂದರ್ಭದಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಹಠದಿಂದ, ಇಲ್ಲಿ ಕನ್ನಡವನ್ನು ಹತ್ತಿಕ್ಕುವಂತಹ ವಾತಾವರಣ ನಿರ್ಮಾಣವಾಗುತ್ತಿತ್ತು. ಅಷ್ಟೊತ್ತಿಗೆ ಆಗಲೇ ೧೯೬೪ರಲ್ಲಿ, ಕನ್ನಡ ಬಳಗವನ್ನು ಪ್ರಾರಂಭಿಸಲಾಗಿತ್ತು. ಅದಕ್ಕೆ ಡೀನ್ ಡಾ. ಜೀರಿಗೆ ಅವರು ಸಂಪೂರ್ಣವಾಗಿ ಸಹಕಾರ ನೀಡಿದ್ದರು. ಅಂದಿನ ವಿದ್ಯಾರ್ಥಿಗಳಾದಂತಹ ನಾಗರಾಜಗೌಡ, ಅಶೋಕ್ ಪೈ ಮುಂತಾದವರು ಕನ್ನಡ ಬಳಗಕ್ಕೆ ಒಬ್ಬ ಶಿಕ್ಷಕರನ್ನು ಕಾರ್ಯಾಧ್ಯಕ್ಷರನ್ನಾಗಿ ನೇಮಿಸಬೇಕೆಂದು ವಿನಂತಿಸಿದಾಗ ಡಾ. ಜೀರಿಗೆ ಅವರು ನನಗೆ ಆ ಜವಾಬ್ದಾರಿಯನ್ನು ವಹಿಸಿದರು.





**ಸಂದರ್ಶಕ:** ತಮಗೆ ಕನ್ನಡ ನಾಡು–ನುಡಿ–ಸಂಸ್ಕೃತಿಯ ಬಗ್ಗೆ ಆಸಕ್ತಿ ಹೇಗೆ ಮೂಡಿತು, ಇದಕ್ಕೆ ಕಾರಣರಾರು

**ಡಾ. ರಾಜಶೇಖರ:** ಈ ಪ್ರಶ್ನೆಯನ್ನು ಅನೇಕ ಬಾರಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿರುತ್ತೇನೆ. ಏಕೆಂದರೆ ನಮ್ಮ ತಂದೆ ಕೃಷಿ ಹಿನ್ನಲೆಯವರು, ಹೆಚ್ಚು ಓದಿದವರಲ್ಲ, ತಾಯಿಯೂ ಅನಕ್ಷರಸ್ತೆ. ನಮ್ಮ ಕುಟುಂಬದವರಾಗಲಿ, ಮಕ್ಕಳಾಗಲಿ, ಯಾರಿಗೂ ಕೂಡ ಸಾಹಿತ್ಯದಲ್ಲಿ ಒಲವು ಇಲ್ಲ. ಪ್ರಾಯಶಃ ನಾನು ಬೆಳಗಾವಿಗೆ ಬಂದ ನಂತರ, ಅದರಲ್ಲೂ ಕನ್ನಡ ಬಳಗದ ಸಹವಾಸದಿಂದಾಗಿ, ವಿದ್ಯಾರ್ಥಿಗಳ ಒಡನಾಟ, ಅವರ ಕನ್ನಡ ಪರವಾದ ನಿಲುವು ಉತ್ಸಾಹ ನೋಡಿ, ಆನಂತರ ಕನ್ನಡ ಬಳಗದ ವತಿಯಿಂದ ಆದ ಜನ ಸಂಪರ್ಕ ಅನೇಕ ಕನ್ನಡ ಹೋರಾಟಗಾರರು ಸಾಹಿತಿಗಳು ಮುಂತಾದವರ ಸಹವಾಸದಿಂದ ಕನ್ನಡ ನಾಡು ನುಡಿಯ ಬಗ್ಗೆ ಅದರ ಗತವೈಭವದ ಬಗ್ಗೆ ತಿಳುವಳಿಕೆ ಮೂಡಿ, ನಾನು ಕೂಡ ಈ ಕನ್ನಡದ ಚಟುವಟಿಕೆಗಳಲ್ಲಿ ಸಕ್ರಿಯನಾಗಿರಬೇಕೆಂದು ನಿರ್ಧರಿಸಿದೆ. ಅದರೊಟ್ಟಿಗೆ ನನ್ನ ಹಾಗೂ ಕನ್ನಡದ ನಂಟು ಕೂಡ ಗಟ್ಟಿಯಾಗಿ ಸಾಗಿತು ಅದು ಇಂದಿಗೂ ಸಹ ಮುಂದುವರೆದಿದೆ. ಬೆಳಗಾವಿಗೆ ಬಂದ ನಂತರ ಒಂದೇ ವರ್ಷದಲ್ಲಿ ಅಂದರೆ ೧೯೬೯ರಲ್ಲಿ ನನ್ನ ಮದುವೆ ಆಯಿತು. ಸಂಕೇಶ್ವರದ ಪಾಟೀಲ ಮನೆತನದ, ಶ್ರೀಮತಿ ಪಾರ್ವತಿದೇವಿ, ನನ್ನ ಮಡದಿ. ಈ ಮದುವೆಗೆ ಕಾರಣರಾದವರು, ನಾಗನೂರು ರುದ್ರಾಕ್ಷಿಮಠದ ಡಾ. ಶ್ರೀ ಶಿವಬಸವ ಮಹಾಸ್ವಾಮಿಗಳವರು. ಅವರ ಆಶೀರ್ವಾದ ಮತ್ತು ಪ್ರೇರಣೆಯಿಂದ ನಮ್ಮ ವಿವಾಹ ಮಹೋತ್ಸವ ಜರುಗಿತು. ಅಲ್ಲಿಂದ ಡಾ. ಶಿವಬಸವ ಮಹಾಸ್ವಾಮಿಗಳವರ ನಿಕಟ ಸಂಪರ್ಕ ದೊರೆಯಿತು. ಪೂಜ್ಯ ಸ್ವಾಮಿಗಳವರು ಮಹಾನ್ ಕಾಯಕಯೋಗಿಗಳು, ಅಷ್ಟೇ ಅಲ್ಲದೆ ಅಪ್ಪಟ ಕನ್ನಡ ಪ್ರೇಮಿಗಳು ಕೂಡ ಆಗಿದ್ದರು. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಒತ್ತಾಯದ ಮೇರೆಗೆ ರೂಪುಗೊಂಡ ಮಹಾಜನ್ ಆಯೋಗದ ಮುಂದೆ ಸಮರ್ಥವಾಗಿ ವಾದ ಮಂಡಿಸಿದವರು. ಅವರ ನಿಕಟ ಸಂಪರ್ಕದಿಂದ, ನನ್ನ ಕನ್ನಡದ ಆಸಕ್ತಿ ಇನ್ನಷ್ಟು ಹೆಚ್ಚಾಯಿತು.

**ಸಂದರ್ಶಕ:** ಬೆಳಗಾವಿಯ ಸೂಕ್ಷ್ಮ ಪ್ರದೇಶದಲ್ಲಿ ಕನ್ನಡ ವಾತಾವರಣ ನಿರ್ಮಿಸುವ ಸಂದರ್ಭದಲ್ಲಿ ಯಾವುದಾದರೂ ವಿಶೇಷ ಅನುಭವಗಳನ್ನು ಏನಾದರೂ ನೆನಪಿಸಿಕೊಳ್ಳಬಯಸುತ್ತೀರಾ

ಡಾ. ರಾಜಶೇಖರ: ಕನ್ನಡ ಬಳಗದ ವತಿಯಿಂದ ಸೆಪ್ಟೆಂಬರ್ ೧೯೬೮ರಲ್ಲಿ ವಿಶ್ವಗುರು ಬಸವಣ್ಣನವರ ಅಷ್ಟ ಶತಮಾನೋತ್ಸವ ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲಾಯಿತು. ಕನ್ನಡ ಬಳಗದ ಗೌರವಾಧ್ಯಕ್ಷರಾಗಿ ಡಾ. ಜೀರಿಗೆ ಅವರು, ಕಾರ್ಯಾಧ್ಯಕ್ಷನಾಗಿ ನಾನು ಅದರ ನೇತೃತ್ವವನ್ನು ವಹಿಸಿದ್ದೆವು. ಆ ಕಾರ್ಯಕ್ರಮಕ್ಕೆ ಧಾರವಾಡದ ತಪೋವನದ ಶ್ರೀಕುಮಾರ ಸ್ವಾಮಿಗಳು ಆಗಮಿಸಿ ಅದ್ಭುತ ಉಪನ್ಯಾಸವನ್ನು ನೀಡಿದರು. ಶ್ರೀ ಶಿವಬಸವ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವು ನೆರವೇರಿತು.




ಬೆಳಗಾವಿಯಲ್ಲಿದ್ದ ಅನೇಕ ಕನ್ನಡಪರ ಹೋರಾಟಗಾರರು ಒಂದು ವೇದಿಕೆಗಾಗಿ ಕಾಯುತ್ತಿದ್ದರು. ಕನ್ನಡ ಬಳಗ ಅಂತಹ ವೇದಿಕೆಯಾಗಿ ಪರಿಣಮಿಸಿತ್ತು. ಆ ಸಂದರ್ಭದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಜೊತೆಗೆ ಒಂದು ಭವ್ಯ ಪಥಸಂಚಲನವನ್ನು ಆಯೋಜಿಸಲಾಗಿತ್ತು. ಪ್ರಾಯಶ: ಬೆಳಗಾವಿಯ ಇತಿಹಾಸದಲ್ಲಿ ಕನ್ನಡದ ಕುರಿತಾದ ಮೊಟ್ಟಮೊದಲ ಬೃಹತ್ ಪಥಸಂಚಲನ ಇದಾಗಿತ್ತು. ಜೆ. ಎನ್. ಎಂ. ಸಿ. ಯಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ೩೭ ರೂಪಕ ವಾಹನಗಳು, ಅದರಲ್ಲಿ ಅನುಭವ ಮಂಟಪ, ಇತರೆ ಶರಣರ ವಚನಗಳ ಸಂದೇಶಗಳನ್ನು ಬಿತ್ತರಿಸಲಾಯಿತು. ಅಷ್ಟೇ ಅಲ್ಲದೆ ಕನ್ನಡ ನಾಡಿನ ಗತವೈಭವವನ್ನು ಸಾರುವ ವಿವಿಧ ಕಲಾಕೃತಿಗಳು, ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಸಂಗೊಳ್ಳಿ ರಾಯಣ್ಣ, ಮುಂತಾದವರ ಪ್ರತಿಕೃತಿಯುಳ್ಳ ರೂಪಕ ವಾಹನಗಳು ಗಮನ ಸೆಳೆದವು. ಇದರೊಟ್ಟಿಗೆ ಅಲಂಕೃತ ೧೦೧ ಜೋಡೆತ್ತುಗಳ ಮೆರವಣಿಗೆ ಶೋಭೆ ತಂದಿತಲ್ಲದೆ, ಬೆಳಗಾವಿಯ ಜನತೆಗೆ ಒಂದು ಹೊಸ ಅನುಭವವನ್ನೇ ನೀಡಿತು. ಈ ಮೆರವಣಿಗೆ ಸಂಚರಿಸಿದ್ದು ೬೦% ಮರಾಠಿ ಪ್ರಾಬಲ್ಯವುಳ್ಳ ಬೀದಿಗಳಲ್ಲಿ ಎಂಬುದು ಗಮನಾರ್ಹ. ಅಂದಿನ ಜನರಿಗೆ ಕನ್ನಡಕ್ಕೆ ಇಂತಹ ಗತವೈಭವ ಇರುವ ಬಗ್ಗೆ ಮಾಹಿತಿ ದೊರಕಿದ್ದು ಮಾತ್ರವಲ್ಲ, ಕನ್ನಡದ ಸಂಸ್ಕೃತಿಯ ಅನಾವರಣವೂ ಆಯಿತು. ಅಂದಿನಿಂದ ಹಿಡಿದು ಇಂದಿನವರೆಗೂ ನಮ್ಮ ಕನ್ನಡ ಬಳಗದ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಹಾಗೂ ಬಸವ ಜಯಂತಿ ಸಂದರ್ಭದಲ್ಲಿ ವಿಶೇಷ ರೂಪಕ ವಾಹನಗಳನ್ನು ವೈದ್ಯ ವಿದ್ಯಾರ್ಥಿಗಳೆ ತಯಾರಿಸಿ ಅದನ್ನು ನಗರಾದ್ಯಂತ ಕೊಂಡೆಯುತ್ತಾರೆ. ಅಷ್ಟು ಮಾತ್ರವಲ್ಲ ೧೯೬೭ರಲ್ಲಿ ಜೆ. ಎನ್. ಎಂ. ಸಿ. ಯ ನಾಲ್ಕು ಜನ ವಿದ್ಯಾರ್ಥಿಗಳು ನವದೆಹಲಿಗೆ ತೆರಳಿ ಬೆಳಗಾವಿ ಅಚ್ಚ ಕನ್ನಡದ ಪ್ರದೇಶವೆಂದು ವಾದ ಮಂಡಿಸಿರುವುದು ಐತಿಹಾಸಿಕ ಸಂಗತಿಯಾಗಿದೆ.

ಮುಂದೆ ೧೯೭೨ ಡಿಸೆಂಬರ್‌ನಲ್ಲಿ ಕನ್ನಡ ಬಳಗದ ದಶಮಾನೋತ್ಸವ ಕಾರ್ಯಕ್ರಮ ಜ್ಞಾನಪೀಠ ಪುರಸ್ಕೃತಡಾ. ಶಿವರಾಮ ಕಾರಂತರ ಸಮ್ಮುಖದಲ್ಲಿ ಅತ್ಯಂತ ಸಡಗರದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಈಗಾಗಲೇ ಕನ್ನಡ ಬಳಗವು ಕೈಗೊಂಡಿದ್ದ ಅನೇಕ ಕನ್ನಡಪರ ಚಟುವಟಿಕೆಗಳ ಬಗ್ಗೆ ಮರಾಠಿ ಭಾಷಿಕರಿಗೆ ಅಸಾಮಾಧಾನ ಇತ್ತು. ಹೀಗಾಗಿ ಈ ಸಂದರ್ಭದಲ್ಲಿ ನಡೆಸಿದ ಪಥಸಂಚಲನದಲ್ಲಿ ನಮ್ಮ ವಿದ್ಯಾರ್ಥಿಗಳತ್ತ, ನಮ್ಮ ರೂಪಕ ವಾಹನ ಕಲ್ಲು, ಸೋಡಾ ಬಾಟಲಿ, ಇತ್ಯಾದಿಗಳನ್ನು ಒಗೆದು ದೊಂಬಿ ಎಬ್ಬಿಸಿದರು. ಅದು ಮುಂದೆ ಕನ್ನಡ ಮತ್ತು ಮರಾಠಿ ಭಾಷಿಕರ ನಡುವೆ ದೊಡ್ಡಮಟ್ಟದ ಗಲಾಟೆಗಳು ನಡೆದು ಎರಡು ರಾಜ್ಯಗಳಲ್ಲಿ ಅನೇಕ ಹೋಟೆಲ್ಗಳು ಬಸ್ ಗಳನ್ನು ಸುಡಲಾಯಿತು. ಬೆಳಗಾವಿಯಲ್ಲಿ ಮೂರು ದಿನ ಕರ್ಫ್ಯೂ ಜಾರಿಯಲ್ಲಿತ್ತು. ದುಷ್ಕರ್ಮಿಗಳು ಜೆ. ಎನ್. ಎಂ. ಸಿ. ಯ ಕಟ್ಟಡವನ್ನು ಸುಡುವುದಾಗಿ ಬೆದರಿಕೆಯನ್ನು ಹಾಕಿದ್ದರು. ಆ ಸಂದರ್ಭದಲ್ಲಿ ನಾವೆಲ್ಲ ಶಿಕ್ಷಕರು, ಪೋಲೀಸರೊಡನೆ ಸರತಿಯಂತೆ ರಾತ್ರಿಯಿಡಿ ಲಾಠಿ ಹಿಡಿದು ನಮ್ಮ ವಿದ್ಯಾರ್ಥಿಗಳನ್ನು ಹಾಗೂ ಕಾಲೇಜು ಕಟ್ಟಡವನ್ನು ಕಾಯ್ದಿರುವ ನೆನಪು ಇನ್ನೂ ಹಸಿರಾಗಿದೆ.

**ಸಂದರ್ಶಕ:** ಕನ್ನಡ ತಮ್ಮ ಬದುಕಿನ ಮೇಲೆ ಯಾವ ರೀತಿಯಲ್ಲಿ ಪ್ರಭಾವ ಬೀರಿದೆ?

**ಡಾ. ರಾಜಶೇಖರ:** ಕನ್ನಡ ಭಾಷೆ ನಮ್ಮ ಮಾತೃಭಾಷೆ ಮಾತ್ರವಲ್ಲ ಅದು ನಮ್ಮ ಅನ್ನದ ಭಾಷೆಯು ಕೂಡ.

ಒಬ್ಬ ವೈದ್ಯನಾಗಿ ನಾನು ನನ್ನ ರೋಗಿಯೊಡನೆ ಅವರ ಮಾತೃಭಾಷೆಯಲ್ಲಿ ಮಾತನಾಡಿದಾಗ ಮಾತ್ರ ಸರಿಯಾಗಿ ರೋಗ ನಿರ್ಣಯಿಸಿ ಅಗತ್ಯ ಚಿಕಿತ್ಸೆಯನ್ನು ನೀಡಲು ಸಹಕಾರಿಯಾಗುತ್ತದೆ. ಅದೇ ರೀತಿಯಾಗಿ ವೈದ್ಯವಿದ್ಯಾರ್ಥಿಗೂ ಕೂಡ ಕನ್ನಡ ಭಾಷೆಯ ಅರಿವು ಮತ್ತು ಬಳಕೆ ಅತ್ಯವಶ್ಯಕ. ಭಾಷೆ ಬಾರದೆ ಹೋದರೆ ವೈದ್ಯ ವಿಜ್ಞಾನವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ಆ ಸಂದರ್ಭದಲ್ಲಿಯೂ ಕೂಡ ಬೆಳಗಾವಿಯಲ್ಲಿ ಕಲಿಯಲಿಕ್ಕೆ ಬರುವ ಬರುವ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಕೆಲಸವನ್ನು ನಾವು ನಿರಂತರವಾಗಿ ಮಾಡುತ್ತಿದ್ದೇವೆ. ಅದರಿಂದಾಗಿ ಅವರಿಗೂ ಕೂಡ ರೋಗಿಗಳೊಡನೆ ಉತ್ತಮ ರೀತಿಯಲ್ಲಿ ಸಂಭಾಷಿಸಲು ಸಹಕಾರಿಯಾಗಿರುತ್ತದೆ. ಹೀಗೆ ನಮ್ಮ ಕನ್ನಡ ಬಳಗದ ಮುಖಾಂತರವಾಗಿ, ಕನ್ನಡ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಕ್ಕೆ ನನಗೆ ಅನೇಕ ಸಾಹಿತ್ಯ ಮಿತ್ರರ ಸಹವಾಸವು ದೊರೆಯಿತು. ಅದರಿಂದಾಗಿ ನನ್ನ ಸಾಮಾಜಿಕ ಜೀವನಕ್ಕೆ ಒಂದು ಹೊಸ ಆಯಾಮವೇ ದೊರೆಯಿತು. ವೃತ್ತಿಯಲ್ಲಿ ಪರಿಣಿತಿಯನ್ನು ಸಾಧಿಸಲಿಕ್ಕೂ ಕನ್ನಡ ನೆರವಾಯಿತು.

**ಸಂದರ್ಶಕ:** ಬೆಳಗಾವಿಯ ಜೆ. ಎನ್. ಮೆಡಿಕಲ್ ಕಾಲೇಜಿನಲ್ಲಿ, ಸುಮಾರು ೧೮ ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದೀರಿ. ಇಷ್ಟು ಸುದೀರ್ಘವಾಗಿ ಅದನ್ನು ಹೇಗೆ ನಿರ್ವಹಿಸಿದ್ದೀರಿ?

**ಡಾ. ರಾಜಶೇಖರ:** ೧೯೮೪ರಲ್ಲಿ ಅಂದಿನ ಜೆ. ಎನ್. ಎಂ. ಸಿ. ಯ ಪ್ರಾಂಶುಪಾಲರಾದ ಡಾ. ಸಂಗಪ್ಪ ದೇಸಾಯಿ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ನೇಮಕವಾದರು. ಹೆಚ್ಚು ಕಡಿಮೆ ಅದೇ ಸಮಯದಲ್ಲಿ, ಡಾ. ಪ್ರಭಾಕರ್ ಕೋರೆ ಅವರು ಕೆ. ಎಲ್. ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದರು. ವೈದ್ಯ ವೃತ್ತಿ, ವೈದ್ಯ ಶಿಕ್ಷಣವನ್ನು ಅತ್ಯಂತ ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಬಂದಿದ್ದ ನನ್ನನ್ನು ಈ ಹಿಂದೆ ಡಾ. ಜೀರಿಗೆ ಅವರು ಆ ನಂತರ ಡಾ. ದೇಸಾಯಿ ಅವರು ಗುರುತಿಸಿದ್ದರು. ಅಂತಿಯೇ ಅವರೆಲ್ಲರ ಹಾರೈಕೆಯಂತೆ ನಾನು ೧೯೮೫ ಜನವರಿಯಲ್ಲಿ ಜೆ. ಎನ್. ಎಂ. ಸಿ. ಯ ಪ್ರಾಂಶುಪಾಲನಾಗಿ ನೇಮಕಗೊಂಡೆ. ಆಗ ನನಗೆ ೪೫ ವಯಸ್ಸು; ನಮ್ಮ ಚೇರ್ಮನ್ನರಾದ ಡಾ. ಪ್ರಭಾಕರ್ ಕೋರೆಯವರಿಗೆ ೩೭ ವಯಸ್ಸು. ಇಬ್ಬರದು ಯುವ ಮನಸ್ಸು. ಹಾಗೆಯೇ ದೂರದೃಷ್ಟಿಕೋನದ ಕನಸುಗಳನ್ನು ಹೊತ್ತು ನಾವು, ಒಟ್ಟಿಗೆ ಹೆಜ್ಜೆ ಹಾಕಿದೆವು. ಆಗ ಇಡೀ ಕರ್ನಾಟಕದಲ್ಲಿ ಬೆಳಗಾವಿಯನ್ನು ಹೊರತುಪಡಿಸಿ ಮಣಿಪಾಲ, ದಾವಣಗೆರೆ, ಕಲ್ಬುರ್ಗಿಯಲ್ಲಿ ಮಾತ್ರ ಖಾಸಗಿ ವೈದ್ಯಕೀಯ ಕಾಲೇಜುಗಳಿದ್ದವು. ನಮಗೆ ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜ್ ಒಂದು ಮಾದರಿ ಇದ್ದಂತೆ. ಈ ನಿಟ್ಟಿನಲ್ಲಿ ಕಾಲೇಜನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡಬೇಕೆಂದು ಪಣತೊಟ್ಟು ಅದರಂತೆ ಕಾರ್ಯಪ್ರವೃತ್ತರಾದೆವು. ಸಾಮರ್ಥ್ಯ, ಕೆಲಸದ ವೇಗ, ದೂರದೃಷ್ಟಿ ಕೂಡಿದಾಗ ಯಾವುದೂ ಅಸಾಧ್ಯವಲ್ಲ. ಅದಕ್ಕೆ ಪೂರಕವಾಗಿ ನಮ್ಮ ಕೆ. ಎಲ್. ಇ. ಸಂಸ್ಥೆಯ ಕಾರ್ಯಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ನನಗೆ ಬೆನ್ನೆಲುಬಾಗಿ ನಿಂತಿದ್ದರಿಂದ ನನ್ನ ಕೆಲಸ ನಿರ್ವಹಿಸುವುದು ಸಾಧ್ಯವಾಯಿತು. ೧೯೭೦ಮತ್ತು ೮೦ರ ದಶಕದಲ್ಲಿ ನಾನು ಬೆಳಗಾವಿಯಲ್ಲಿ ಅತ್ಯಂತ ಬೇಡಿಕೆಯ ವೈದ್ಯನಾಗಿ ಬಿಡುವಿಲ್ಲದೆ ಕಾರ್ಯನಿರತನಾಗಿದ್ದೆ. ಆದರೆ ಪ್ರಾಂಶುಪಾಲನಾದ ಮೇಲೆ ನನ್ನ ಗಮನ ಸಂಪೂರ್ಣವಾಗಿ ವೈದ್ಯಕೀಯ ಕಾಲೇಜಿನ ಉನ್ನತಿಗೆ ಮೀಸಲಾಯಿತು.



ಒಬ್ಬ ಆಡಳಿತಗಾರನಿಗೆ ಇರಬೇಕಾದ ಸ್ವಚ್ಛ ಕೈ ಮತ್ತು ಸ್ವಚ್ಛ ಮನಸ್ಸು ಹಾಗೂ ಉನ್ನತಿಯನ್ನು ಸಾಧಿಸುವ ಹಂಬಲ ನನ್ನನ್ನು ಈ ಹುದ್ದೆಗೆ ಏರಿಸಿತ್ತು. ಅಂದಿನಿಂದ ನನಗೆ ವೈಯಕ್ತಿಕ ಬದುಕೆಂಬುದೇ ಇಲ್ಲವಾಯಿತು; ಏನಿದ್ದರೂ ಕಾಲೇಜು ಮತ್ತು ಆಸ್ಪತ್ರೆ ಮಾತ್ರ. ಹಾಗಿದ್ದಾಗ ಮಾತ್ರ ನಾವು ಈ ಹುದ್ದೆಗೆ ನ್ಯಾಯ ದೊರಕಿಸಿ ಕೊಡಬಹುದು. ನನ್ನ ಅವಧಿಯಲ್ಲಿ ೮ ವಿಭಾಗಗಳಿದ್ದ ಸ್ನಾತಕೋತ್ತರ ೨೨ಕ್ಕೆ ಏರಿತು; ೫೦ರಷ್ಟು ಇದ್ದ ಸಿಬ್ಬಂದಿ ವಸತಿ ನಿಲಯಗಳ ಸಂಖ್ಯೆ ೨೨೫ ದಾಟಿತು; ೩ರಷ್ಟಿದ್ದ ಹಾಸ್ಟೆಲ್ ೭ಕ್ಕೇರಿತು. ಅದೇ ಸಂದರ್ಭದಲ್ಲಿ ಭವ್ಯವಾದ ಡಾ. ಬಿ. ಎಸ್. ಜೀರಿಗೆ ಸಭಾಂಗಣ, ೧೨೦೦ ಹಾಸಿಗೆ ಸಾಮರ್ಥ್ಯದ ಕೆ. ಎಲ್. ಇ. ಆಸ್ಪತ್ರೆ, ಹೀಗೆ ೧೯೮೫ ರಿಂದ ೨೦೦೨ರ ನನ್ನ ಅವಧಿಯೊಳಗೆ ಒಟ್ಟು ೧೫೦ ಕೋಟಿಗೂ ಹೆಚ್ಚು ಮೂಲಸೌಕರ್ಯ ಅಭಿವೃದ್ಧಿಯಾಯಿತು.

**ಸಂದರ್ಶಕ:** ಪ್ರಸ್ತುತ ಜಾಗತೀಕರಣ ಹಾಗೂ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ನಮ್ಮ ಸಂಸ್ಕೃತಿ ಅಳಿವು ಉಳಿವಿನ ಪ್ರಶ್ನೆ ಎದುರಾಗಿದೆ. ವ್ಯಕ್ತಿಯ ಬದುಕಿಗೆ ಸಂಸ್ಕೃತಿಯ ಅಗತ್ಯತೆಯ ಬಗ್ಗೆ ತಮ್ಮ ನಿಲುವು ಏನು

**ಡಾ. ರಾಜಶೇಖರ:** ಹಿಂದೆಂದಿಗಿಂತಲೂ ಈಗ ಸಾಂಸ್ಕೃತಿಕ ಆಲೋಚನೆಗಳು ನಮಗೆ ಅತ್ಯಂತ ಅವಶ್ಯಕವಾಗಿದೆ. ೧೯೯೧ ರಲ್ಲಿ ದೇಶ ಆರ್ಥಿಕವಾಗಿ ಬಹಳಷ್ಟು ಪ್ರಗತಿಯನ್ನು ಸಾಧಿಸಿತು ನಿಜ, ಸಾಂಸ್ಕೃತಿಕವಾಗಿ ನಮ್ಮ ಅಧೋಗತಿಯೂ ಅಲ್ಲಿಂದಲೇ ಪ್ರಾರಂಭವಾಯಿತು. ಇದು ಕೇವಲ ಒಂದು ರಂಗದಲ್ಲಿ ಮಾತ್ರವಲ್ಲ ಎಲ್ಲಾ ರಂಗದಲ್ಲಿಯೂ ಅನ್ವಯಿಸುತ್ತದೆ. ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸಂಬಂಧ ಕೇವಲ ಒಂದು ವ್ಯವಹಾರಿಕ ಸಂಬಂಧವಾಗಿ ಮಾರ್ಪಟ್ಟಿದೆ. ಇದು ನಿಜವಾದ ದುರಂತ. ಅಂದು ವಿದ್ಯಾರ್ಥಿಗಳಾಗಿ ಅವರ ಮಿತಿಯನ್ನು ಅವರು ಅರಿತಿದ್ದರು, ಶಿಕ್ಷಕರಾಗಿ ನಾವು ನಮ್ಮ ಜವಾಬ್ದಾರಿಯನ್ನು ಅರಿತಿದ್ದೆವು. ಆದರೆ ಈಗ ಇವೆರಡೂ ಇಲ್ಲದಂತೆ ಆಗಿದೆ. ವಿಪರೀತ ಹಣ ಕೈಯಲ್ಲಿ ಓಡಾಡುತ್ತಿರುವ ಈ ಸಂಧರ್ಭದಲ್ಲಿ, ಕಷ್ಟಪಡುವ ಪ್ರವೃತ್ತಿಯೇ ಇಲ್ಲವಾಗುತ್ತಿದೆ. ಒಬ್ಬ ವ್ಯಕ್ತಿ ಸಾಂಸ್ಕೃತಿಕವಾಗಿ ಅಧೋಗತಿಗೆ ಇಳಿದರೆ ಆತನೆಂದು ಉತ್ತಮ ಪ್ರಜೆಯಾಗಲಾರ, ವೈದ್ಯನಾಗಲಾರ.

**ಸಂದರ್ಶಕ:** ತಮ್ಮ ಬದುಕಿನಲ್ಲಿ ಆಧ್ಯಾತ್ಮಿಕತೆ ಅವಶ್ಯಕತೆಯನ್ನು ಹೇಗೆ ಮನಗಂಡಿದ್ದೀರಿ ಅದರ ಅವಶ್ಯಕತೆಯನ್ನು ಪ್ರಶ್ನಿಸುವವರಿಗೆ ತಮ್ಮ ಕಿವಿಮಾತು ಏನು

**ಡಾ. ರಾಜಶೇಖರ:** ಪ್ರತಿಯೊಬ್ಬ ವೈದ್ಯನಿಗೂ, ಆಧ್ಯಾತ್ಮಿಕತೆ ಜ್ಞಾನ ಅತ್ಯಗತ್ಯ. ಆಧ್ಯಾತ್ಮಿಕತೆ ಎಂಬುದು ಧರ್ಮವನ್ನು ಮೀರಿದ್ದು. ವಿಶ್ವ ಆರೋಗ್ಯ ಸಂಸ್ಥೆಯವರು ಆಧ್ಯಾತ್ಮಿಕ ಆರೋಗ್ಯವನ್ನು ಆರೋಗ್ಯದ ಹೊಸ ಆಯಾಮವಾಗಿ ಗುರುತಿಸಿದ್ದಾರೆ. ಬಹುತೇಕ ರೋಗಗಳಿಗೆ ಕಾರಣಗಳು ಇಂದಿಗೂ ಸಹ ತಿಳಿದುಬಂದಿಲ್ಲ. ಅಂತಹವಕ್ಕೆ ಇಡಿಯೋಪತಿಕ್ ಅಥವಾ ಸೈಕೋಸೊಮೆಟಿಕ್ ಇಲ್ನೆಸ್ ಎಂದು ನಾವು ಪಟ್ಟಿ ಮಾಡುತ್ತೇವೆ. ಆದರೆ ದೇಹ–ಮನಸ್ಸು–ಆತ್ಮ ಇವುಗಳನ್ನು ಅರ್ಥ ಮಾಡಿಕೊಂಡು ಅದನ್ನು ಸಮತೋಲದಿಂದ ಕಾಪಾಡುವುದೇ ಆಧ್ಯಾತ್ಮಿಕತೆ. ಕಳೆದ ಎರಡು ದಶಕಗಳಿಂದ ಈ ಕುರಿತಾಗಿ ಹೆಚ್ಚಿನ ಸಂಶೋಧನೆಗಳು ನಡೆದು ಈಗಾಗಲೇ ಸಾಕಷ್ಟು ವೈಜ್ಞಾನಿಕ ಪ್ರಬಂಧಗಳು ವೈದ್ಯಕೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ



ಹಿನ್ನಲೆಯಲ್ಲಿ೨೦೧೧ ರಿಂದ ನಾಗನೂರು ಶ್ರೀ ರುದ್ರಾಕ್ಷಿಮಠದಲ್ಲಿ ನಾನು ೫ ಲಕ್ಷ ರೂಪಾಯಿಗಳ ಒಂದು ದತ್ತಿಯನ್ನು ಸ್ಥಾಪಿಸಿ, ಪ್ರತಿ ವರ್ಷ ಆಧ್ಯಾತ್ಮಿಕತೆ ಮತ್ತು ಆರೋಗ್ಯದ ಕುರಿತಾಗಿ ಸಂಶೋಧನೆ ಕೈಗೊಳ್ಳುವ ಸಂಶೋಧಕರಿಗೆ "ಆತ್ಮ ಸ್ವಾಸ್ಥ್ಯ ಶ್ರೀ" ಎಂಬ ಪ್ರಶಸ್ತಿಯನ್ನು ರೂ. ೫೦,೦೦೦ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಈ ದತ್ತಿ ಅಡಿಯಲ್ಲಿ ನೀಡಲಾಗುತ್ತಾ ಬಂದಿದ್ದು, ಇಲ್ಲಿಯವರೆಗೆ ೧೪ ವಿಜ್ಞಾನಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕೆಲವು ವರ್ಷಗಳ ಹಿಂದೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾಗೆ ಪತ್ರ ಬರೆದು ದೇಹ–ಮನಸ್ಸು–ಆತ್ಮ–ಆಧ್ಯಾತ್ಮಿಕತೆ (Body-Mind-Soul-Spirituality) ಕುರಿತಾಗಿ ಸುಮಾರು ೩೦ ಗಂಟೆಗಳ ಪಠ್ಯವನ್ನು ತಯಾರಿಸಿ ಎಂ. ಸಿ. ಐ. ಗೆ ಕಳುಹಿಸಿಕೊಟ್ಟಿದ್ದೆ. ಅದನ್ನು ಎಂಬಿಬಿಎಸ್ ಪಠ್ಯದ ಒಂದು ಭಾಗವಾಗಿ ಮಾಡಬೇಕೆಂದು ನಾನು ವಿನಂತಿಯನ್ನು ಕೂಡ ಮಾಡಿದ್ದೆ. ಒಟ್ಟಾರೆಯಾಗಿ ಅಧ್ಯಾತ್ಮ ಇಲ್ಲವಾದರೆ ಒಬ್ಬ ಪರಿಪೂರ್ಣ ವೈದ್ಯ ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದೇ ನನ್ನ ನಂಬಿಕೆಯಾಗಿದೆ.

**ಸಂದರ್ಶಕ:** ತಮ್ಮ ೮೬ನೇ ವಯಸ್ಸಿನಲ್ಲಿಯೂ ಸಹ ನಮ್ಮ ಬತ್ತದೇ ಇರುವಂತಹ ಈ ಉತ್ಸಾಹದ ಗುಟ್ಟೇನು

**ಡಾ. ರಾಜಶೇಖರ:** ಉತ್ಸಾಹ ಜೀವನಕ್ಕೆ ಪ್ರಾಣವಿದ್ದಂತೆ. ಉತ್ಸಾಹವಿಲ್ಲದ ಜೀವನ ವ್ಯರ್ಥ. ನಾನೆಂದು ಕಾಯಕವೇ ಕೈಲಾಸ ಎಂಬ ಶರಣರ ವಾಣಿಯಂತೆ ಬದುಕಿದ್ದೇನೆ. ಇಂದಿಗೂ ಸಹ ಕೆಲಸವನ್ನು ಮಾಡುತ್ತಲೇ ನನ್ನ ಉತ್ಸಾಹವನ್ನು ಜೀವಂತವಾಗಿಡುತ್ತೇನೆ. ತಮ್ಮಂತಹ ಯುವ ಸ್ನೇಹಿತರೊಂದಿನ ಚರ್ಚೆ, ಕಲಿಯಬೇಕೆಂಬ ಹಂಬಲ, ಈ ವ್ಯವಸ್ಥೆ ಹೀಗೆ ಬಿಟ್ಟರೆ ಕೆಟ್ಟು ಹೋಗಿಬಿಡಬಹುದೆಂಬ ವೇದನೆ ನನ್ನನ್ನು ಸದಾ ಕಾರ್ಯಪ್ರವೃತ್ತವಾಗಿಸುತ್ತದೆ. ಇಂದಿಗೂ ಸಹ ನಾನು ಕನಿಷ್ಠ ೩ ಗಂಟೆಯಾದರೂ ಓದುತ್ತೇನೆ. ನನ್ನಲ್ಲಿ ಅಧ್ಯಯನದ ಹಂಬಲ ಹೆಚ್ಚುತ್ತಲೇ ಇದೆ. ಇಂದಿಗೂ ಸಹ ನಾನು ಗಂಟೆಗಟ್ಟಲೆ ವೈದ್ಯವಿಜ್ಞಾನ ಹಾಗೂ ಆಧ್ಯಾತ್ಮ ಕುರಿತಾಗಿ ಉಪನ್ಯಾಸವನ್ನು ನೀಡುತ್ತಿರುತ್ತೇನೆ. ವಯಸ್ಸಾಗುವಿಕೆಯಲ್ಲಿ ಅನೇಕ ರೀತಿಯಾದ ಆಯಾಮಗಳಿವೆ: ೧. ಕ್ರೋನಾಲಾಜಿಕಲ್ ಏಜಿಂಗ್ (Chronological Ageing) ಅಂದರೆ ನಮ್ಮ ಹುಟ್ಟಿದ ದಿನಾಂಕದಿಂದ ಅದು ನಿರ್ಣಯಸಲ್ಪಡುತ್ತದೆ; ೨. ಮೆಟಬಾಲಿಕ್ ಏಜಿಂಗ್ (Metabolic Ageing) ಅಂದರೆ ನಮ್ಮ ಶರೀರವನ್ನ ಸುಸ್ಥಿತಿಯಲ್ಲಿ ಇಡುವುದರ ಮುಖಾಂತರವಾಗಿ ಅದನ್ನು ನಿಯಂತ್ರಿಸಬಹುದು. ೩. ಸೈಕಲಾಜಿಕಲ್ ಏಜಿಂಗ್ (Psycological Ageing), ಇದು ನೇರವಾಗಿ ನಮ್ಮ ಮನಸ್ಸಿಗೆ ಹಾಗೂ ಆತ್ಮಕ್ಕೆ ಸಂಬಂಧಿಸಿದಾಗಿದೆ. ಯಾರು ನಿರಂತರವಾಗಿ ಕ್ರಿಯಾಶೀಲವಾಗಿರುತ್ತಾರೋ ಅವರಿಗೆ ವಯಸ್ಸು ಎಂಬುದು ಕೇವಲ ಒಂದು ಸಂಖ್ಯೆ ಮಾತ್ರ.

**ಸಂದರ್ಶಕ:** ಪ್ರಸ್ತುತ ದಿನಮಾನದ ವೈದ್ಯರಿಗೆ/ ವೈದ್ಯ ವಿಧ್ಯಾರ್ಥಿಗಳಿಗೆ ತಮ್ಮ ಸಂದೇಶವೇನು

**ಡಾ. ರಾಜಶೇಖರ:** ವೈದ್ಯಕೀಯ ವೃತ್ತಿಯಲ್ಲಿನ ವೃತ್ತಿಗೌರವ ಇವತ್ತು ವ್ಯಾಪಾರಿಕರಣದ ದುಸ್ಥಿತಿಗೆ ಒಳಗಾಗಿರುವುದು ಅತ್ಯಂತ ಕಳವಳಕಾರಿಯಾದ ಅಂಶ. ವೈದ್ಯೋ ನಾರಾಯಣೋ ಹರಿ: ಎಂಬುದು ಕೇವಲ ಓದಿನ ಮಾತಾಗಿದೆ. ನಿಜವಾಗಿಯೂ ಇಂದಿನ ಜನಸಾಮಾನ್ಯರು ವೈದ್ಯರನ್ನು ದೇವರಂತೆ ನೋಡುವುದುವಿರಳವಾಗಿದೆ. ಅದಕ್ಕೆ ಇಂದಿನ ವೈದ್ಯರು/ ವಿದ್ಯಾರ್ಥಿಗಳು ವೈದ್ಯಕೀಯ ವೃತ್ತಿಗೌರವವನ್ನು ಕಾಪಾಡಿಕೊಳ್ಳದಿರುವುದೇ ಮುಖ್ಯವಾದ ಕಾರಣ. ಅದಕ್ಕೆ ನಾವು ಆಸ್ಪದ ಕೊಡಬಾರದು. ನಾವು ಎಷ್ಟೇ ಆಧುನಿಕ ವೈದ್ಯ ವಿಜ್ಞಾನವನ್ನು ಓದಿಕೊಂಡಿರಬಹುದು, ತಂತ್ರಜ್ಞಾನದ ಸವಲತ್ತನ್ನು ಪಡೆದಿರಬಹುದು, ಆದರೆ ಒಬ್ಬ ರೋಗಿಗೆ ನಮ್ಮ ಗುಣಮಟ್ಟದ ಸಮಯವನ್ನು ನೀಡಿ ರೋಗದ ಮೂಲವನ್ನು ಅರಿತು ಅದಕ್ಕೆ ಚಿಕಿತ್ಸೆಯನ್ನು ನೀಡದೆ ಹೋದರೆ ಆ ವೈದ್ಯಕೀಯ ವೃತ್ತಿಗೆ ಅರ್ಥವೇ ಇಲ್ಲ. ವೈದ್ಯಕೀಯ ವಿಜ್ಞಾನದ ಜೊತೆಗೆ ನಾವು ಮಾನವೀಯತೆಯನ್ನು ರೂಢಿಸಿಕೊಂಡರೆ, ನಾವು ಯಾಂತ್ರಿಕ ವೈದ್ಯರಿಂದ ಸಹಜ ವೈದ್ಯರಾಗಲು ಸಾಧ್ಯ. ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬೋಧಿಸುವ ವೈದ್ಯರು, ಜಗತ್ತಿಗೆ ಮಾನವೀಯ ಮೌಲ್ಯಗಳುಳ್ಳ ವೈದ್ಯರನ್ನು ತಯಾರಿಸಿ ಸಮಾಜಕ್ಕೆ ನೀಡುವ ಅಪ್ರತಿಮ ಕಾಯಕದವರು. ಬೋಧನೆಯಲ್ಲಿ ದೈವಿಕತೆ ಇದೆ. ಅದು ಹಾಗೆಯೇ ಮುಂದುವರೆಯಲಿ ಎಂಬುದೆ ನನ್ನ ಹಾರೈಕೆಯಾಗಿದೆ.

# ವೈದ್ಯ ಸಂಪದದ ನಿರಂತರ ಪ್ರಕಟಣೆಗಾಗಿ ಪೋಷಕರಾಗಿ ಸಹಕರಿಸಿದವರು
## (ರೂ. ೧೦,೦೦೦)

೧. ಡಾ. ಇಂದಿರಾ ದೊಡ್ಡಬಳ್ಳಾಪುರ
೨. ಡಾ. ಗಡ್ಡಿ ದಿವಾಕರ್, ಬಳ್ಳಾರಿ
೩. ಡಾ. ಸುರೇಶ ಸಗರದ, ರಾಯಚೂರು
೪. ಡಾ. ವೀಣಾ ಎನ್ ಸುಳ್ಯ
೫. ಡಾ. ಶಿವಾನಂದ ಕುಬಸದ, ಮುಧೋಳ
೬. ಡಾ. ಶುಭ್ರತಾ ಕೆ ಎಸ್, ಶಿವಮೊಗ್ಗ
೭. ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ
೮. ಡಾ. ಶಿವರಾಜ್ ಪಾಟೀಲ್, ಸಿಂಧನೂರು
೯. ಡಾ. ಶ್ರೀಪಾದ ಕುಲಕರ್ಣಿ, ಶಿಕಾರಿಪುರ
೧೦. ಡಾ. ಬಿ ಪ್ರಕಾಶ್ ಬೆಂಗಳೂರು
೧೧. ಡಾ. ದಯಾನಂದ ನೂಲಿ, ಚಿಕ್ಕೋಡಿ
೧೨. ಡಾ. ಪದ್ಮ ಪ್ರಕಾಶ್, ಬೆಂಗಳೂರು
೧೩. ಡಾ. ಉಷಾ ಎಂ ಜೆ, ದಾವಣಗೆರೆ
೧೪. ಡಾ. ಶ್ರೀಧರ್ ಕೆ ಆರ್, ಶಿವಮೊಗ್ಗ
೧೫. ಡಾ. ವಿನಯ್ ಬಾಬು, ದೊಡ್ಡಬಳ್ಳಾಪುರ
೧೬. ಡಾ. ವಿ. ವಿ. ಚಿನಿವಾಲರ್, ಗಂಗಾವತಿ
೧೭. ಡಾ. ಗೀತಾ, ದೊಡ್ಡಬಳ್ಳಾಪುರ
೧೮. ಡಾ. ಅರವಿಂದ ಪಟೇಲ್, ಬಳ್ಳಾರಿ
೧೯. ಡಾ. ಯೋಗಾನಂದ ರೆಡ್ಡಿ, ಬಳ್ಳಾರಿ
೨೦. ಡಾ. ಲಕ್ಷ್ಮೀ ಪ್ರಸಾದ, ಯೂ ಎಸ್ ಎ.
೨೧. ಡಾ. ಜ್ಯೋತಿ ಘೊಂಗಡೆಮಠ
೨೨. ಡಾ. ಪುಷ್ಪಲತಾ ದೊಡ್ಡಬಳ್ಳಾಪುರ
೨೩. ಡಾ. ಪವನ್ ಕುಮಾರ್ ಯೆಲಹಂಕ
೨೪. ಡಾ. ನಾರಾಯಣ್, ಕುವೈತ್
೨೫. ಡಾ. ವಸಂತ್ ದೊಡ್ಡಬಳ್ಳಾಪುರ
೨೬. ಡಾ. ಚಂದ್ರಮೌಳಿ ದೊಡ್ಡಬಳ್ಳಾಪುರ
೨೭. ಡಾ. ಸಂಜೀವ ಕುಲಕರ್ಣಿ, ಧಾರವಾಡ
೨೮. ಡಾ. ನಾ. ಸೋಮೇಶ್ವರ್
೨೯. ಡಾ. ಕಾಂತಾ ಜಾದವ್
೩೦. ಡಾ. ಸದಾಶಿವ ಪೋಲ್ನಯ
೩೧. ಡಾ. ಕಿರಣ ಪೇಟಕರ್
೩೨. ಡಾ. ದಿವ್ಯ ಕೆ. ಎನ್.

# ಚಿಣ್ಣರ ಲೋಕ



**ಡಾ. ಅರ್ಚನಾ ಮುರಳಿಧರನ್**
ವಿಭಾಗೀಯ ಸಂಪಾದಕರು



ಕ್ಯಾನ್ವಾಸನಲ್ಲಿ ಅಕ್ರಿಲಿಕ್
**ನೆಸ್ಸಾ ಎಸ್ಟಾನ್ಯಾಲ್**
೮ನೇ ತರಗತಿ



**ಶುಭದಾ ಶ್ರೀಶೈಲ ಚಿನಿವಾಲರ**
೯ನೇ ತರಗತಿ



**ರಾಜವೀರ ಚಿನಿವಾಲರ**
೯ ವರ್ಷ



**ನಮಿಷಾ ಎಲ್. ಕೃಷ್ಣಾ,** ೬ನೇ ತರಗತಿ



**ನಮ್ರತಾ ಎಲ್. ಕೃಷ್ಣಾ,** ೨ನೇ ತರಗತಿ

# ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು



**ಡಾ. ಶಾಂತಲಾ**
ವಿಭಾಗೀಯ ಸಂಪಾದಕರು






**ಡಾ. ಎಂ. ಎಸ್. ಖಾದಿ ಗಂಗಾವತಿ**




ಡಾ. ಎಂ. ಎಸ್. ಖಾದಿ ಗಂಗಾವತಿ



ಡಾ. ನಾಗಶ್ರೀ ನಲ್ಲಪೇಟ, ಯು. ಕೆ.








**ಡಾ. ವರ್ಷಾ ತಂದುರೆ**
ಜೆ. ಎಸ್. ಎಸ್. ಮೈಸೂರು





ನೂತನ ವರುಷದ ಹಾರ್ದಿಕ ಶುಭಾಶಯಗಳೊಂದಿಗೆ

## ತಾವರಗೇರಿ ನರ್ಸಿಂಗ್ ಹೋಮ್ ಪ್ರೈ. ಲಿ.

ಕಿತ್ತೂರು ಚೆನ್ನಮ್ಮ ಪಾರ್ಕ ಪೋಸ್ಟ್ ಆಫೀಸ್ ಹತ್ತಿರ

ಧಾರವಾಡ – ೫೮೦ ೦೦೮

ಆಸ್ಪತ್ರೆ: ೦೮೩೬–೨೭೪೭೬೦೩, ೨೪೪೮೩೫೯

ಮೊಬೈಲ್: ೯೧೧೦೬೦೮೨೧೬

